ಸಂಪುಟ: ೦೭/ ಸಂಚಿಕೆ: ೨೧೨/ ಮಂಗಳವಾರ ದಿನಾಂಕ : ೧೪-೧೦-೨೦೨೫/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

# ಬೆಳಗಿನ ಸೂರ್ಯೋದಯ


ಕನ್ನಡ ಪ್ರಾದೇಶಿಕ ದಿನಪತ್ರಿಕೆ

ಬೆಳಗಾವಿ ■ ಧಾರವಾಡ ■ ಬಾಗಲಕೋಟ ■ ವಿಜಯಪುರ ■ ಗದಗ ■ ಕೊಪ್ಪಳ ■ ಹಾವೇರಿ ■ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ ಕದಮ, Editor : GURURAJ IRAPPA. KADAM Cell : 9620099959

Volume : 07/ ISSUE : 212/TUESDAY Date : 14-10-2025/ RNI No. KARKAN/2019/77640/ Postal Reg No. PMG/KA/NK/BM/135/2025-27 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00

## ಹೆಚ್.ಡಿ ದೇವೇಗೌಡ ಆರೋಗ್ಯ ಸ್ಥಿರ ಆಸ್ಪತ್ರೆಯಿಂದ ಬಿಡುಗಡೆ



**ಬೆಂಗಳೂರು:** ಅನಾರೋಗ್ಯ ಹಿನ್ನೆಲೆ ಕಳೆದ ವಾರ ಆಸ್ಪತ್ರೆಗೆ ದಾಖಲಾಗಿದ್ದ ಮಾಜಿ ಪ್ರಧಾನಮಂತ್ರಿ ಹಾಗೂ ಜೆಡಿಎಸ್ ವರಿಷ್ಠ ಹೆಚ್‌ಡಿ ದೇವೇಗೌಡ ಅವರ ಆರೋಗ್ಯ ಇದೀಗ ಸ್ಥಿರವಾಗಿದ್ದು, ಸೋಮವಾರ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

ಕಳೆದ ಒಂದು ವಾರದಿಂದ ನಗರದ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ದೇವೇಗೌಡ ಅವರು, ವೈದ್ಯರ ಸಲಹೆ ಮೇರೆಗೆ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ.

ಜ್ವರ ಹಾಗೂ ಯೂರಿನ್ ಇನ್?ಫೆಕ್ಷನ್??ನಿಂದಾಗಿ ದೇವೇಗೌಡ ಅವರು, ಅಕ್ಟೋಬರ್ 6ರಂದು ಮಣಿಪಾಲ ಆಸ್ಪತ್ರೆಗೆ ದಾಖಲಾಗಿದ್ದರು. ಇದೀಗ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದ್ದು, ವೈದ್ಯರ ಸಲಹೆಯಂತೆ ಮುಂದಿನ ಕೆಲವು ದಿನಗಳು ಮನೆಯಲ್ಲಿ ವಿಶ್ರಾಂತಿ ಪಡೆಯಲಿದ್ದಾರೆ.

ದೇವೇಗಡ ಅವರಿಗೆ ಆಸ್ಪತ್ರೆಯಲ್ಲಿ ತಜ್ಞ ವೈದ್ಯರ ತಂಡ ಚಿಕಿತ್ಸೆ ನೀಡಿದ್ದು, ಇದೀಗ ಅವರ ಆರೋಗ್ಯ ಸ್ಥಿರವಗಿದೆ. ಆಸ್ಪತ್ರೆಯಿಂದ ಬಿಡುಗಡೆಯಾಗುತ್ತಿದ್ದಾರೆ ಎಂದು ಮಣಿಪಾಲ ಆಸ್ಪತ್ರೆ ಅಧಿಕಾರಿಗಳು ತಿಳಿಸಿದ್ದಾರೆ

# ಸರ್ಕಾರಿ ಸ್ಥಳದಲ್ಲಿ ಆರ್‌ಎಸ್‌ಎಸ್ ಚಟುವಟಿಕೆ ನಿರ್ಬಂಧ

## ತಮಿಳುನಾಡಿನ ಕ್ರಮ ಪರಿಶೀಲಿಸಲು ಮುಖ್ಯಕಾರ್ಯದರ್ಶಿಗೆ ಮುಖ್ಯಮಂತ್ರಿ ಸೂಚನೆ

**ಬೆಂಗಳೂರು:** ರಾಜ್ಯದ ಸರ್ಕಾರಿ ಸ್ಥಳಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಯಾವುದೇ ರೀತಿಯ ಚಟುವಟಿಕೆಗಳನ್ನು ನಡೆಸದಂತೆ ನಿಷೇಧ ಹೇರುವಂತೆ ಸಚಿವ ಪ್ರಿಯಾಂಕ್ ಖರ್ಗೆಯವರು ಒತ್ತಾಯಿಸಿದ್ದು, ಇದರ ಬೆನ್ನಲ್ಲೇ ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯದರ್ಶಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿದ್ದಾರೆ.

ರಾಜ್ಯದ ಯಾವುದೇ ಸರ್ಕಾರಿ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಸಂಘಟನೆ ಶಾಖೆ, ಸಾಂಘಿಕ್ ಅಥವಾ ಬೈಠಕ್ ಹೆಸರಿನಲ್ಲಿ ನಡೆಸುವ ಎಲ್ಲಾ ಬಗೆಯ ಚಟುವಟಿಕೆಗಳಿಗೆ ನಿಷೇಧ ಹೇರುವಂತೆ ಸಿದ್ದರಾಮಯ್ಯ ಅವರಿಗೆ ಪ್ರಿಯಾಂಕ್ ಖರ್ಗೆಯವರು ಅ.4ರಂದು ಪತ್ರ ಬರೆದಿದ್ದು, ಈ ವಿಚಾರ ಇದೀಗ ಬೆಳಕಿಗೆ ಬಂದಿದೆ. ಪತ್ರದಲ್ಲಿ ಸರ್ಕಾರಿ ಶಾಲೆ, ಅನುದಾನಿತ ಶಾಲೆ, ಮೈದಾನ, ಪಾರ್ಕ್, ಮುಜರಾಯಿ ದೇಗುಲ, ಪುರಾತತ್ವ ಇಲಾಖೆ ಸ್ಥಳ ಸೇರಿ ಯಾವುದೇ ಸರ್ಕಾರಿ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಶಾಖೆ, ಬೈಠಕ್ ಹೆಸರಿನಲ್ಲಿ ನಡೆಸುವ ಎಲ್ಲಾ ಬಗೆಯ ಚಟುವಟಿಕೆಗಳನ್ನು ನಿಷೇಧಿಸಬೇಕೆಂದು ಪ್ರಿಯಾಂಕ್ ಖರ್ಗೆಯವರು ಕೋರಿದ್ದಾರೆ. ಈ ಪತ್ರ ಇದೀಗ ವಿವಾದಕ್ಕೆ ಕಾರಣವಾಗಿದ್ದು, ಬಿಜೆಪಿ ನಾಯಕರ ಕಣ್ಣು ಕೆಂಪಗಾಗುವಂತೆ ಮಾಡಿದೆ.

ಮುಖ್ಯಮಂತ್ರಿಗಳಿಗೆ ತಾವು ಬರೆದಿರುವ ಪತ್ರದ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರಿಯಾಂಕ್ ಖರ್ಗೆಯವರು ಪೋಸ್ಟ್ ಮಾಡಿದ್ದು, ಸಂವಿಧಾನದ



ಮೌಲ್ಯಗಳನ್ನು ಗಾಳಿಗೆ ತೂರುವ ವಿಭಜಕ ಶಕ್ತಿಗಳು ತಲೆ ಎತ್ತಿದಾಗ ಅವುಗಳನ್ನು ನಿಗ್ರಹಿಸಲು ಸಂವಿಧಾನವೇ ನಮಗೆ ಶಕ್ತಿಯನ್ನು ಮತ್ತು ಅಧಿಕಾರವನ್ನು ನೀಡುತ್ತದೆ. ಆರ್‌ಎಸ್‌ಎಸ್ ಪ್ರತಿಪಾದಿಸುವ ಮೂಲಭೂತವಾದಿ ಸಿದ್ಧಾಂತದ ಪರಿಣಾಮದಿಂದಲೇ ಇಂದು ನ್ಯಾಯಾಂಗದ ಮುಖ್ಯಸ್ಥರ ಮೇಲೆ ಶೂ ಎಸೆಯುವಂತಹ ವಾತಾವರಣ ಸೃಷ್ಟಿಯಾಗಿದೆ, ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ನಿಂದಿಸುವ ಮನಸ್ಥಿತಿ ಬೆಳೆದಿದೆ. ಮಕ್ಕಳು ಹಾಗೂ ಯುವ ಸಮುದಾಯದ ಮೇಲೆ ನಾಕಾರಾತ್ಮ ಪರಿಣಾಮಗಳನ್ನು ಉಂಟುಮಾಡಲು ಯತ್ನಿಸುವ ಆರ್‌ಎಸ್‌ಎಸ್ ಪ್ರಯತ್ನವನ್ನು ತಡೆಯುವ, ಸಂವಿಧಾನದ ಆಶಯಗಳನ್ನು, ಏಕತೆ, ಸಮಾನತೆ, ಸಮಗ್ರತೆಯನ್ನು ಎತ್ತಿ ಹಿಡಿಯುವ ಉದ್ದೇಶದೊಂದಿಗೆ ಎಲ್ಲಾ ಸರ್ಕಾರಿ ಸಾರ್ವಜನಿಕ ಪ್ರದೇಶದಲ್ಲಿ ಆರ್‌ಎಸ್‌ಎಸ್ ನ ಚಟವಟಿಕೆಗಳನ್ನು ನಿರ್ಬಂಧಿಸುವಂತೆ ಮುಖ್ಯಮಂತ್ರಿಗಳಿಗೆ ಕೋರಿಕೆ ಸಿಲ್ಲಿಸಿದ್ದೇನೆಂದು ಹೇಳಿದ್ದಾರೆ. ವಿಶೇಷವೆಂದರೆ ಸಚಿವರ ಮನವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಕಾರಾತ್ಮಕವಾಗಿ ಸ್ಪಂದನೆ ನೀಡಿದ್ದಾರೆ. ಮುಖ್ಯಮಂತ್ರಿಗಳು ಮುಖ್ಯ ಕಾರ್ಯದರ್ಶಿಗಳಿಗೆ ಪರಿಶೀಲನೆ ನಡೆಸಿ ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ. ಇದರ ಬೆನ್ನಲ್ಲೇ ಬಿಜೆಪಿ ನಾಯಕರು, ವಿವಿಧ ಹಿಂದೂಪರ ಸಂಘಟನೆಗಳ ಮುಖಂಡರು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಪ್ಯಾಲೇಸ್ತೀನ್ ಪರವಾಗಿ ಪ್ರತಿಭಟನೆ ಮಾಡಿದರೆ ಪೊಲೀಸರಿಂದ ತಕ್ಷಣ ಬಂಧನವಾಗುತ್ತದೆ. ಆದರೆ ಆರ್‌ಎಸ್‌ಎಸ್ ಶಾಖೆಗಳನ್ನು ಸರ್ಕಾರಿ ಮೈದಾನಗಳಲ್ಲಿ ನಡೆಸಲು ಪೊಲೀಸರು ಅನುಮತಿ ನೀಡುತ್ತಾರೆ. ಇದೇಕೆ ಎಂಬುದನ್ನು ನಾನು ಪ್ರಶ್ನಿಸುತ್ತಿದ್ದೇನೆಂದು ಹೇಳಿದ್ದಾರೆ. ಇದೇ ವೇಳೆ ಉದಾಹರಣೆಗೆ ತಮಿಳುನಾಡನ್ನು ಉಲ್ಲೇಖಿಸಿದ ಅವರು, ತಮಿಳುನಾಡಿನಲ್ಲಿ ಶಾಲಾ-ಕಾಲೇಜುಗಳಲ್ಲಿ ಕಾರ್ಯಕ್ರಮ ನಡೆಸಲು ಹೋದ ಆರ್‌ಎಸ್‌ಎಸ್ ಸದಸ್ಯರ ಮೇಲೆ ಸರ್ಕಾರ ಕ್ರಮ ತೆಗೆದುಕೊಂಡಿದೆ. ಅವರನ್ನು ಬಂಧಿಸಿ ಕೇಸ್‌ಗಳನ್ನೂ ದಾಖಲಿಸಲಾಗಿದೆ. ಇದೇ ರೀತಿಯ ಕ್ರಮವನ್ನು ಕರ್ನಾಟಕದಲ್ಲಿಯೂ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಸರ್ಕಾರಿ ಜಾಗಗಳಲ್ಲಿ ಯಾವುದೇ ರೀತಿಯ ಕಾರ್ಯಕ್ರಮ ಮಾಡಬೇಕಾದರೆ ಮೊದಲು ಸರ್ಕಾರದ ಅನುಮತಿ ಪಡೆಯಬೇಕು. ಅನುಮತಿ ಪಡೆದು ಮಾಡಿದರೆ ನಮಗೂ ಯಾವುದೇ ಅಭ್ಯಂತರ ಇಲ್ಲ ಎಂದು ಹೇಳಿದರು.

## ಕಿತ್ತೂರು ಉತ್ಸವದ ಜ್ಯೋತಿಗೆ ಚಾಲನೆ



**ಬೆಂಗಳೂರು:** ಐತಿಹಾಸಿಕ ಕಿತ್ತೂರು ಉತ್ಸವದ ಜ್ಯೋತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು. ವಿಧಾನಸೌಧದ ಮುಂಭಾಗ ಸೋಮವಾರ ಆಯೋಜಿಸಿದ್ದ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜ್ಯೋತಿ ಬೆಳಗಿಸಿ, ಉತ್ಸವಕ್ಕೆ ಚಾಲನೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾಡಳಿತದಿಂದ ನಡೆದ ಕಾರ್ಯಕ್ರಮದಲ್ಲಿ ಚೆನ್ನಮ್ಮನ ಕಿತ್ತೂರು ಶಾಸಕ ಬಾಬಾಸಾಹೇಬ್ ಪಾಟೀಲ, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಮತ್ತಿತರರು ಉಪಸ್ಥಿತರಿದ್ದರು. ಕಿತ್ತೂರು ಉತ್ಸವಕ್ಕೆ ಚಾಲನೆ ನೀಡಿದ ಬಳಿಕ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ನಾವು ಆಗಾಗ್ಗೆ ಊಟಕ್ಕೆ ಸೇರುತ್ತೇವೆ. ಊಟಕ್ಕೆ ಸೇರುವುದೇ ದೊಡ್ಡ ಅಪರಾಧವೇ ಎಂದು ಪ್ರಶ್ನಿಸಿದರು. ನಾವು ಯಾವಾಗಲೂ ಭೇಟಿಯಾಗುತ್ತಲೇ ಇರುತ್ತೇವೆ. ನಮ್ಮ 'ಡಿನ್ನರ್ ಮೀಟಿಂಗ್'ಗೆ ವಿಶೇಷ ಅರ್ಥ ಕಲ್ಪಿಸುವುದನ್ನು ತಳ್ಳಿಹಾಕಿದರು. ಆದರೆ, ರಾಜ್ಯ ಸರ್ಕಾರವು ಎರಡೂವರೆ ವರ್ಷಗಳ ಆಡಳಿತವನ್ನು ಪೂರೈಸುತ್ತಿರುವ ಹೊತ್ತಿನಲ್ಲಿ ಮತ್ತು ನಾಯಕತ್ವ ಬದಲಾವಣೆಯ ಗುಸುಗುಸು ದಟ್ಟವಾಗಿರುವ ಸಂದರ್ಭದಲ್ಲಿ ಈ ಔತಣಕೂಟವನ್ನು ಕರೆದಿದ್ದಾರೆ.

### ಒಂದು ದಿನದಲ್ಲಿ ಸಾಮಾಜಿಕ ಸಮೀಕ್ಷಾ ವರದಿ ಕುರಿತು ಪ್ರಮಾಣ ಪತ್ರ ಸಲ್ಲಿಕೆ

## ಹೈಕೋರ್ಟ್‌ಗೆ ಸರ್ಕಾರದ ಭರವಸೆ

**ಬೆಂಗಳೂರು:** ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ನಡೆದಿದ್ದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಸಂಗ್ರಹಿಸುತ್ತಿರುವ ದತ್ತಾಂಶ ಸಂರಕ್ಷಣೆಯನ್ನು ಹೇಗೆ ಮಾಡಲಾಗುತ್ತಿದೆ ಎಂಬುದರ ಕುರಿತಂತೆ ವಿವರವಾದ ಪ್ರಮಾಣಪತ್ರವನ್ನು ಒಂದು ದಿನದ



ಒಳಗಾಗಿ ಸಲ್ಲಿಸಲಾಗುವುದು ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮಾಹಿತಿ ನೀಡಿದೆ.

ರಾಜ್ಯದಲ್ಲಿ ಜಾತಿ ಗಣತಿ ಪ್ರಶ್ನಿಸಿ, ಶಿವರಾಜ್ ಕಣಶೆಟ್ಟಿ ಮತ್ತಿತರರು ಹಾಗೂ ಜಾತಿಗಣತಿ ವರದಿ ಜಾರಿ ಕೋರಿ ಮುಖ್ಯಮಂತ್ರಿ ಚಂದ್ರು ಮತ್ತಿತರರು ಸಲ್ಲಿಸಿರುವ ಪ್ರತ್ಯೇಕ ನಾಲ್ಕು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರಿದ್ದ ನ್ಯಾಯಪೀಠಕ್ಕೆ ಸರ್ಕಾರದ ಪರ ವಕೀಲರು ಮಾಹಿತಿ ನೀಡಿದರು.

ವಿಚಾರಣೆ ವೇಳೆ, ಅರ್ಜಿದಾರರೊಬ್ಬರಾದ ಸಮಾಜ ಸಂಪರ್ಕ ವೇದಿಕೆ ಪರ ವಕೀಲರು, "ಕಳೆದ ಸೆಪ್ಟೆಂಬರ್ 25ರಂದು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮುಂದುವರಿಕೆಗೆ ಅನುಮತಿಸಿ, ಸಮೀಕ್ಷೆಯಲ್ಲಿ ಸಂಗ್ರಹಿಸುವ ದತ್ತಾಂಶ ಸಂರಕ್ಷಣೆಯ ಕುರಿತು ಪ್ರಮಾಣಪತ್ರ ಸಲ್ಲಿಸಬೇಕು ಎಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ನ್ಯಾಯಾಲಯ ನಿರ್ದೇಶಿಸಿತ್ತು. ಆದರೆ, ಇದುವರೆಗೆ ಸರ್ಕಾರವು ಯಾವುದೇ ರೀತಿಯ ಪ್ರಮಾಣ ಪತ್ರವನ್ನು ಸಲ್ಲಿಸಿಲ್ಲ" ಎಂದು ಪೀಠಕ್ಕೆ ತಿಳಿಸಿದರು. ಇದಕ್ಕೆ ನ್ಯಾಯಪೀಠ, "ಪ್ರಮಾಣಪತ್ರ ಸಲ್ಲಿಸಲು ಆಯೋಗಕ್ಕೆ ಒಂದು ವಾರ ಕಾಲಾವಕಾಶ ನೀಡಲಾಗಿತ್ತಲ್ಲವೇ ಪರಿಶೀಲನೆ ನಡೆಸಿ, ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿ" ಎಂದು ತಿಳಿಸಿತು.

ಈ ವೇಳೆ ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರಾದ ಅಡ್ವೋಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, "ಪ್ರಮಾಣಪತ್ರ ಸಲ್ಲಿಸಲು ಆಯೋಗಕ್ಕೆ ಹೈಕೋರ್ಟ್ ಒಂದು ದಿನ ಕಾಲಾವಕಾಶ ನೀಡಿತ್ತು. ಅದರಂತೆ ಅಫಿಡವಿಟ್ ಸಲ್ಲಿಸಲಾಗಿದೆ. ಅದರ ಪ್ರತಿಯನ್ನು ಅರ್ಜಿದಾರರಿಗೆ ಒದಗಿಸಲಾಗುವುದು" ಎಂದು ಪೀಠದ ಗಮನಕ್ಕೆ ತಂದರು.

ಮತ್ತೊಬ್ಬ ಸರ್ಕಾರಿ ವಕೀಲರು, "ಪ್ರಸ್ತುತ ಸಮೀಕ್ಷೆ ಪ್ರಶ್ನಿಸಿರುವ ಅರ್ಜಿಗಳನ್ನು ಡಿಸೆಂಬರ್ 5ಕ್ಕೆ ನಿಗದಿಪಡಿಸಲಾಗಿದೆ. ಅಂದೇ ಈ ಅರ್ಜಿಗಳನ್ನು ವಿಚಾರಣೆಗೆ ನಿಗದಿಪಡಿಸಬಹುದು" ಎಂದು ಪೀಠಕ್ಕೆ ಮನವಿ ಮಾಡಿದರು.

# ಶಾಸಕರ ಬೆಂಬಲವಿಲ್ಲದೆ ಯಾರೂ ಮುಖ್ಯಮಂತ್ರಿ ಆಗಲು ಸಾಧ್ಯವಿಲ್ಲ

**ಬಾಗಲಕೋಟೆ:** ಪಕ್ಷದ ಶಾಸಕರ ಬೆಂಬಲವಿಲ್ಲದೆ ಮತ್ತು ಕಾಂಗ್ರೆಸ್ ಹೈಕಮಾಂಡ್ ಆಶೀರ್ವಾದವಿಲ್ಲದೆ ಯಾರೂ ಸಿಎಂ ಆಗಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಹೇಳಿದ್ದಾರೆ.

ಕಾಂಗ್ರೆಸ್ ಸರ್ಕಾರ ನವೆಂಬರ್‌ನಲ್ಲಿ ಎರಡೂವರೆ ವರ್ಷ ಪೂರ್ಣಗೊಳಿಸಲಿದ್ದು, ಈ ವೇಳೆ ಮುಖ್ಯಮಂತ್ರಿ ಬದಲಾವಣೆ ಮತ್ತು ಸಚಿವ ಸಂಪುಟ ಪುನರ್‌ರಚನೆ ಬಗ್ಗೆ ಮಾತುಗಳು ಕೇಳಿಬರುತ್ತಿದ್ದು, ಇದನ್ನು ಕೆಲವರು "ನವೆಂಬರ್ ಕ್ರಾಂತಿ" ಎಂದು ಕರೆಯುತ್ತಿದ್ದಾರೆ.

ನಾನು ಅಂತಹ ವಿಷಯಗಳಿಗೆ ಪ್ರತಿಕ್ರಿಯಿಸಲು ಬಯಸುವುದಿಲ್ಲ. ಈ ಹೈಕಮಾಂಡ್ ನಿರ್ಧಾರವೇ ಅಂತಿಮ. ಶಾಸಕರು ಮತ್ತು ಹೈಕಮಾಂಡ್ ಎರಡೂ ಬಹಳ ಮುಖ್ಯ. ಶಾಸಕರ ಬೆಂಬಲವಿಲ್ಲದೆ ಯಾರೂ ಮುಖ್ಯಮಂತ್ರಿಯಾಗಲು ಸಾಧ್ಯವಿಲ್ಲ. ಶಾಸಕರ ಬೆಂಬಲದ ಜೊತೆಗೆ ಹೈಕಮಾಂಡ್‌ನ ಆಶೀರ್ವಾದವೂ ಅಗತ್ಯ ಎಂದು ಮುಖ್ಯಮಂತ್ರಿ ತಿಳಿಸಿದರು.

ಹೈಕಮಾಂಡ್ ನಿರ್ಧಾರದ ಆಧಾರದ ಮೇಲೆ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ನಡೆಯಬಹುದು. ಇದಕ್ಕೆ ಶಾಸಕರ ಬೆಂಬಲದ ಅಗತ್ಯವಿಲ್ಲ ಎಂದು ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ನೀಡಿದ್ದ ಹೇಳಿಕೆಯ ಕುರಿತು ಕೇಳಿದ ಪ್ರಶ್ನೆಗೆ ಮುಖ್ಯಮಂತ್ರಿ ಈ ರೀತಿ ಪ್ರತಿಕ್ರಿಯೆ ನೀಡಿದರು. ನವೆಂಬರ್ ಕ್ರಾಂತಿಯ ಬಗ್ಗೆ ಕೇಳಿದಾಗ, "ಕ್ರಾಂತಿ, ಬ್ರಾಂತಿ ಎಲ್ಲಾ ಇಲ್ಲ. ಎಲ್ಲಾ ಭ್ರಮೆ" ಎಂದು ಹೇಳಿದರು. ಇನ್ನು ಸಿಎಂ ಆಯ್ಕೆಗೆ ಶಾಸಕರ ಬೆಂಬಲ ಬೇಡ, ಹೈಕಮಾಂಡ್ ತೀರ್ಮಾನ ಸಾಕು ಎಂಬ ಡಿಸಿಎಂ ಡಿ.ಕೆ ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯೆ



ನೀಡಿದ ಗೃಹ ಸಚಿವ ಪರಮೇಶ್ವರ ಅವರು, ನಮ್ಮಲ್ಲಿ ಒಂದು ನಿಯಮ ಇದೆ. ಒಂದು ಪಕ್ಷ ಆಯ್ಕೆ ಆದ ಮೇಲೆ ಸರ್ಕಾರ ಮಾಡುವಾಗ, ಸಿಎಲ್‌ಪಿ ಲೀಡರ್ ಅಂದರೆ ಮುಖ್ಯಮಂತ್ರಿಗಳ ನೇಮಕ ಮಾಡುವಾಗ ಶಾಸಕರ ಅಭಿಪ್ರಾಯ ಕೇಳಲು ಹೈಕಮಾಂಡ್‌ನಿಂದ ವೀಕ್ಷಕರು ಬರುತ್ತಾರೆ. ಅವರು ಶಾಸಕರ ಅಭಿಪ್ರಾಯ ಪಡೆದು, ಅದನ್ನು ಹೈಕಮಾಂಡ್‌ಗೆ ತಿಳಿಸುತ್ತಾರೆ. ಇಂತವರ ಪರ ಇಷ್ಟು ಜನ ಇದ್ದಾರೆ ಎಂದು ಹೇಳುತ್ತಾರೆ. ಯಾರಿಗೆ ಸಿಎಂ ಆಗುವ ಮೆಜಾರಿಟಿ ಬಂದಿದೆ ಎಂದು ಆ ನಂತರ ಹೆಸರು ಘೋಷಣೆ ಮಾಡುತ್ತಾರೆ ಎಂದರು.

ಸಿದ್ದರಾಮಯ್ಯ ಮೊದಲ ಬಾರಿ ಮತ್ತು ಎರಡನೇ ಬಾರಿ ಸಿಎಂ ಆದಾಗಲೂ ಇದೇ ರೀತಿಯ ಪ್ರಕ್ರಿಯೆ ನಡೆದಿದೆ. ಎಸ್.ಎಂ.ಕೃಷ್ಣ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದಾಗಲೂ ಅದೇ ಪ್ರಕ್ರಿಯೆಯನ್ನು ಅನುಸರಿಸಲಾಯಿತು ಎಂದು ಪರಮೇಶ್ವರು ಅವರು ತಿಳಿಸಿದರು.

"ಆದರೆ, ಶಾಸಕರ ಅಭಿಪ್ರಾಯ ಅಗತ್ಯವಿಲ್ಲ ಎಂದು ಹೈಕಮಾಂಡ್ ಹೇಳಿದರೆ, ಅದು ಅವರಿಗೆ ಬಿಟ್ಟ ವಿಚಾರ. ಅದು ಅವರ ನಿರ್ಧಾರ. ಎಲ್ಲರೂ ಹೈಕಮಾಂಡ್ ನಿರ್ಧಾರಕ್ಕೆ ಬದ್ಧರಾಗಿರುತ್ತಾರೆ" ಎಂದು ಅವರು ಹೇಳಿದರು.

# ಬೆಳಗಾವಿ ಡಿಸಿಸಿ ಬ್ಯಾಂಕ್ ಕದನ

## 9 ಮಂದಿ ಅವಿರೋಧ ಆಯ್ಕೆ, 7 ಕ್ಷೇತ್ರಗಳಲ್ಲಿ ಚುನಾವಣೆ

**ಬೆಳಗಾವಿ:** ತೀವ್ರ ಕುತೂಹಲ ಕೆರಳಿಸಿರುವ ಬೆಳಗಾವಿ ಡಿಸಿಸಿ ಬ್ಯಾಂಕ್? ಚುನಾವಣೆ ರಂಗೇರಿದ್ದು, 9 ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆದಿದ್ದರೆ, ಉಳಿದ 7 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದ್ದ ಸೋಮವಾರ 5 ಸ್ಥಾನಗಳಿಗೆ ನಾಮಪತ್ರ ಸಲ್ಲಿಸಿದ್ದ ಹಲವು ಅಭ್ಯರ್ಥಿಗಳು ನಾಮಪತ್ರ ವಾಪಸ್ ಪಡೆದಿದ್ದರಿಂದ ಐವರು ಅವಿರೋಧ ಆಯ್ಕೆ ಘೋಷಣೆ ಆಯಿತು.

ಇಡೀ ರಾಜ್ಯದ ಗಮನ ಸೆಳೆದಿರುವ ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಚುನಾವಣೆಯಲ್ಲಿ ಚಿಕ್ಕೋಡಿ ತಾಲೂಕಿನಿಂದ ಗಣೇಶ ಹುಕ್ಕೇರಿ, ಗೋಕಾಕ್‌ನಲ್ಲಿ ಅಮರನಾಥ್ ಜಾರಕಿಹೊಳಿ, ಸವದತ್ತಿಯಲ್ಲಿ ವಿರೂಪಾಕ್ಷ ಮಾಮನಿ, ಯರಗಟ್ಟಿಯಿಂದ ವಿಶ್ವಾಸ ವೈದ್ಯ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಈ ನಾಲ್ವರ ಅವಿರೋಧ ಆಯ್ಕೆ ಮೊನ್ನೆಯೇ ಖಚಿತವಾಗಿತ್ತು. ಇದರ ಜೊತೆಗೆ ಇಂದು ಇತರೆ ಕ್ಷೇತ್ರದಿಂದ ಚನ್ನರಾಜ ಹಟ್ಟಿಹೊಳಿ ವಿರುದ್ಧ ಸ್ಪರ್ಧಿಸಿದ್ದ ಅಭ್ಯರ್ಥಿಗಳು ತಮ್ಮ ಉಮೇದುವಾರಿಕೆ ಹಿಂಪಡೆದ ಹಿನ್ನೆಲೆಯಲ್ಲಿ ಚನ್ನರಾಜ ಅವರೂ ಅವಿರೋಧ ಆಯ್ಕೆಯಾಗಿದ್ದಾರೆ.

ಅದೇ ರೀತಿ, ಕಾಗವಾಡದಿಂದ ರಾಜು ಕಾಗೆ, ಖಾನಾಪುರದಿಂದ ಅರವಿಂದ ಪಾಟೀಲ, ಬೆಳಗಾವಿಯಲ್ಲಿ ರಾಹುಲ್ ಜಾರಕಿಹೊಳಿ ಹಾಗೂ ಮೂಡಲಗಿಯಲ್ಲಿ ನೀಲಕಂಠ ಕಪ್ಪಲಗುದ್ದಿ ಅವರ ವಿರುದ್ಧ ನಾಮಪತ್ರ ಸಲ್ಲಿಸಿದವರು ವಾಪಸ್ ಪಡೆದ ಹಿನ್ನೆಲೆಯಲ್ಲಿ ಈ ನಾಲ್ವರ ಅವಿರೋಧ ಆಯ್ಕೆ ನಿಶ್ಚಿತವಾಗಿದೆ. ಒಟ್ಟು ಅವಿರೋಧ ಆಯ್ಕೆ ಆದ 9 ಅಭ್ಯರ್ಥಿಗಳ ಪೈಕಿ 7 ಬಾಲಚಂದ್ರ ಜಾರಕಿಹೊಳಿ ಪೆನಲ್, ಇಬ್ಬರು ಸ್ವತಂತ್ರ ಅಭ್ಯರ್ಥಿಗಳಾಗಿದ್ದಾರೆ. ಅವಿರೋಧ ಆಯ್ಕೆಯಾದವರು ಆಗಮಿಸಿ ತಮ್ಮ



### ಕಣದಲ್ಲಿರುವ ಪ್ರಮುಖರು

**ಹುಕ್ಕೇರಿ:** ರಮೇಶ ಕತ್ತಿ-ರಾಜೇಂದ್ರ ಪಾಟೀಲ.
**ಅಥಣಿ:** ಲಕ್ಷ್ಮಣ ಸವದಿ-ಮಹೇಶ ಕುಮಠಳ್ಳಿ.
**ನಿಪ್ಪಾಣಿ:** ಅಣ್ಣಾಸಾಹೇಬ ಜೊಲ್ಲೆ-ಉತ್ತಮ ಪಾಟೀಲ.
**ಬೈಲಹೊಂಗಲ:** ಮಹಾಂತೇಶ ದೊಡ್ಡಗೌಡರ-ಡಾ.ವಿಶ್ವನಾಥ ಪಾಟೀಲ.
**ಕಿತ್ತೂರು:** ನಾನಾಸಾಹೇಬ ಪಾಟೀಲ-ವಿಕ್ರಮ್ ಇನಾಮದಾರ್,
**ರಾಮದುರ್ಗ:** ಮಲ್ಲಣ್ಣ ಯಾದವಾಡ-ಎಸ್.ಎಸ್. ಢವಣ.
**ರಾಯಬಾಗ:** ಅಪ್ಪಾಸಾಹೇಬ ಕುಲಗುಡೆ-ಬಸನಗೌಡ ಆಸಂಗಿ

ಪ್ರಮಾಣಪತ್ರವನ್ನು ಸ್ವೀಕರಿಸಿದರು. ಡಿಸಿಸಿ ಬ್ಯಾಂಕ್ ಮುಂದೆ ಗೆದ್ದವರ ಅಭಿಮಾನಿಗಳು ಗುಲಾಲು ಎರಚಿ ವಿಜಯೋತ್ಸವ ಆಚರಿಸಿದರು.

ಸೋಮವಾರ ಒಟ್ಟಾರೆ 20 ನಾಮಪತ್ರಗಳನ್ನು ವಾಪಸ್ ಪಡೆಯಲಾಗಿದೆ. ಇದರೊಂದಿಗೆ, 7 ತಾಲೂಕುಗಳಲ್ಲಿ ನಡೆಯಲಿರುವ ಚುನಾವಣಾ ಕಣದಲ್ಲಿ ಒಟ್ಟು 14 ಮಂದಿ ಸ್ಪರ್ಧಿಗಳಿದ್ದಾರೆ.

# ಪ್ರವಾಹ, ಅತಿವೃಷ್ಟಿ: ವಿಶೇಷ ಪ್ಯಾಕೇಜ್‌ಗೆ ಒತ್ತಾಯಿಸಿ ಕಲಬುರಗಿ ಬಂದ್

**ಕಲಬುರಗಿ:** ಪ್ರವಾಹ ಮತ್ತು ಅತಿವೃಷ್ಟಿಯ ಹಿನ್ನೆಲೆಯಲ್ಲಿ ಜಿಲ್ಲೆಗೆ ವಿಶೇಷ ಪ್ಯಾಕೇಜ್ ಮತ್ತು ಇತರ ರಿಯಾಯಿತಿಗೆ ಒತ್ತಾಯಿಸಿ ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ನೇತೃತ್ವದಲ್ಲಿ ಹಲವು ಸಂಘಟನೆಗಳು ಸೋಮವಾರ ಕಲಬುರಗಿ ಬಂದ್‌ಗೆ ಕರೆ ನೀಡಲಾಗಿತ್ತು.

ಭಾರೀ ಮಳೆಯಿಂದ ತೀವ್ರ ಬೆಳೆ ಹಾನಿಯಾಗಿದ್ದು, ಕಲಬುರಗಿ ಜಿಲ್ಲೆಯನ್ನು ತಕ್ಷಣವೇ 'ಹಸಿ ಬರಗಾಲ' ಪ್ರದೇಶವೆಂದು ಘೋಷಿಸಬೇಕು. ರೈತರ ಸಂಪೂರ್ಣ ಸಾಲ ಮನ್ನಾ ಮಾಡಬೇಕು ಎಂದು ಒತ್ತಾಯಿಸಿ ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ನೇತೃತ್ವದಲ್ಲಿ ರೈತ, ದಲಿತ, ಕನ್ನಡಪರ, ಮಹಿಳಾ ಪರ ಸಂಘಟನೆಗಳು ಇಂದು ಕಲಬುರಗಿಯನ್ನು ಬಂದ್ ಮಾಡಿ ಪ್ರತಿಭಟನೆ ನಡೆಸಿದವು.

ನಗರದ ಕೇಂದ್ರ ಬಸ್ ನಿಲ್ದಾಣದ ಬಳಿ ಬೆಳ್ಳಂಬೆಳ್ಳಗೆ ನೂರಾರು ರೈತರು ಜಮಾವಣೆಗೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದರು.

ಪ್ರತಿಭಟನಾಕಾರರು ಮೂರು ಬೇಡಿಕೆಗಳನ್ನು ಇಟ್ಟಿದ್ದಾರೆ. ಸಾಲ ಮನ್ನಾ, ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ನಿಧಿ(NDRF) ಅಡಿಯಲ್ಲಿ ಹಣ ಮತ್ತು ರೈತರಿಗೆ ಎಕರೆಗೆ 25,000 ರೂ. ಪರಿಹಾರ ನೀಡಬೇಕು ಎಂದು ರೈತ ನಾಯಕ ದಯಾನಂದ ಪಾಟೀಲ್ ಅವರು ಎಎನ್‌ಐಗೆ ತಿಳಿಸಿದ್ದಾರೆ.

ಇದಕ್ಕೂ ಮೊದಲು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್(RDPR) ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು, ಮಳೆ ಮತ್ತು ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಸ್ಥಳೀಯರು ಮತ್ತು ಸಂತ್ರಸ್ತ ಜನರ ಕುಂದುಕೊರತೆಗಳನ್ನು ಆಲಿಸಿದ್ದಾರೆ ಎಂದು RDPR ಇಲಾಖೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದರು. ಅಕಾಲಿಕ ಮಳೆಯಿಂದ ರೈತರ ಬೆಳೆಗಳಿಗೆ ಅಪಾರ ಹಾನಿಯಾಗಿದೆ. ಆದರೆ ಸರ್ಕಾರ ಹಾನಿಯನ್ನು ನಿರ್ಣಯಿಸಲು ಸಮೀಕ್ಷೆ ನಡೆಸುತ್ತಿದೆ ಮತ್ತು ಶೀಘ್ರವೇ ರೈತರಿಗೆ ಪರಿಹಾರ ನೀಡಲಾಗುವುದು ಎಂದು ಖರ್ಗೆ ಹೇಳಿದ್ದಾರೆ.



### ಬಸ್ ಇಲ್ಲದೆ ಪ್ರಯಾಣಿಕರ ಪರದಾಟ

ಬಂದ್ ಹಿನ್ನೆಲೆಯಲ್ಲಿ ಸೋಮವಾರ ಬೆಳಗ್ಗೆಯಿಂದಲೇ ಕಲಬುರಗಿಯಿಂದ ಬೇರೆ ಊರಿಗೆ ಪ್ರಯಾಣ ಮಾಡಲು ಬಸ್ ನಿಲ್ದಾಣಕ್ಕೆ ಆಗಮಿಸಿದ್ದ ಪ್ರಯಾಣಿಕರಿಗೆ ಬಂದ್ ಬಿಸಿ ತಟ್ಟಿದೆ. ಬಸ್‌ಗಾಗಿ ಕಾದು ಕಾದು ಸಾಕಾದ ಜನರು, ಖಾಸಗಿ ಬಸ್ ಸಹ ಸಿಗೋದಿಲ್ಲ ಎಂದು ವಾಪಸ್ ಮನೆಗಳತ್ತ ತೆರಳಿದರು.

# ನಟ, ಹಿರಿಯ ರಂಗಕರ್ಮಿ ರಾಜು ತಾಳಿಕೋಟೆ ನಿಧನ

**ಬೆಂಗಳೂರು:** ಹಿರಿಯ ರಂಗಕರ್ಮಿ, ಚಲನಚಿತ್ರ ನಟ ಮತ್ತು ಧಾರವಾಡ ರಂಗಾಯಣದ ನಿರ್ದೇಶಕ ರಾಜು ತಾಳಿಕೋಟೆ (59) ಅವರು ಸೋಮವಾರ ಹೃದಯಾಘಾತದಿಂದ ನಿಧನರಾದರು.

ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಚಿಕ್ಕಸಿಂದಗಿ ಗ್ರಾಮದ ಮೂಲದವರಾಗಿದ್ದ ರಾಜು ತಾಳಿಕೋಟಿಯವರ ಮೂಲ ಹೆಸರು ರಾಜೇಸಾಬ ಮಕ್ತುಮಸಾಬ್ ತಾಳಿಕೋಟೆ. ಪ್ರಸಕ್ತ ಇವರು ತಾಳಿಕೋಟೆ ನಗರದಲ್ಲಿ ವಾಸವಾಗಿದ್ದರು. ಅ.12ರಂದು ಉಡುಪಿ ಜಿಲ್ಲೆಯ ಹೆಬ್ರಿಯಲ್ಲಿ ನಡೆಯುತ್ತಿದ್ದ ಸಿನೆಮಾ ಶೂಟಿಂಗ್ ವೇಳೆ ಅವರಿಗೆ ಹೃದಯಾಘಾತ ಸಂಭವಿಸಿತ್ತು. ಬಳಿಕ ಮಣಿಪಾಲ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಸೋಮವಾರ ಸಂಜೆ



ಚಿಕಿತ್ಸೆ ಫಲಕಾರಿಯಾಗದೆ ನಿಧನರಾದರು ಎಂದು ತಿಳಿದು ಬಂದಿದೆ.

ರಾಜು ತಾಳಿಕೋಟೆ ಅವರು ಕೇವಲ ನಟನಾಗಿರದೆ, ತಾಳಿಕೋಟಿಯ ಪ್ರಸಿದ್ಧ 'ಖಾಸ್ಗತೇಶ್ವರ' ನಾಟಕ ಮಂಡಳಿಯ ಮಾಲಕರೂ ಆಗಿದ್ದರು. 'ಕಲಿಯುಗದ ಕುಡುಕ', 'ಕುಡುಕರ ಸಾಮ್ರಾಜ್ಯ', ಮತ್ತು 'ಅಸಲಿ ಕುಡುಕ' ಅವರ ಪ್ರಖ್ಯಾತ ನಾಟಕಗಳಾಗಿದ್ದು, ಈ ನಾಟಕಗಳ ಆಡಿಯೊ ಕ್ಯಾಸೆಟ್‌ಗಳನ್ನೂ ಬಿಡುಗಡೆ ಮಾಡಿದ್ದಾರೆ. ರಂಗಭೂಮಿಯಲ್ಲಿ ಅಪಾರ ಅನುಭವ ಪಡೆದ ನಂತರ ಅವರು ಕನ್ನಡ ಚಲನಚಿತ್ರ ರಂಗಕ್ಕೆ ಪ್ರವೇಶಿಸಿದರು. ಹೆಂಡ್ತಿ ಅಂದರೆ ಹೆಂಡತಿ, ಪಂಜಾಬಿ ಹೌಸ್, ಮನಸಾರೆ, ಪಂಚರಂಗಿ, ಪರಮಾತ್ಮ, ಲಿಫ್ಟ್ ಕೊಡ್ಲಾ, ಜಾಕಿ, ಸುಗ್ರೀವ, ಕಳ್ಳ ಮಳ್ಳ ಸುಳ್ಳ, ಭೀಮಾತೀರದಲ್ಲಿ ಸೇರಿದಂತೆ 35 ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿ ಪ್ರೇಕ್ಷಕರ ಗಮನ ಸೆಳೆದಿದ್ದರು.

**ಪ್ರಶಸ್ತಿಗಳು:** ರಾಜು ತಾಳಿಕೋಟೆ ಅವರಿಗೆ 2010ರಲ್ಲಿ ಸುವರ್ಣ ವಾಹಿನಿಯ ಬೆಸ್ಟ್ ಕಾಮಿಡಿ ಅವಾರ್ಡ್, 2011ರಲ್ಲಿ ಫಿಲ್ಮ್‌ಫೇರ್ ಅವಾರ್ಡ್, 2013ರಲ್ಲಿ ಬೆಸ್ಟ್ ಕಾಮಿಡಿಯನ್, 2015ರಲ್ಲಿ ರಾಜ್ಯೋತ್ಸವ ಚಿತ್ರ ಸಂಸ್ಥೆಯಲ್ಲಿ ಪಾಪಿಲರ್ ಅವಾರ್ಡ್ ಹಾಗೂ 2017ರಲ್ಲಿ ಕೊಲಂಬಿಯಾ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿಯನ್ನೂ ಪಡೆದಿದ್ದಾರೆ.

# ಸರ್ವ-ಧರ್ಮ ಮಹಾಸಂಗಮಕ್ಕೆ ಸಾಕ್ಷಿಯಾದ ಸರ್ವ ಜನಾಂಗ



**ರಬಕವಿ-ಬನಹಟ್ಟಿ:** ತಾಲೂಕಿನ ಬಂಡಿಗಣಿಯ ಬಸವಗೋಪಾಲ ನೀಲಮಾಣಿಕಮಠದಲ್ಲಿ ಸೋಮವಾರ ಮುಖ್ಯಮಂತ್ರಿ ಸಿದ್ಧರಾಮಯ್ಯ ನೇತೃತ್ವದಲ್ಲಿ ಜರುಗಿದ ಸರ್ವ-ಧರ್ಮ ಮಹಾಸಂಗಮದಿಂದ ಹೊಸ ಭಾಷ್ಯ ಬರೆಯುವಲ್ಲಿ ಕಾರಣವಾಗಿ ಹಿಂದು, ಇಸ್ಲಾಂ, ಜೈನ್, ಬೌದ್ಧ, ಪಾಸಿ ಸೇರಿದಂತೆ ಇತರೆ ಧರ್ಮಗಳ ಮುಖ್ಯ ಗುರುಗಳ ಸಮಾಗಮದೊಂದಿಗೆ 2 ಲಕ್ಷಕ್ಕೂ ಅಧಿಕ ಸರ್ವ ಜನಾಂಗ ಸೇರಿರುವದು ಇತಿಹಾಸ ಪುಟ ಸೇರಲು ಕಾರಣವಾಯಿತು.

ಇದೇ ಸಂದರ್ಭ ಮಠದ ರುವಾರಿ ಚಕ್ರವರ್ತಿ ದಾನೇಶ್ವರಶ್ರೀಗಳು ಮಾತನಾಡಿ, ಭಾರತೀಯ ಸಂವಿಧಾನವು ಧರ್ಮದ ಸ್ವಾತಂತ್ರ್ಯವನ್ನು ಮೂಲಭೂತ ಹಕ್ಕು ಎಂದು ಪರಿಗಣಿಸುತ್ತದೆ ಮತ್ತು ಜಾತ್ಯಾತೀತ ರಾಷ್ಟ್ರವೆಂದು ಘೋಷಿಸುತ್ತದೆ. ಇದರ ತಳಹದಿಯಲ್ಲಿ ಆಧುನಿಕ ದಿನಗಳಲ್ಲಿ ಸಮಾನತೆಯೊಂದಿಗೆ ಬದುಕು ಸಾರುವ ಉದ್ದೇಶದಿಂದ ಸಮಾವೇಶ ಯಶಸ್ವಿಗೊಂಡಿರುವದು ಸಂತಸವೆನಿಸುತ್ತದೆಯೆಂದರು. ಎಲ್ಲ ಧರ್ಮವೂ ನೈತಿಕತೆ, ಕರ್ತವ್ಯ ಹಾಗು ಸರಿಯಾದ ನಡುವಳಿಕೆಯ ಸಿದ್ಧಾಂತಗಳಿಂದ ನೆಲೆಸಿವೆ. ಯಾವದೇ ತಾರತಮ್ಯವೆಸಗದೆ ಸಮಾನತೆಯೊಂದಿಗಿನ ಬದುಕು ನಮ್ಮದಾಗಬೇಕೆಂದರು.ಸಿಎಂ ಸಿದ್ರಾಮಯ್ಯ ಸೇರಿದಂತೆ ಸಚಿವ ಆರ್.ಬಿ. ತಿಮ್ಮಾಪೂರ, ಮೇಲ್ಮನೆ ಸದಸ್ಯೆ ಉಮಾಶ್ರೀ, ಶಾಸಕ ವಿಜಯಾನಂದ ಕಾಶಪ್ಪನವರ, ಭೀಮಸೇನ ಚಿಮ್ಮನಕಟ್ಟಿ, ಎಸ್.ಜಿ. ನಂಜಯ್ಯನಮಠ, ಸಿದ್ದು ಕೊಣ್ಣೂರ, ಶಿವಾನಂದ ಹಿರೇಮಠ, ಭೀಮಪ್ಪ ತಳವಾರ, ಸಂಗಮೇಶ ಸೊರಗಾಂವಿ, ದುಂಡಪ್ಪ ಕರಿಗಾರ, ಬಸವರಾಜ ಕೊಕಟನೂರ ಸೇರಿದಂತೆ ವಿವಿಧ ಮಠಾಧೀಶರು ವೇದಿಕೆ ಮೇಲಿದ್ದರು.

# ದುಶ್ಚಟ ಮುಕ್ತ ಸಮಾಜ ನಿರ್ಮಾಣ ಜಾಗೃತಿ ಜಾಥಾ

**ಇಂಡಿ:** ಧರ್ಮಸ್ಥಳ ಸಂಘ ಕೇವಲ ಸಾಲ ಕೊಡುವುದಷ್ಟೇ ಅಲ್ಲದೆ ನೂರಾರು ಜನೋಪಯೋಗಿ ಯೋಜನೆ ಕೈಗೆತ್ತಿಕೊಂಡಿದೆ. ದುಶ್ಚಟ ಮುಕ್ತ ಸಮಾಜ ನಿರ್ಮಿಸಲು ಜನ ಜಾಗೃತಿ ವೇದಿಕೆ ನಿರ್ಣಯ ಮಾಡುತ್ತಿರುವದು ಶ್ಲಾಘನೀಯವಾಗಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲರು ಹೇಳಿದರು.

ಪಟ್ಟಣದ ಕಾಳಿಕಾ ದೇವಸ್ಥಾನದ ಆವರಣದಲ್ಲಿ ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆ ವಿಜಯಪುರ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ ಗಾಂಧಿ ಜಯಂತಿ ಸಂಭ್ರಮಾಚರಣೆ ಪ್ರಯುಕ್ತ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಬೃಹತ್ ಜನ ಜಾಗೃತಿ ಜಾಥಾ ಮತ್ತು ಸಮಾವೇಶ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸ್ವಾಸ್ಥ ಸಮಾಜವನ್ನು ನಿರ್ಮಾಣ ಮಾಡುವ ಮೂಲಕ ನಾಡಿನ ಕಲ್ಯಾಣದ ಆಶ್ರಯ ಹೊಂದಿರುವ ಸಂಸ್ಥೆಯು ಮಹಿಳಾ ಸಬಲೀಕರಣ, ವ್ಯಸನಮುಕ್ತ ಸಮಾಜ, ಆರೋಗ್ಯದ ಕಾಳಜಿ, ಪರಿಸರದ ಕಾಳಜಿ ದೇವಸ್ಥಾನಗಳ ರಕ್ಷಣೆ ಜೀರ್ಣೋದ್ದಾರಗಳ ಮೂಲಕ ಜಾತ್ಯತೀತವಾಗಿ ಧರ್ಮಾತೀತವಾಗಿ ಸೇವೆ ಸಲ್ಲಿಸುತ್ತಿರುವ ಸಂಸ್ಥೆ ಶ್ರೀ ಕ್ಷೇತ್ರ ಧರ್ಮಸ್ಥಳ ಸಂಸ್ಥೆ ಎಂದರು.

ಶಿರಶ್ಯಾಡದ ಶ್ರೀ ಅಭಿನವ ಮುರಗೇಂದ್ರ ಶಿವಾಚಾರ್ಯರರು ಮಾತನಾಡಿ ಧರ್ಮಸ್ಥಳ ಸಂಸ್ಥೆ ಶಿಕ್ಷಣ ನೀಡುವದರ ಜೊತೆಗೆ ಉತ್ತಮ ಸಂಸ್ಕಾರವನ್ನು ನೀಡುತ್ತ ಬಂದಿದೆ. ಮನುಷ್ಯರಿಗೆ ಒಳ್ಳೆಯ ನಡವಳಿಕೆ ಹಾಗೂ ಆಚಾರ ವಿಚಾರಕ್ಕಾಗಿ ವ್ಯಸನ ಮುಕ್ತ ಸಮಾಜಕ್ಕಾಗಿ ಮದ್ಯವರ್ಜನ ಶಿಬಿರ ಹಮ್ಮಿಕೊಂಡು



ಪಟ್ಟಣದ ಕಾಳಿಕಾ ದೇವಸ್ಥಾನದ ಅವರಣದಲ್ಲಿ ನಡೆದ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಬೃಹತ್ ಜನ ಜಾಗೃತಿ ಜಾಥಾ ಮತ್ತು ಸಮಾವೇಶ ಕಾರ್ಯಕ್ರಮವನ್ನು ಶಾಸಕ ಯಶವಂತರಾಯಗೌಡ ಪಾಟೀಲ ಉದ್ಘಾಟಿಸಿದರು.

ವ್ಯಸನಿಗಳನ್ನು ದುಶ್ಚಟದಿಂದ ಮುಕ್ತರಾಗಿಸುವ ಒಳ್ಳೆಯ ಕಾರ್ಯ ಶ್ಲಾಘನೀಯ ಎಂದರು.

ಕಂದಾಯ ಉಪವಿಬಾಗಾಧಿಕಾರಿ ಅನುರಾಧಾ ವಸ್ತ್ರದ ಮಾತನಾಡಿ ಕರ್ನಾಟಕದಲ್ಲಿ ಧರ್ಮಸ್ಥಳ ಸಂಘದಿಂದ 200 ಮಧ್ಯ ವರ್ಜನ ಶಿಬಿರಗಳನ್ನು ಮಾಡಿ ಒಂದು ವರೆ ಲಕ್ಷಕ್ಕೂ ಹೆಚ್ಚು ಜನರಿಗೆ ಮಧ್ಯಪಾನದಿಂದ ಮುಕ್ತ ಮಾಡಿರುವದು ಶ್ಲಾಘನೀಯ ಎಂದರು. ಅಧ್ಯಕ್ಷತೆ ವಹಿಸಿದ ನಿಂಬೆ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಅಶೋಕ ಅಲ್ಲಾಪುರ, ಧರ್ಮಸ್ಥಳ ಪ್ರಾದೇಶಿಕ ನಿರ್ದೇಶಕ ದಿನೇಶ ಪೂಜಾರಿ, ಜೆ.ಡಿ.ಎಸ್.ಧುರೀಣ ಬಿ.ಡಿ.ಪಾಟೀಲ, ಸಂತೋಷಕುಮಾರ, ಮಹಾಂತೇಶ ಬಿರಾದಾರ ಮಾತನಾಡಿದರು. ನವ ಜೀವನಕ್ಕೆ ಕಾಲಿಟ್ಟ ವ್ಯಸನದಿಂದ ಮುಕ್ತರಾದ ಬಸವರಾಜ ಬೊಳೊಗಾಂವ,ಸಾಹೇಬಗೌಡ ಪಾಟೀಲ ಮಾತನಾಡಿದರು.

ವೇದಿಕೆಯ ಮೇಲೆ ಪ್ರಕಾಶ ಬಿರಾದಾರ, ನಿಂಬೆ ಅಬಿವೃದ್ಧಿ ಮಂಡಳಿ ಅಧ್ಯಕ್ಷ ಭೀಮಣ್ಣ ಕವಲಗಿ, ರುದ್ರಪ್ಪ ಲಮಾಣಿ, ರಾಜೇಸಾಬ ನದಾಫ, ನಟರಾಜ ಎಲ್.ಎಂ, ಸರಸ್ವತಿ ರದ್ದಿ ಮತ್ತಿತರಿದ್ದರು. ಇದಕ್ಕೂ ಮೊದಲು ಪಟ್ಟಣದ ಉರ್ದು ಶಾಲೆಯಿಂದ ಕಾಳಿಕಾ ದೇವಸ್ಥಾನದ ವರೆಗೆ ಸುಮಾರು 2000 ಅಧಿಕ ಮಹಿಳೆಯರಿಂದ ಬೃಹತ್ ಜನ ಜಾಗೃತಿ ನಡೆಯಿತು.

## ವಿಜಯಜ್ಯೋತಿ ಯಾತ್ರೆ ಇಂದು ಗದಗ ಜಿಲ್ಲೆಗೆ

**ಗದಗ:** ಸ್ವಾತಂತ್ರ್ಯ ಹೋರಾಟದ ವೀರರಾಣಿ ಕಿತ್ತೂರು ಚನ್ನಮ್ಮನವರ ಗೌರವಾರ್ಥ ಪ್ರತಿ ವರ್ಷ ಅಕ್ಟೋಬರ್ 23, 24 ಹಾಗೂ 25 ರಂದು ಕಿತ್ತೂರಿನ ಕೋಟೆ ಆವರಣದಲ್ಲಿ ಕಿತ್ತೂರು ಉತ್ಸವವನ್ನು ಆಚರಿಸಲಾಗುತ್ತಿದೆ. ಉತ್ಸವದ ಪೂರ್ವಭಾವಿಯಾಗಿ ವಿಜಯಜ್ಯೋತಿ ಯಾತ್ರೆಯು ರಾಜ್ಯದ ವಿವಿಧ ಜಿಲ್ಲೆಗಳಿಗೆ ಸಂಚರಿಸುತ್ತಿದೆ. ಅಕ್ಟೋಬರ್ 14 ರಂದು ಹಾವೇರಿಯಿಂದ ಮಧ್ಯಾಹ್ನ 3.30 ಗಂಟೆಗೆ ಗದಗ ಜಿಲ್ಲೆಗೆ ವಿಜಯ ಜ್ಯೋತಿಯು ಆಗಮಿಸಲಿದೆ. ನಗರದ ಐ.ಬಿಯಲ್ಲಿ ವಿಜಯ ಜ್ಯೋತಿಯ ಪೂಜೆ ನೆರವೇರಲಿದೆ. ವಿಜಯಜ್ಯೋತಿ ಯಾತ್ರೆಯು ಮುಳಗುಂದ ನಾಕಾ ಮಾರ್ಗವಾಗಿ ಚೆನ್ನಮ್ಮ ವೃತ್ತಕ್ಕೆ ತಲುಪುವುದು. ಸಂಜೆ 5.00 ಗಂಟೆಗೆ ವಿಜಯ ಜ್ಯೋತಿಯ ಯಾತ್ರೆಯ ಬೀಳ್ಕೊಡುಗೆ ಜರುಗಲಿದ್ದು ವಿಜಯ ಜ್ಯೋತಿಯ ಯಾತ್ರೆಯು ಲಕ್ಕುಂಡಿ ಐತಿಹಾಸಿಕ ಸ್ಥಳ, ಕೊಪ್ಪಳ, ವಿಜಯನಗರ ಮಾರ್ಗವಾಗಿ ಹಂಪಿಗೆ ಸಂಚರಿಸಲಿದೆ. ಕನ್ನಡಾಭಿಮಾನಿಗಳು, ದೇಶಭಕ್ತರು ಸೇರಿದಂತೆ ಸಾರ್ವಜನಿಕರು ಯಾತ್ರೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಬಸವರಾಜ ಬಳ್ಳಾರಿ ತಿಳಿಸಿದ್ದಾರೆ.

## ನಾಳೆ ಪ್ರಚಾರ ಸಮಿತಿ ಪೂರ್ವಭಾವಿ ಸಭೆ

**ಬೆಳಗಾವಿ:** ಸ್ವಾತಂತ್ರ್ಯ ಹೋರಾಟದ ಬೆಳ್ಳಿಚುಕ್ಕಿ ವೀರರಾಣಿ ಕಿತ್ತೂರು ಚನ್ನಮ್ಮನವರ ಗೌರವಾರ್ಥವಾಗಿ ಇದೇ ಅಕ್ಟೋಬರ್ 23,24 ಹಾಗೂ 25ರಂದು ಕಿತ್ತೂರು ಉತ್ಸವ ಆಚರಿಸಲಾಗುತ್ತಿದ್ದು, ಉತ್ಸವದ ವ್ಯಾಪಕ ಪ್ರಚಾರಕ್ಕಾಗಿ ಪ್ರಚಾರ ಸಮಿತಿಯನ್ನು ರಚಿಸಲಾಗಿದೆ. ಸದರಿ ಪ್ರಚಾರ ಸಮಿತಿಯ ಪೂರ್ವಭಾವಿ ಸಭೆಯನ್ನು ದಿನಾಂಕ:15-10-2025 ರಂದು ಮುಂಜಾನೆ 11.30 ಗಂಟೆಗೆ ಡೊಂಬರಕೊಪ್ಪ ಪ್ರವಾಸಿ ಮಂದಿರದಲ್ಲಿ ಆಯೋಜಿಸಲಾಗಿರುತ್ತದೆ. ಸಮಿತಿಯ ಸರ್ವ ಸದಸ್ಯರು, ಕಿತ್ತೂರು ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರು ಸದರಿ ಸಭೆಗೆ ಹಾಜರಾಗಿ ಅಗತ್ಯ ಸಲಹೆ- ಸೂಚನೆಗಳನ್ನು ನೀಡಬೇಕು ಎಂದು ಕೋರಿದ್ದಾರೆ.

## ಇಂದು ನೀರು ವ್ಯತ್ಯಯ

**ಬೆಳಗಾವಿ:** ಜಿಲ್ಲೆಯ ತುಮ್ಮರಗುದ್ದಿ ಹತ್ತಿರ 1068 ಎಂ.ಎಂ. ಎಂ.ಎಸ್ ಕೊಳವೆಯಲ್ಲಿ, ಹಾಗೂ ರುಸ್ತಂಪುರ & ಪಾಶ್ಚಾಪೂರ ಹತ್ತಿರ 900 ಎಂ.ಎಂ ಪಿ.ಎಸ್.ಸಿ ಕೊಳವೆಯಲ್ಲಿ ಸೋರಿಕೆಯಾಗಿರುವುದರಿಂದ ನಿರ್ವಹಣಾ ಕಾರ್ಯ ತೆಗೆದುಕೊಂಡಿರುವದರಿಂದ ದಿನಾಂಕ 14-10-2025 ರಂದು ನಗರದ ಎಲ್ಲ ಭಾಗಗಳಲ್ಲಿ ನೀರು ಸರಬರಾಜು ಮಾಡುವಲ್ಲಿ ವ್ಯತ್ಯಯ ಉಂಟಾಗಬಹುದು.

ಪ್ರಾತ್ಯಕ್ಷಿಕ ವಲಯ ಸೇರಿದಂತೆ ಇಡೀ ಬೆಳಗಾವಿ ನಗರ, ನಗರದ ಎಲ್ಲಾ ಆಸ್ಪತ್ರೆಗಳು, ಬಲ್ಕ ಸರಬರಾಜಾಗುವ ಎಲ್ಲ ಕೈಗಾರಿಕೆಗಳು, ಕಂಟೋನಮೆಂಟ ಪ್ರದೇಶ, ಎಂಇಎಸ್, ಇಎಸ್‌ಆರ್‌ಪಿ, ಬುಡಾ ಮತ್ತು ಮಾರ್ಗಮಧ್ಯ ಹಳ್ಳಿಗಳಲ್ಲಿ ನೀರು ವ್ಯತ್ಯಯವಾಗಲಿದೆ ಎಂದು ತಿಳಿಸಿದ್ದಾರೆ.

## ಕಟ್ಟೀಮನಿಯವರ ಸಾಹಿತ್ಯ ಜನರ ನೋವಿನ ದನಿ



**ಯರಗಟ್ಟಿ:** ನೇರ ನಿಷ್ಠುರ ಮಾತು-ಕೃತಿಯ ಅಪರೂಪದ ಬರಹಗಾರ ಬಸವರಾಜ ಕಟ್ಟೀಮನಿಯವರ ಸಾಹಿತ್ಯವು ನಾಲ್ಕು ಗೋಡೆಗಳ ಮಧ್ಯೆ ಕುಳಿತು ಬರೆದ ಕಾಲ್ಪನಿಕ ಸಾಹಿತ್ಯವಾಗಿರದೆ ಜನರ ನಡುವೆ ಇದ್ದು, ಅವರ ನೋವು- ನಲಿವುಗಳಿಗೆ ಸ್ಪಂದಿಸಿದ ಮಾನವೀಯ ಸಾಹಿತ್ಯವಾಗಿದೆ ಎಂದು ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಸದಸ್ಯ ವಿಠಲ ದಳವಾಯಿಯವರು ಹೇಳಿದರು.

ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ ಹಾಗೂ ಪಟ್ಟಣದ ಶ್ರೀ ಸಿ.ಎಂ. ಮಾಮನಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಸಹಯೋಗದಲ್ಲಿ ಆಯೋಜಿಸಿದ 'ಕಟ್ಟೀಮನಿ ಕಥಿ ಹೇಳೂಣು' ಎಂಬ ಬಸವರಾಜ ಕಟ್ಟೀಮನಿ ಕಥೆಗಳನ್ನು ಹೇಳುವ ವಿನೂತನ ಸ್ಪರ್ಧೆಯನ್ನು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಟ್ಟೀಮನಿಯವರು ತಾವು ಕಂಡುಂಡ ನೋವುಗಳನ್ನು ಯಥಾವತ್ತಾಗಿ ಕಥೆ- ಕಾದಂಬರಿ ರೂಪದಲ್ಲಿ ಅಭಿವ್ಯಕ್ತಿಸಿದರು. ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿಗೆ ಭಾಜನರಾದ ಅವರ ಸಮಗ್ರ ಸಾಹಿತ್ಯ ಸಂಪುಟಗಳನ್ನು ಪ್ರತಿಷ್ಠಾನವು ರಿಯಾಯಿತಿ ದರದಲ್ಲಿ ಮಾರಾಟದ ವ್ಯವಸ್ಥೆ ಕಲ್ಪಿಸಿದ್ದು, ಓದುಗರ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಕಾಲೇಜಿನ ಹತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ಬಸವರಾಜ ಕಟ್ಟೀಮನಿಯವರ ಆಯ್ದ ಕಥೆಗಳನ್ನು ತಮ್ಮದೇ ಶೈಲಿಯಲ್ಲಿ ಹೇಳಿದರು. ಮಂಜುಳಾ ಆಲದಕಟ್ಟಿ, ಅಂಬಿಕಾ ಕುಂಬಾರ ಹಾಗೂ ಜ್ಯೋತಿ ಪಟ್ಟಣಶೆಟ್ಟಿ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನಗಳನ್ನು ಪಡೆದರು. ಮಹಾವಿದ್ಯಾಲಯದ ಪ್ರಾಂಶುಪಾಲರಾದ ಪ್ರೊ. ರಾಯನಗೌಡ ಮರಿಗೌಡರ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಯರಗಟ್ಟಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ತಮ್ಮಣ್ಣ ಕಾಮಣ್ಣವರ, ಬಸವರಾಜ ಪೂಜೇರ, ಉಮೇಶ್ವರ ಮರಗಾಲ, ಸಂಗಮೇಶ ಸೊಗಲದ ಮತ್ತು ಕಾಲೇಜಿನ ಪ್ರಾಧ್ಯಾಪಕರಾದ ಡಾ. ಸುನಂದಾ ಮಾದರ, ಶಂಕರ ಲಗಳಿ, ಶಿದ್ಲಿಂಗಪ್ಪ ಎಸ್.ಜಿ. ಹಾಗೂ ಡಾ. ರಾಜಶೇಖರ ಬಿರಾದಾರ ಉಪಸ್ಥಿತರಿದ್ದರು. ಉಪನ್ಯಾಸಕರಾದ ವೀರಭದ್ರಪ್ಪ ದಂಡಿನ ನಿರೂಪಿಸಿದರು. ಸ್ವಾತಿ ಬೇವಿನಕಟ್ಟಿ ಸ್ವಾಗತಿಸಿದರು. ದೈಹಿಕ ಶಿಕ್ಷಣ ನಿರ್ದೇಶಕ ಯಲ್ಲಪ್ಪ ಭರಮನ್ನವರ ವಂದಿಸಿದರು.



## ವಿಕಲಚೇತನ ಮಕ್ಕಳಿಗೆ ಸಲಕರಣೆ ವಿತರಣೆ

**ಗೋಕಾಕ:** ಶಾಲಾ ಶಿಕ್ಷಣ ಇಲಾಖೆಯಿಂದ ಗೋಕಾಕ ವಲಯದ ವಿಕಲಚೇತನ ಮಕ್ಕಳಿಗೆ ನೀಡಲಾದ ಸಾಧನ ಸಲಕರಣೆಗಳನ್ನು ಶಾಸಕ ರಮೇಶ ಜಾರಕಿಹೊಳಿ ತಮ್ಮ ಕಾರ್ಯಾಲಯದ ಆವರಣದಲ್ಲಿ ಸೋಮವಾರದಂದು ವಿತರಿಸಿದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯರಾದ ಟಿ ಆರ್ ಕಾಗಲ, ಎಮ್ ಎಲ್ ತೋಳಿನವರ, ಕ್ಷೇತ್ರ ಶಿಕ್ಷಣಾಧಿಕಾರಿ ಜಿ ಬಿ ಬಳಗಾರ, ಎಸ್ ವ್ಹಿ ಕುಲಕರ್ಣಿ, ಎಸ್ ಆರ್ ಕೊಂತಿ, ಐ ಬಿ ಸಂಪಗಾವಿ, ಎಚ್ ಎಚ್ ಕೌಜಗೇರಿ, ಟಿ ಯು ಹಿರಿಗಾರ ಹಾಗೂ ಬಿಆರ್‌ಪಿ ಮತ್ತು ಸಿಆರ್‌ಪಿಗಳು ಇದ್ದರು.

## ಪ್ರತಿ ಎಕರೆಗೆ 50 ಲಕ್ಷ ನಿಗದಿಪಡಿಲು ಒತ್ತಾಯ

**ಜಮಖಂಡಿ:** ರಾಜ್ಯ ಸರಕಾರ ಸಂಪುಟ ಸಭೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಮುಳಗಡೆ ಆಗಲಿರುವ ಜಮೀನುಗಳಿಗೆ ದರ ನಿಗದಿ ಮಾಡಿದರುವ ನಿರ್ಧಾರವನ್ನು ಸ್ವಾಗತಿಸುತ್ತೇವೆಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ತಾಲೂಕಾಧ್ಯಕ್ಷ ಹಣಮಂತ ಮಗದುಮ್ ಹೇಳಿದರು.

ನಗರದಲ್ಲಿ ರವಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೀರಾವರಿ ಜಮೀನಿಗೆ 40



ಲಕ್ಷ ಮತ್ತು ಒಣ ಬೇಸಾಯ ಜಮೀನಿಗೆ 30 ಲಕ್ಷ ದರ ನಿಗದಿ ಮಾಡಿದ್ದು ಕಡಿಮೆಯಾಗಲಿದೆ. ಪ್ರತಿ ಎಕರೆಗೆ ನೀರಾವರಿ ಜಮೀನಿಗೆ 50 ಲಕ್ಷ ಮತ್ತು ಒಣಬೇಸಾಯ ಜಮೀನಿಗೆ 40 ಲಕ್ಷ ಪರಿಹಾರ ನೀಡಿದಲ್ಲಿ ರೈತರು ನೆಮ್ಮದಿಯಾಗಿ ಜೀವನವನ್ನು ನಡೆಸಲು ಸಾಧ್ಯವಿದೆ ಎಂದರು.

ಬೇರೆ ಜಿಲ್ಲೆಗಳ ತಾಲೂಕಿನಲ್ಲಿ ಕೂಡ ರೈತರ ಜಮೀನಿನ ದರಗಳು ಹೆಚ್ಚಾಗಿದ್ದರಿಂದ ನಾವುಗಳು ಮುಳಗಡೆಯಾದ ಜಮೀನಿನ ರೈತರು ಕೇವಲ ಅರ್ಧದಷ್ಟು ಜಮೀನು ಖರೀದಿಸಲು ಸಾಧ್ಯವಾಗಲಿದೆ. ನಮ್ಮ ಭಾಗದ ರೈತರು ನೂರಾರು ವರ್ಷಗಳಿಂದ ತಮ್ಮ ಜಮೀನಿನೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದು, ಜಮೀನು ಕಳೆದು ಕೊಳ್ಳುವ ರೈತರು ನೋವಿನಿಂದ ಬಳಲುವ ಸ್ಥಿತಿಯನ್ನು ಸರಕಾರ ನಿರ್ಮಿಸಬಾರದು. ರಾಜ್ಯ ಸರಕಾರ ಮೂರು ಕಂತುಗಳಲ್ಲಿ ಹಣ ನೀಡುವ ಬದಲಾಗಿ ಒಂದೇ ಸಲದಲ್ಲಿ ರೈತರಿಗೆ ಸರಕಾರ ಭೂ ಪರಿಹಾರ ನೀಡಿದಲ್ಲಿ, ರೈತರು ಬೇರೆ ಪ್ರದೇಶದಲ್ಲಿ ಜಮೀನು ಖರೀದಿ ಮಾಡುವದಕ್ಕೆ ಅವಕಾಶಗಳು ಹೆಚ್ಚಾಗುತ್ತದೆ ಎಂದರು.

ಬೇರೆ ಪ್ರದೇಶದಲ್ಲಿ ಖರೀದಿಸುವ ಸಂದರ್ಭದಲ್ಲಿ ಆ ಜಮೀನುಗಳ ಮಾಲಿಕರಿಗೆ ಪೂರ್ತಿಯಾಗಿ ಹಣ ಪಾವತಿಸುವ ಹಿನ್ನಲೆಯಲ್ಲಿ ಮುಳಗಡೆ ರೈತರು ತೀವ್ರ ಆರ್ಥಿಕ ತೊಂದರೆ ಅನುಭವಿಸಬೇಕಾಗುತ್ತದೆ. ಸರಕಾರಿ ಒಂದೇ ಸೂರಿನಲ್ಲಿ ಭೂ ಪರಿಹಾರ ಪಾವತಿಸಿದಲ್ಲಿ ರೈತರು ಹೊಸ ಜಮೀನಗಳ ಖರೀದಿಗೆ ಅನುಕೂಲವಾಗಲಿದೆ.

ರಾಜ್ಯ ಸರಕಾರ ಸಾಲವನ್ನಾದರೂ ಮಾಡಿ ರೈತರಿಗೆ ಒಂದೇ ಸೂರಿನಲ್ಲಿ ಭೂ ಪರಿಹಾರ ನೀಡುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ರಾಜ್ಯದ ರೈತರು ನೆಮ್ಮದಿ ಬದುಕಿದರೇ ದೇಶವೇ ಅಭಿವೃದ್ಧಿ ಆಗಲಿದೆ. ಹಿಂದೆ 1995 ರಲ್ಲಿ ಸರ್ವೇಯಲ್ಲಿ ನಡೆದ ತಪ್ಪುಗಳು ಮತ್ತೇ ಮರಕಳಿಸಬಾರದು.

ಪ್ರತಿಯೊಂದು ಜಮೀನು ಕಳೆದುಕೊಳ್ಳುವ ರೈತರ ಕುಟುಂಬಗಳಿಗೆ ಸೂರು ನಿರ್ಮಾಣಕ್ಕೆ ನಿವೇಶನ ಮತ್ತು ಕಟ್ಟಡ ನಿರ್ಮಾಣಕ್ಕೆ ಧನಸಹಾಯ ವ್ಯವಸ್ಥೆಯನ್ನು ರಾಜ್ಯ ಕೈಗೊಳ್ಳಬೇಕೆಂದರು.



ಗೋಕಾಕ: ನೂತನವಾಗಿ ಕರ್ನಾಟಕ ರಾಜ್ಯ ಉಪ್ಪಾರ ಅಭಿವೃದ್ಧಿ ನಿಗಮ ಅಧ್ಯಕ್ಷರಾಗಿ ಆಯ್ಕೆಯಾದ ಭರಮಣ್ಣ ಉಪ್ಪಾರ ಅವರನ್ನು ಅವರ 2005ರ ಕಾಲೇಜು ಸಹಪಾಠಿಗಳು ನಗರದಲ್ಲಿ ಸತ್ಕರಿಸಿದರು.



ಗೋಕಾಕ: ನೂತನವಾಗಿ ಬೆಳಗಾವಿ ಡಿಸಿಸಿ ಬ್ಯಾಂಕನ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾದ ಅಮರನಾಥ ರಮೇಶ ಜಾರಕಿಹೊಳಿ ಅವರನ್ನು ಹುಬ್ಬಳ್ಳಿಯ ಸಿದ್ಧಾರೂಢ ಮಠದ ಟ್ರಸ್ಟನ ಅಧ್ಯಕ್ಷ ಬಸವರಾಜ ಕಲ್ಯಾಣಶೆಟ್ಟಿ ಧರ್ಮದರ್ಶಿ ಶಾಮಾನಂದ ಪೂಜೇರಿ ಸತ್ಕರಿಸಿದರು. ಶಾಸಕರ ಆಪ್ತ ಸಹಾಯಕ ಭೀಮಗೌಡ ಪೋಲಿಸಗೌಡರ, ಬಿಜೆಪಿ ನಗರಾಧ್ಯಕ್ಷ ಭೀಮಶಿ ಭರಮಣ್ಣವರ ಸೇರಿದಂತೆ ಇತರರು ಇದ್ದರು.

## ವಿದ್ಯಾರ್ಥಿಗಳಿಗಾಗಿ ವಿಜ್ಞಾನ ಪ್ರಯೋಗ ಕಾರ್ಯಕ್ರಮ

**ಮುದ್ದೇಬಿಹಾಳ:** ಸ್ಥಳೀಯ ಇನ್ನರ್ ವ್ಹೀಲ್ ಸಂಸ್ಥೆ ಮುದ್ದೇಬಿಹಾಳ ಹಾಗೂ ತಮಿಳುನಾಡಿನ ಚಾರಿಟೇಬಲ್ ಟ್ರಸ್ಟ್ ನವರ ಸಹಯೋಗದೊಂದಿಗೆ ಶಾಲಾ ಮಕ್ಕಳಿಗಾಗಿ ವಿಜ್ಞಾನ ವಿಷಯವನ್ನು ತಿಳುವಳಿಕೆ ಮೂಡಿಸುವ ಕುರಿತು ಇತ್ತೀಚೆಗೆ ವಿಜ್ಞಾನ ರಥ ಎಂಬ ಯೋಜನೆಯಡಿಯಲ್ಲಿ ವಿಜ್ಞಾನ ಪ್ರಯೋಗಗಳನ್ನು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಗಳಿಂದಲೇ ಮಾಡಿಸಿ ತೋರಿಸುವ ಕಾರ್ಯ ಸ್ಥಳೀಯ ಚಿನ್ಮಯಿ ಜೆಸಿ ಶಾಲೆಯಲ್ಲಿ ಜರುಗಿತು.

5 ಶಾಲಾ ಮಕ್ಕಳನ್ನು ಒಂದೆಡೆ ಸೇರಿಸುವ ಮೂಲಕ ಜರುಗಿದ ಚಿನ್ಮಯಿ ಜೆಸಿ ಶಾಲೆಯಲ್ಲಿಯ ಈ ವಿಜ್ಞಾನ ಕಾರ್ಯಕ್ರಮ ತಮಿಳುನಾಡಿನ ನುರಿತ ವಿಜ್ಞಾನ ಶಿಕ್ಷಕರಾದ ನವೀನ್ ಕುಮಾರ ಮಕ್ಕಳಿಗೆ ಸರಳವಾಗಿ ತಿಳಿಯುವಂತೆ ಹಾಸ್ಯದ ಮೂಲಕ ಅನೇಕ ಪ್ರಯೋಗಗಳನ್ನು ಮಾಡಿ ಶಾಲಾ ಮಕ್ಕಳಿಗೆ ಮನವರಿಕೆ ಮಾಡಿದರು.

ಇನ್ನರ್ ವ್ಹೀಲ್ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಗಾಯತ್ರಿ ದೇಶಪಾಂಡೆ ಅವರು ಮಾತನಾಡಿ ವಿಜ್ಞಾನ ರಥ ಎಂಬುದರಲ್ಲಿಯ ವಿಷಯ ಶಾಲಾ ಮಕ್ಕಳ ಪಠ್ಯಪುಸ್ತಕಗಳಲ್ಲಿಇರುವದ್ದಾಗಿದೆ ಇದರಿಂದ ಮಕ್ಕಳಿಗೆ ಇಂದಿನ ಹಾಗೂ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲಿದೆ



ಎಂದು ಹೇಳಿದ ಅವರು ಏರ್ಪಡಿಸಲಾದ ಈ ಕಾರ್ಯಕ್ರಮ ಕುರಿತು ಉಪಸ್ಥಿತ ಶಾಲಾ ಶಿಕ್ಷಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಜೆಸಿ ಶಾಲೆಯ ಅಧ್ಯಕ್ಷರಾದ ವಿರೇಶ ಪಾಟೀಲ ಮತ್ತು ವಿಲಾಸ್ ದೇಶಪಾಂಡೆ ಅವರು ಇನ್ನರ್ ವ್ಹೀಲ್ ಸಂಸ್ಥೆಯ ಸೇವಾ ಕಾರ್ಯ ಕುರಿತು ಗುಣಗಾನ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮದಲ್ಲಿ ಇನ್ನರ್ ವ್ಹೀಲ್ ಸಂಸ್ಥೆಯ ನಿರ್ಮಲಾ ರಾಂಪೂರ, ಅನಿತಾ ಪೋರವಾಲ, ರೇಖಾ ಪೋರವಾಲ, ಮಂಜು ಗೂಳಿ, ಜಯಾ ಪುರಾಣಿಕಮಠ, ರಾಜೇಶ್ವರಿ ಪಾಟೀಲ, ಸವಿತಾ ಬಿರಾದಾರ, ಜಯಾ ಸಾಲಿಮಠ, ಅಕ್ಷತಾ ಕಡಿ, ಜೀನಲ್ ಓಸ್ವಾಲ್ ಹಾಗೂ ಚಿನ್ಮಯಿ ಜೆಸಿ ಶಾಲೆಯ ಮುಖ್ಯೋಪಾಧ್ಯಾಯರಾದ ಸಿಸ್ಟರ್ ಸ್ಟೆಲ್ಲಾ, ಆನಂದ ಓಗಿ ಮತ್ತು ಎಂಜಿಎಂಕೆ ಶಾಲೆಯ ಮುಖ್ಯಗುರುಗಳಾದ ವೀಣಾ, ಪಾರ್ವತಿ ಗೊಳಸಂಗಿ, ಸಾವಿತ್ರಿ ಪಾಟೀಲ, ಶಿವರುದ್ರಪ್ಪ, ವಿಜಯ ಹಳ್ಳೂರ ಮತ್ತು ಪ್ರಾರ್ಥನಾ ಶಾಲೆಯ ಮುತ್ತಣ್ಣ ನೆರಬೆಂಚಿ, ಕನಕದಾಸ ಶಾಲೆಯ ಶ್ರೀಕಾಂತ ಪನೇದಕಟ್ಟಿ, ವ್ಹಿ.ಎಸ್. ಹೊಸಗೌಡರ, ಮಹಾದೇವಿ ಬೋವೆರ, ಆರ್.ಎಸ್. ಕುರಿ, ಕುಮಾರಿ ಜ್ಯೋತಿ ಹಿರೇಮಠ, ಎಲ್.ಎಚ್. ಗುಬಚಿ, ಎಂ.ಸೆ ಕಬಾಡಾ, ಬಿವಾಯ್ ಮಲಗೊಡರ, ಬಿ.ಎ. ಬೋರಡೆನಾಳ, ಅವರನ್ನೊಳಗೊಂಡು ಸುಮಾರು 40 ಶಿಕ್ಷಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ದಿವ್ಯಾ ಸುಕಾಲಿ ಸ್ವಾಗತಿಸಿ ನಿರೂಪಿಸಿದರು. ಗೌರಿ ಬಿರಾದಾರ ವಂದಿಸಿದರು.

## ಶೂ ಎಸೆತ ಖಂಡಿಸಿ ಪ್ರತಿಭಟನೆ

**ಜಮಖಂಡಿ:** ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ಮೇಲೆ ಶೂ ಎಸೆದಿರುವ ಘಟನೆಗೆ ತೀವ್ರ ಖಂಡಿಸಿ ನಗರದ ಎ.ಜಿ. ದೇಸಾಯಿ ವೃತ್ತದಲ್ಲಿ ಕಾನೂನು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ಉದ್ದೇಶಿಸಿ ಮಾತನಾಡಿದ ವಿದ್ಯಾರ್ಥಿ ಒಕ್ಕೂಟದ ಮುಖಂಡ ಹಣಮಂತ ಯಮಗಾರ ಸಿಜೆಐ ಗವಾಯಿ ಅವರಿಗೆ ಆದ ಅವಮಾನ ಮಾತ್ರವಲ್ಲ, ಇದು ಭಾರತ ಮಾತೆಗೆ ಆದ ಅವಮಾನ. ಈ ಕೃತ್ಯ ಎಸಗಿದ ವ್ಯಕ್ತಿಯನ್ನು ತಕ್ಷಣ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು ಎಂದರು. ಕಾನೂನು ವಿದ್ಯಾರ್ಥಿನಿ ವಚನಾ ಶೃಂಗೇರಿ ಮಾತನಾಡಿ, ನಮ್ಮ ದೇಶದಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ರಕ್ಷಣೆ ಇಲ್ಲದಿದ್ದರೆ, ಸಾಮಾನ್ಯ ಜನರ ಸ್ಥಿತಿ ಹೇಗಿರಬಹುದು ಆರೋಪಿಯ ಆಸ್ತಿಯನ್ನು ಮುಟ್ಟುಗೋಲು ಹಾಕಿ, ಆತನನ್ನು ಗಡಿಪಾರು ಮಾಡಬೇಕು," ಎಂದರು. ಈ ಪ್ರತಿಭಟನೆಯಲ್ಲಿ ಆನಂದ್ ರಾಥೋಡ, ಸದಾಶಿವ ಚಲವಾದಿ, ಸಂಗಮೇಶ್ ವಳಕರ, ಸಿದ್ದು ಮೇಟಗುಡ್ಡ್, ಪ್ರವೀಣ್ ಯಡಹಳ್ಳಿ, ಬಸವರಾಜ ಪಟ್ಟಣಶೆಟ್ಟಿ, ಪ್ರವೀಣ್ ಕಾಳೆ, ಬಸವರಾಜ ಮದರಖಂಡಿ, ಸದಾಶಿವ ಕಾಂಬಳೆ, ಇಲಿಯಾಸ್ ನದಾಫ, ಮಲಕಾರಿ ಕಾಂಬಳೆ, ಸೌಮ್ಯ ಬಿರೋಜಿ, ರವೀನಾ ಮಡ್ಡಿ, ಬಂದೆ ನವಾಜ್ ಬಿಪಾರಿ ಸೇರಿದಂತೆ ಹಲವಾರು ಕಾನೂನು ವಿದ್ಯಾರ್ಥಿಗಳು ಭಾಗವಹಿಸಿದ್ದರು.




### ಸಂಪಗಾಂವದಲ್ಲಿ ಹಳೇ ವಿದ್ಯಾರ್ಥಿಗಳಿಂದ ಗುರುವಂದನಾ ಕಾರ್ಯಕ್ರಮ

# ಕಲಿಸಿದ ಶಿಕ್ಷಕರನ್ನು ಕಂಡು ಆಶೀರ್ವಾದ ಪಡೆದ ಶಿಷ್ಯಂದಿರು

**ಬೈಲಹೊಂಗಲ:** ತಾಲೂಕಿನ ಸಂಪಗಾಂವ ಗ್ರಾಮದ ಆರ್‌ಇಎಸ್ ಪ್ರೌಢಶಾಲೆಯ 1993-94 ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಂದ ರವಿವಾರ ಗುರುವಂದನಾ ಹಾಗೂ ಹಳೇ ವಿದ್ಯಾರ್ಥಿಗಳ ಸಮಾಗಮ ಕಾರ್ಯಕ್ರಮವನ್ನು ಪ್ರೌಢಶಾಲೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕ್ರಿಯಾಶೀಲ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಹಾಗೂ ಚೇತನ ಕಾಲೇಜು ಅಧ್ಯಕ್ಷ ಗುರುಶಾಂತ ವಳಸಂಗ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ತಾವು ಕಲಿತ ಶಾಲೆ ಹಾಗೂ ಕಲಿಸಿದ ಗುರುಗಳ ಸ್ಮರಣೆ ಮಾಡುವುದು ಅತೀ ಅವಶ್ಯವಾಗಿದ್ದು, ಸಮಾಜದಲ್ಲಿ ಸಾಧನೆ ಮಾಡಿದಾಗ ಶಾಲೆಯ ಅಭಿವೃದ್ಧಿಗಾಗಿ ಪ್ರತಿಯೊಬ್ಬರು ಪ್ರಯತ್ನಿಸುವದು ಅಗತ್ಯವಾಗಿದೆ ಎಂದರು.

ಪ್ರಾಸ್ತಾವಿಕವಾಗಿ ಸಂತೋಷ ನರಸನ್ನವರ ಮಾತನಾಡಿದರು ಸನ್ಮಾನಿತರ ಪರ ಶಿಕ್ಷಕ ಎಂ. ವೈ. ರಾವಳ ಹಾಗೂ ಮುಖ್ಯೋಪಾಧ್ಯಾಯ ಶ್ರೀಕಾಂತ ಉಳ್ಳಾಗಡ್ಡಿ ಮಾತನಾಡಿದರು. ಶಾಲಾ ಸಂಸ್ಥೆಯ ಚೇರ್ಮನ್ನ ಶಂಕ್ರಪ್ಪ ಸಿದ್ನಾಳ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸ್ಥಳೀಯ ಕಟಾಪುರಿಮಠದ ವೇದಮೂರ್ತಿ ಚನ್ನವೀರ ಸ್ವಾಮಿಜಿ ಸಾನಿಧ್ಯ ವಹಿಸಿದ್ದರು.

ಗೌಡಪ್ಪ ಬೆಳವಡಿ, ರವಿ ಬೂದಿಹಾಳ, ವಿಜಯ ಶಿದ್ನಾಳ, ಸುಮಿತ್ರಾ ನಂದನ್ನವರ, ಕವಿತಾ ಉಳ್ಳೆಗಡ್ಡಿ, ಉಮೇಶ ಶಿವಾಪುರ, ಸದಾನಂದ ಬಸರಿಕಟ್ಟಿ, ಸುರೇಶ ಬಿಡಿ, ಆನಂದ ಚಿವಟಗುಂಡಿ, ರುದ್ರಪ್ಪ ಬೆಣ್ಣಿ, ಶಿವಲೀಲಾ ಗೌಡರ,



ತಾಲೂಕಿನ ಸಂಪಗಾಂವ ಗ್ರಾಮದ ಆರ್‌ಇಎಸ್ ಪ್ರೌಢಶಾಲೆಯಲ್ಲಿ ನಡೆದ 1993-94 ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಂದ ಹಮ್ಮಿಕೊಂಡ ಗುರುವಂದನಾ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಬಸವರಾಜ ಜುಟ್ಟನವರ, ಅಶೋಕ ಕಾರಜೋಳ ಸೇರಿದಂತೆ ಅನೇಕ ಹಳೇ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಿವಿಧ ಕ್ಷೇತ್ರದ ಸಾಧಕರನ್ನು, ನಿವೃತ್ತ ಯೋಧರನ್ನು, ಆದರ್ಶ ಶಿಕ್ಷಕ ಪ್ರಶಸ್ತಿ ವಿಜೇತರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಮೊದಲು ಅಗಲಿದ ಶಿಕ್ಷಕರಿಗೆ ಹಾಗೂ ಆ ಬ್ಯಾಚನ್ ಅಗಲಿದ ವಿದ್ಯಾರ್ಥಿಗಳಿಗೆ ಹಾಗೂ ಪ್ರಾಣ ತ್ಯಾಗ ಮಾಡಿದ ಸೈನಿಕರಿಗೆ ಇದೇ ಸಂದರ್ಭದಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಶಿಷ್ಯಂದಿರಿಂದ ಕಲಿಸಿದ ಶಿಕ್ಷಕರಿಗೆ ಗುರು ಕಾಣಿಕೆ ಅರ್ಪಿಸಲಾಯಿತು. 1993-94 ನೇ ಸಾಲಿನಲ್ಲಿ ಸೇವೆ ಸಲ್ಲಿಸಿದ ಶಿಕ್ಷಕರನ್ನು ಗೌರವಿಸಲಾಯಿತು. ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಶಿಕ್ಷಕ ಮಲ್ಲಿಕಾರ್ಜುನ ಹಾರುಗೊಪ್ಪ ಸ್ವಾಗತಿಸಿದರು. ಶಿಕ್ಷಕ ಶಿವಾನಂದ ಮರೆನ್ನವರ ನಿರೂಪಿಸಿದರು. ಗ್ರಾ.ಪಂ.ಅಧ್ಯಕ್ಷ ಅನಿಲ್ ನೇಸರಗಿ ವಂದಿಸಿದರು.

## ನೇಸರಗಿಯಲ್ಲಿ ಅದ್ದೂರಿ ರಾಜ್ಯೋತ್ಸವಕ್ಕೆ ನಿರ್ಧಾರ

**ನೇಸರಗಿ:** ಬರುವ ನವೆಂಬರ 1 ರಂದು ನಡೆಯುವ ಕರ್ನಾಟಕ ರಾಜ್ಯೋತ್ಸವವನ್ನು ನೇಸರಗಿ ಗ್ರಾಮದಲ್ಲಿ ಸುತ್ತಮುತ್ತಲಿನ ಗ್ರಾಮಗಳ ಸಹಯೋಗದಲ್ಲಿ ಅದ್ದೂರಿಯಾಗಿ ಆಚರಿಸಲಾಗುವದೆಂದು ಗ್ರಾಮ ಪಂಚಾಯತ ಅಧ್ಯಕ್ಷ ವೀರಭದ್ರ ಚೋಭಾರಿ ಹೇಳಿದರು.

ಅವರು ಇಲ್ಲಿನ ಗ್ರಾಮ ಪಂಚಾಯತ ಕಾರ್ಯಾಲಯದಲ್ಲಿ ಆಯೋಜಿಸಲಾಗಿದ್ದ ಕರ್ನಾಟಕ ರಾಜ್ಯೋತ್ಸವ ಆಚರಣೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಕರ್ನಾಟಕ ರಾಜ್ಯೋತ್ಸವ ಆಚರಣೆ ಕಮಿಟಿ ಅಧ್ಯಕ್ಷ ಗುರುರಾಜ ತುಬಚಿ ಮಾತನಾಡಿ ನವೆಂಬರ 01 ರಂದು ಶ್ರೀ ವೀರಭದ್ರೇಶ್ವರ ದೇವಸ್ಥಾನದಿಂದ ಕನ್ನಡಾಂಬೆ ಭುವನೇಶ್ವರಿ ಪೂಜೆ, ವಾದ್ಯ ಮೇಳಗಳೊಂದಿಗೆ ಪ್ರಾರಂಭವಾಗುವ ಮೆರವಣಿಗೆ ಬಸ್ ನಿಲ್ದಾಣಕ್ಕೆ ತಲುಪಿ ಅಲ್ಲಿ ಶಾಸಕರ ಒಪ್ಪಿಗೆ ಮೂಲಕ ಅವರ ಉಪಸ್ಥಿತಿಯಲ್ಲಿ ನೇಸರಗಿ ಬಸ್ ನಿಲ್ದಾಣಕ್ಕೆ ಶ್ರೀ ಚನ್ನವೃಷಬೇಂದ್ರ ಹೆಸರು ನಾಮಕರಣ ಮಾಡಲು ಚರ್ಚಿಸಲಾಯಿತು. ಬಸ್ ನಿಲ್ದಾಣಕ್ಕೆ ಹೋಗುವ ದ್ವಾರಗಳಲ್ಲಿ ಒಂದು ಕಡೆ ಶ್ರೀ ವೀರಭದ್ರೇಶ್ವರ ಫೋಟೋ ಇನ್ನೊಂದು ಕಡೆ ಶ್ರೀ ಜೋಡಗುಡಿ ದೇವಸ್ಥಾನದ ಚಿತ್ರಗಳನ್ನು ಲಗತ್ತಿಸಲು ಚರ್ಚಿಸಲಾಯಿತು. ಬಸ್ ನಿಲ್ದಾಣದ ಗೋಡೆಯ ಮೇಲೆ ಜ್ಞಾನಪೀಠ ಪ್ರಶಸ್ತಿ ಪಡೆದ ನಾಡಿನ ಗಣ್ಯರ ಭಾವಚಿತ್ರ ಅನಾವರಣ ಮಾಡುವದು. ಅದಾದ ಬಳಿಕ ವಿದ್ಯಾ ಮಂದಿರ ಪ್ರೌಢಶಾಲೆಯಲ್ಲಿ ಶಾಸಕರಾದ ಬಾಬಾಸಾಹೇಬ ಪಾಟೀಲ ಅವರ ನೇತೃತ್ವದಲ್ಲಿ ಬಹಿರಂಗ ಸಭೆ ಸಮಾರೋಪ ನಡೆಸಲು ಚರ್ಚಿಸಲಾಯಿತು.

ಈ ಪೂರ್ವಭಾವಿ ಸಭೆಯಲ್ಲಿ ಹಿರಿಯರಾದ ಬಾಳಪ್ಪ ಮಾಳಗಿ, ಶ್ರೀ ವೀರಭದ್ರೇಶ್ವರ ಪಿಕೆಪಿಎಸ್ ಅಧ್ಯಕ್ಷ ಸೋಮನಗೌಡ ಪಾಟೀಲ,ಮಾಜಿ ಸೈನಿಕರ ಸಂಘದ ಅಧ್ಯಕ್ಷ ಈರಪ್ಪ ಸೋಮಣ್ಣವರ,ಎ ಎಸ್ ಐ ಇಮಾಮ ಫಕಾಲಿ, ಅರಣ್ಯ ಇಲಾಖೆಯ ಅಶೋಕ ಬಿಚ್ಚಗತ್ತಿ, ಸಂತೋಷ ಪಾಟೀಲ, ಗ್ರಾ ಪಂ ಸದಸ್ಯ ಯಮನಪ್ಪ ಪೂಜೇರಿ, ಕಾರ್ಯದರ್ಶಿ ಭೀಮಸಿ ಮಾಳಗಿ, ಸುಜಾತ ತುಬಾಕಿ, ಶಿವು ಮಾಳಗಿ ಸೇರಿದಂತೆ ಎಲ್ಲ ಇಲಾಖೆಗಳ ಅಧಿಕಾರಿಗಳು ಸಿಬ್ಬಂದಿ, ಎಲ್ಲ ಸಮಾಜದ ಹಿರಿಯರು, ಮಾಜಿ ಸೈನಿಕರ ಸಂಘದ ಸದಸ್ಯರು ಭಾಗವಹಿಸಿದ್ದರು.



**ಕೊಳವಿ ಗ್ರಾಮದ ಸರಕಾರಿ ಕನ್ನಡ ಶಾಲೆಯ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಸಚಿವ ಸತೀಶ ಜಾರಕಿಹೊಳಿ ಕರೆ**

# ಸರ್ಕಾರಿ ಶಾಲೆಗಳನ್ನು ಉಳಿಸಿ-ಬೆಳೆಸುವ ಕಾರ್ಯ ಆಗಬೇಕು

**ಗೋಕಾಕ:** ಗ್ರಾಮೀಣ ಪ್ರದೇಶದಲ್ಲಿರುವ ಸರ್ಕಾರಿ ಶಾಲೆಗಳನ್ನು ಉಳಿಸಿ-ಬೆಳೆಸುವ ಕಾರ್ಯವನ್ನು ಮಾಡಬೇಕು, ಭವಿಷ್ಯತ್ತಿನಲ್ಲಿ ಅದೇ ಶಿಕ್ಷಣ ದೀಪವಾಗಿ ಬೆಳಗಲಿದೆ. ಈ ನಿಟ್ಟಿನಲ್ಲಿ ಸರ್ಕಾರ ಮತ್ತು ಜನರು ಮಧ್ಯ ಸಮನ್ವಯತೆ ಸಹಕಾರದಿಂದ ಗ್ರಾಮೀಣ ಪ್ರದೇಶ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವ ಅಗತ್ಯವಿದೆ ಎಂದು ಜಿಲ್ಲಾಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರು.

ತಾಲೂಕಿನ ಕೊಳವಿ ಗ್ರಾಮದ ನಮ್ಮೂರ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆಯ ಶತಮಾನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶತಮಾನೋತ್ಸವದ ಕಾರ್ಯಕ್ರಮಗಳು ಎಲ್ಲಾ ಗ್ರಾಮಗಳಲ್ಲಿ ನಡೆದಾಗ ಮಾತ್ರ ಗ್ರಾಮೀಣ ಪ್ರದೇಶ ಶೈಕ್ಷಣಿಕ ಉನ್ನತ್ತಿಗೆ ಸಾಕಷ್ಟು ಉತ್ತೇಜನ ದೊರಯುತ್ತದೆ. ಆದರಿಂದ ಗ್ರಾಮೀಣ ಪ್ರದೇಶದ ಜನರು ಈ ದಿಶೆಯಲ್ಲಿ ಶತಾಯಗತಾಯವಾಗಿ ಶ್ರಮಿಸಬೇಕು ಎಂದು ಮನವಿ ಮಾಡಿಕೊಂಡರು.

ಸರಕಾರಿ ಶಾಲೆಯನ್ನು ಉಳಿಸಿಕೊಳ್ಳುವ ಜವಾಬ್ದಾರಿ ಇರುವುದು ಅಲ್ಲಿನ ಶಿಕ್ಷಕರಿಗೆ, ಪೋಷಕರಿಗೆ, ಹಳೆಯ ವಿದ್ಯಾಥಿಗಳಿಗೆ ಮತ್ತು ಆ ಊರಿನ ಗ್ರಾಮಸ್ಥರಿಗೆ.



ತಾಲೂಕಿನ ಕೊಳವಿ ಗ್ರಾಮದ ಕನ್ನಡ ಶಾಲೆಯ ಶತಮಾನೋತ್ಸವದ ಸಂಭ್ರಮಾಚರಣೆಯಲ್ಲಿ ಭಾಗವಹಿಸಿದ ಸಚಿವರು.

ನಮ್ಮೂರ ಸರಕಾರಿ ಶಾಲೆಗಳು ಬೆಳೆಬೇಕು ಎಂದು ಅಭಿಪ್ರಾಯ ವ್ಯಕ್ತಪಡಸಿದರು.

ಸತೀಶ ಜಾರಕಿಹೊಳಿ ಪೌಂಢೇಶದಿಂದ ಜಿಲ್ಲೆಯ ವಿವಿಧ ಶಾಲೆಗಳಿಗೆ ಸುಮಾರು 5 ಲಕ್ಷ ಡೆಕ್ಸ್ ನೀಡಲಾಗಿದೆ. ಜೊತೆಗೆ ಮಕ್ಕಳ ಅನುಕೂಲಕ್ಕಾಗಿ ಕುರ್ಚಿಗಳನ್ನು ನೀಡಲಾಗಿದೆ. ನೂರಾರು ಸರ್ಕಾರಿ, ಖಾಸಗಿ ಶಾಲೆಗಳಿಗೆ ಸುಸುಜ್ಜಿತವಾದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಶಾಲಾ ಮಕ್ಕಳಿಗೆ ಶಿಕ್ಷಣಕ್ಕೆ ಅನುಗುಣವಾಗಿ ಪುಸ್ತಕಗಳನ್ನು ವಿತರಿಸಲಾಗಿದೆ. ಕೇವಲ ಎರಡು ವರ್ಷದ ಅವಧಿಯಲ್ಲಿ ಯಮಕನಮರಡಿ ಕ್ಷೇತ್ರದಲ್ಲಿ ಸುಮಾರು 100 ಸರ್ಕಾರ ಶಾಲೆಗಳು ನಿರ್ಮಿಸಲಾಗಿದೆ. ಅಲ್ಲಿ ಕಲಿಕೆಗೆ ಬೇಕಾದ ಅಗತ್ಯ ವಸ್ತುಗಳನ್ನು ನೀಡಲಾಗುತ್ತಿದೆ ಎಂದು ಹೇಳಿದರು.

ಈ ಶಾಲೆಯಲ್ಲಿ ಶಿಕ್ಷಣ ಪಡೆದ ಸಾವಿರಾರು ವಿದ್ಯಾರ್ಥಿಗಳು ದೇಶ-ವಿದೇಶದಲ್ಲಿ ಉನ್ನತ ಸ್ಥಾನದಲ್ಲಿದ್ದಾರೆ. ಇಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಶಾಲೆಯ ವೈಭವನ್ನು ಕಣ್ತುಂಬಿಕೊಳ್ಳಬೇಕು. ಮತ್ತೆ ಸಾವಿರಾರೂ ಮಕ್ಕಳಿಗೆ ಬೆಳಕಾಗಬೇಕು. ಕಲಿತ ಶಾಲೆಗೆ ಸ್ವಲ್ಪ ಸಹಾಯ-ಸಹಕಾರ ಮಾಡಿದಾಗ ಸರ್ಕಾರಿ ಶಾಲೆಗಳು ಅಭಿವೃದ್ಧಿಯಾಗುತ್ತವೆ. ಕಲಿತ ಶಾಲೆಯ ಋಣ ತಿರಿಸುವುದರೊಂದಿಗೆ ಸಮಾಜದ ಸೇವೆಯಲ್ಲಿ ತೊಡಗಿಕೊಳ್ಳಬೇಕು ಅಂದಾಗ ಮಾತ್ರ ಶಿಕ್ಷಣ ಕಲಿಸಿದ ಗುರುಗಳಿಗೂ ಕೀರ್ತಿ ಸಲ್ಲುತ್ತದೆ. ಶಾಲೆಯ ಶತಮಾನ ಪಯಣವು ಶಿಕ್ಷಣದ ಬೆಳಕಿನ ಜೊತೆಗೆ ಸಮಾಜ ನಿರ್ಮಾಣದ ಸಾಕ್ಷಿಯಾಗಿದ್ದು, ಈ ಹೆಮ್ಮೆಯ ಕ್ಷಣದಲ್ಲಿ ಭಾಗಿಯಾಗಿರುವುದು ನನಗೆ ಸಂತೋಷ ತಂದಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕುಷ್ಟಗಿಯ ಕರಿಬಸವ ಸ್ವಾಮೀಜಿ, ತವಗ ಅಜ್ಜಯ್ಯ ಸ್ವಾಮೀಜಿ, ಹುಲಿಕಟ್ಟಿ ಶಿವಲಿಂಗೇಶ್ವರ ಮಠದ ಕುಮಾರ ಸ್ವಾಮಿಜಿ, ಕಪರಟ್ಟಿ ಶ್ರೀಗಳು, ದಂಡಾಧಿಕಾರಿ ಮೋಹನ ಭಸ್ಮೆ, ತಾಲೂಕ ಪಂಚಾಯಿತಿ ಕಾರ್ಯನಿರ್ವಾಧಿಕಾರಿ ಪರಶುರಾಮ ಘಸ್ತೆ, ಪಿಡಿಒ ಸಂಜುಕುಮಾರ ಜೋತಾವರ, ಅಧ್ಯಕ್ಷತೆ, ಎಸ್ ಡಿ ಎಂ ಸಿ ಅಧ್ಯಕ್ಷ ಶಿವಾನಂದ ಮಮದಾಪುರ, ಸ್ವಾಗತ ಬಾಳಯ್ಯ ಪೂಜೇರಿ ಹಾಗೂ ಗ್ರಾಮ ಪಂಚಾಯತಿ ಸದಸ್ಯರು ಎಸ್ ಡಿ ಎಂ ಸಿ ಸದಸ್ಯರು. ಹಾಗೂ ಗ್ರಾಮಸ್ಥರು ಇತರರು ಇದ್ದರು.

## ಡಾ.ಬಾಂಗಿಗೆ ಮಹಾತ್ಮಾಗಾಂಧಿ ಸರ್ವಿಸ್ ಪ್ರಶಸ್ತಿ



**ಜಮಖಂಡಿ:** ಘಟಪ್ರಭಾದ ಡಾ.ಹರ್ಡಿಕರ ನ್ಯಾಶನಲ್ ಸೇವದಳ ಅಕಾಡೆಮಿಯ ಡಾ.ಹರ್ಡಿಕರ ಭವನದಲ್ಲಿ ಹಮ್ಮಿಕೊಂಡಿದ್ದ ಪ್ರೌಢಶಾಲೆ ಶಿಕ್ಷಕರಿಗಾಗಿ ನಡೆದ ಎರಡು ದಿನದ ಕಾರ್ಯಗಾರ ನಡೆಯಿತು.

1972ರಲ್ಲಿ ಪದ್ಮಭೂಷಣ ಡಾ.ನಾ.ಸು.ಹರ್ಡಿಕರ್ ಅವರಿಂದ ಸೇವಾದಿಕ್ಷಾ ಪಡೆದು ಸುದೀರ್ಘವಾಗಿ ನಾಡಿಗೆ ಸೇವೆ ನೀಡಿದ ಮತ್ತು ಜೀವಮಾನದ ಸೇವೆಯನ್ನು ಗುರುತಿಸಿ ಜಮಖಂಡಿಯ ಹಿರಿಯ ನ್ಯಾಯವಾದಿ, ಸಾಹಿತಿ ಡಾ. ತಾತಾಸಾಹೇಬ ಬಾಂಗಿ ಅವರಿಗೆ ಮಹಾತ್ಮಾಗಾಂಧಿ ಸರ್ವಿಸ್ ಅವಾರ್ಡ ಸಹಿತ ಗಾಂಧೀಜಿ ಪ್ರತಿಮೆ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು. ವೇದಿಕೆಯಲ್ಲಿ ಕೆ.ಹೆಚ್.ಐ. ಮುಖ್ಯ ವೈದ್ಯಾಧಿಕಾರಿ ಡಾ.ಸ್ವಾತಿ ವೈದ್ಯ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಡಾ. ತಾತಾಸಾಹೇಬ ಬಾಂಗಿ, ಬಾಗಲಕೋಟದ ಡಾ.ನಾ.ಸು.ಹರ್ಡಿಕರ ಮ್ಯಾನೇಜಿಂಗ ಟ್ರಸ್ಟಿ ಶ್ರೀನಿವಾಸ ಛಬ್ಬಿ, ವೈದ್ಯಾಧಿಕಾರಿ ಡಾ. ಮನೋಜ ವೈದ್ಯ, ಡಾ.ಪ್ರೀತಿ ವೈದ್ಯ, ನಂದಿನಿ ಬಾಂಗಿ ಇದ್ದರು.

ಕಾರ್ಯಾಗಾರದಲ್ಲಿ ಸುಭಾ ಜೋಶಿ, ವಿಭಾ ದಿಕ್ಷಿತ್, ರಾಜಶೇಖರ ಮಳಗಿಹಾಳ, ಎಸ್.ಎ.ದಳಪತಿ, ಬಸವರಾಜ ಹಟ್ಟಿಗೌಡರ ಸಂಜೀವ ಚಲವಾದಿ ಇತರರು ಪಾಲ್ಗೊಂಡಿದ್ದರು.

# ಸಾಯಿ ಸಮಿತಿಯಿಂದ ಸದ್ಭಾವ ಬೆಳೆಸುತ್ತಿದ್ದಾರೆ: ಸಂಸದ ಕಡಾಡಿ

**ಮೂಡಲಗಿ:** ಸತ್ಯ, ಧರ್ಮ, ಶಾಂತಿ, ಪ್ರೇಮ, ಅಹಿಂಸೆ ಇವು ಸತ್ಯಸಾಯಿ ಬಾಬಾರವರ ಜೀವನದ ಧ್ಯೇಯ ವಾಕ್ಯಗಳಾಗಿದ್ದು, ಇವುಗಳ ಮೂಲಕ ಸುಂದರ ಸಮಾಜವನ್ನು ಕಟ್ಟುವುದು ಅವರ ಕನಸಾಗಿತ್ತು. ವ್ಯಕ್ತಿಗಳ ವ್ಯಕ್ತಿತ್ವ ನಿರ್ಮಾಣದಿಂದ ಮಾತ್ರ ಇಂತಹ ಸುಂದರ ಸಮಾಜ ಕಟ್ಟಲಿಕ್ಕೆ ಸಾಧ್ಯವಿದೆ. ಹೀಗಾಗಿ ಕಲ್ಲೋಳಿ ಶ್ರೀ ಸತ್ಯಸಾಯಿ ಸೇವಾ ಸಮಿತಿಯು ಸತತ 40 ವರ್ಷಗಳ ಕಾಲ ಹಲವಾರು ವ್ಯಕ್ತಿಗಳ ಕುಟುಂಬದ ಜೀವನದಲ್ಲಿ ಪರಿವರ್ತನೆ ತರುವ ಮೂಲಕ ಸತ್ಯಸಾಯಿ ಬಾಬಾರವರ ಆಶಯಗಳನ್ನು ಜಾರಿಗೆ ತಂದಿದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಹರ್ಷ ವಕ್ತಪಡಿಸಿದರು.

ರವಿವಾರ ಕಲ್ಲೋಳಿ ಪಟ್ಟಣದ ಶ್ರೀ ಸತ್ಯಸಾಯಿ ಸೇವಾ ಸಮಿತಿಯ 40ನೇ ವಾರ್ಷಿಕೋತ್ಸವ ಪ್ರಯುಕ್ತ ಮಂದಿರಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದು ಅವರು ಮಾತನಾಡಿದರು.

ಕಳೆದ ನಾಲ್ಕು ದಶಕಗಳಿಂದ ಕಲ್ಲೋಳಿ ಪಟ್ಟಣದ ಸಾರ್ವಜನಿಕರಿಗೆ ಆಧ್ಯಾತ್ಮಿಕ, ಶೈಕ್ಷಣಿಕ ಮತ್ತು ಸಮಾಜ ಸೇವೆ ಜೊತೆಗೆ ಮಾನವೀಯ ಮೌಲ್ಯಗಳನ್ನು ಬಿತ್ತುವಲ್ಲಿ ಈ ಸಮಿತಿಯ ಕಾರ್ಯ ಶ್ಲಾಘನೀಯವಾಗಿದೆ ಎಂದರಲ್ಲದೇ



ಸಾಯಿ ಸಮಿತಿಯಿಂದ ಪಟ್ಟಣದಲ್ಲಿ ನಗರ ಸಂಕೀರ್ತನೆ, ವೇದಘೋಷ, ಭಜನೆ, ಉಪನ್ಯಾಸ. ಕಾರ್ಯಕ್ರಮ, ಧ್ಯಾನ, ಪ್ರಾಣಾಯಾಮ ತಪ್ಪದೇ ನಡೆಸಿಕೊಂಡು ಬರುವ ಮೂಲಕ ಸದ್ಭಾವ ಬೆಳೆಸುತ್ತಿದ್ದಾರೆ. ಬಾಲ ವಿಕಾಸ ತರಗತಿಗಳ ಮೂಲಕ ಮಕ್ಕಳಲ್ಲಿ ಸಂಸ್ಕಾರದ ಬೀಜ ಬಿತ್ತುತ್ತಿದ್ದಾರೆ ಎಂದು ಸಾಯಿ ಸಮಿತಿ ಕಾರ್ಯವನ್ನು ಶ್ಲಾಘೀಸಿದರು.

ಸತ್ಯಸಾಯಿ ಸೇವಾ ಕಾರ್ಯದಲ್ಲಿ ತೊಡಗಿದ ಅನೇಕರು ಒಳ್ಳೆಯ ಬದುಕು ಕಟ್ಟಿಕೊಂಡಿದ್ದಾರೆ. ಸತ್ಯಸಾಯಿ ಬಾಬಾ ಅವರ ಸೇವಾ ಸಮಿತಿ ಜಿಲ್ಲೆಯಲ್ಲಿ ಒಳ್ಳೆಯ ಕಾರ್ಯ ಮಾಡುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಸತ್ಯ ಸಾಯಿ ಸಮಿತಿಯ ಜಿಲ್ಲಾ ಘಟಕ ಅಧ್ಯಕ್ಷ ವಸಂತ ಬಾಳಿಗಾ ಅಧ್ಯಕ್ಷತೆ ವಹಿಸಿದ್ದರು. ಆದರ್ಶ ಪಡಿಯಾರ ಉಪನ್ಯಾಸ ನೀಡಿದರು. ಕಲ್ಲೋಳಿ ಸತ್ಯಸಾಯಿ ಸೇವಾ ಸಮಿತಿಯ ಸುರೇಶ ಕಬ್ಬೂರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಮಿತಿ ಅಧ್ಯಕ್ಷ ಶ್ರೀಶೈಲ ತುಪ್ಪದ, ಸಂಚಾಲಕ ಲೋಹಿತ ಕಲಾಲ, ಸಿ.ಎಂ ಕಟಗಿ, ಬಸವರಾಜ ಕಡಾಡಿ, ಭೀಮಶೆಪ್ಪ ಬಾಗೇವಾಡಿ, ಶ್ರೀ ಹಣಮಂತ ಖಾನಗೌಡ್ರ, ಮಹಾಂತೇಶ ಗೋರೋಶಿ, ದುಂಡಪ್ಪ ಖಾನಗೌಡ್ರ, ರಾಮಪ್ಪ ಗೋರೋಶಿ, ಸಾಯಿಕಿರಣ ಪಟ್ಟಣಶೆಟ್ಟಿ, ಮೌನೇಶ ಪತ್ತಾರ, ಪ್ರಭು ಮಳವಾಡ ಸೇರಿದಂತೆ ಮೂಡಲಗಿ, ಗೋಕಾಕ, ಚಿಕ್ಕೋಡಿ, ಬೆಳಗಾವಿ ರಾಮದುರ್ಗ, ರಾಜಾಪೂರ ಸತ್ಯಸಾಯಿ ಸಮಿತಿ ಸದಸ್ಯರು, ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

**43ನೇ ಬೆಳದಿಂಗಳ ಸಾಹಿತ್ಯ ಚಿಂತನ ಮಂಥನ ಕಾರ್ಯಕ್ರಮದದಲ್ಲಿ ಮುರುಘರಾಜೇಂದ್ರ ಶ್ರೀ ಅಭಿಮತ**

# ಸತ್ಸಂಗದಿಂದ ಸತ್ಯದ ಅರಿವು ಮೂಡುತ್ತದೆ

**ಮೂಡಲಗಿ:** ಆಧ್ಯಾತ್ಮಿಕ ಜ್ಞಾನದ ಮಾರ್ಗವಾಗಿರುವ ಸತ್ಸಂಗದಿಂದ ಒಳ್ಳೆಯ ಚಿಂತನೆಗಳು ಮತ್ತು ಸದ್ಗುಣಗಳು ಬೆಳೆದು, ಜೀವನದ ಮೌಲ್ಯಗಳು ಮತ್ತು ಸತ್ಯದ ಅರಿವು ಮೂಡುತ್ತದೆ ಎಂದು ಹೇಳಿದರು. ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಮೂಡಲಗಿ ಘಟಕವು ವಿನುತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವದು ಶ್ಲಾಘನೀಯವೆಂದು ಗೋಕಾಕ ಶೂನ್ಯಸಂಪಾದನ ಮಠದ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ಹೇಳಿದರು

ಶನಿವಾರ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಜ್ಞಾನದೀಪ್ತಿ ಫೌಂಡೇಶನ್, ಮೂಡಲಗಿ ಇವುಗಳ ಸಹಯೋಗದಲ್ಲಿ ಪಟ್ಟಣದ ಶ್ರೀ ಸತ್ಯಸಾಯಿ ಮಂದಿರದಲ್ಲಿ 43ನೇ ಬೆಳದಿಂಗಳ ಸಾಹಿತ್ಯ ಚಿಂತನ ಮಂಥನ ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ವಹಿಸಿ ಮಾತನಾಡಿದರು,

ಕ.ಸಾ.ಪ ಅಧ್ಯಕ್ಷ, ಡಾ. ಸಂಜಯ ಶಿಂದಿಹಟ್ಟಿ ಮಾತನಾಡಿ, ಶರಣರ ವಚನಗಳಲ್ಲಿನ ಆತ್ಮವಿಮರ್ಶೆ ವಚನ ಸಾಹಿತ್ಯದ ಆತ್ಮವಿದ್ದಂತೆ, ಶರಣರು ಹೊರಗಿನ ಜಗತ್ತನ್ನು



ಟೀಕಿಸುವುದಕ್ಕಿಂತ ಮೊದಲು ತಮ್ಮೊಳಗೆ ಇರುವ ಲೋಪ ದೋಷಗಳನ್ನು ಪರೀಕ್ಷಿಸಿಕೊಳ್ಳಲು ಹೆಚ್ಚಿನ ಮಹತ್ವ ನೀಡಬೇಕೆಂಬುವದನ್ನು ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಅಕ್ಕಮಹಾದೇವಿ ಹೀಗೆ ಮುಂತಾದ ಶರಣರ ದೃಷ್ಟಿಕೋಣಗಳ ವಚನಗಳ ಮೂಲಕ ವಿವರಿಸಿದರು.

ಕಾರ್ಯಕ್ರಮದಲ್ಲಿ ಬಟಕುರ್ಕಿಯ ಶ್ರೀ ಬಸವಲಿಂಗ ಸ್ವಾಮೀಜಿ, ಹನುಮಂತ ಸೊರಗಾವಿ ವೇದಿಕೆಯಲ್ಲಿದ್ದರು. ಪ್ರವೀಣ ದೇಸುರಕರ, ವಿಜಯಲಕ್ಷ್ಮೀ ಬುದ್ನಿ ಅನ್ನಸಂತರ್ಪಣೆ ಸೇವೆ ಮಾಡಿದರು.

ಕಾರ್ಯಕ್ರಮದಲ್ಲಿ ಎ ಎಚ್ ವಂಟಗೋಡಿ, ಬಿ ವೈ ಶಿವಾಪುರ, ಬಿ ಆರ್ ತರಕಾರ, ಆರ್ ಟಿ ಲಂಕೇಪ್ಪನವರ, ವಿ ಎಸ್ ಹಂಚಿನಾಳ, ಸುಭಾಷ ಕುರಣೆ, ಶಿವಾನಂದ ಕಿತ್ತೂರು, ಸಂತೋಷ ಪಾಟೀಲ್, ಸಿದ್ರಾಮ ದ್ಯಾಗನಟ್ಟಿ, ಮಹಾದೇವ ಜಿಡ್ಡಿಮನಿ, ಸುಭಾಷ ಮಾವಿನಂದಿ, ಶಿವಾನಂದ ಕುಂಬಾರ, ಮಹೇಶ ಹಿರೇಮಠ್, ಭಾಗೀರಥಿ ಕುಳಲಿ, ಅಧಿಕ ಸಂಖ್ಯೆಯಲ್ಲಿ ಸಾಹಿತ್ಯಸಕ್ತರು ಹಾಗೂ ಶ್ರೀ ಸಾಯಿ ಸದ್ಭಕ್ತರು ಪಾಲ್ಗೊಂಡಿದ್ದರು.

ಮಾಧವಿ ಸೋನಾವಾಲ್ಕರ ಪ್ರಾರ್ಥನೆ, ಪ್ರಶಾಂತ ಮಲ್ಲನಗೌಡರ ವಚನ ಗಾಯನ, ಸುರೇಶ ಲಂಕೇಪ್ಪನವರ ಪ್ರಾಸ್ಥಾವಿಕ, ಮಹಾವೀರ ಸಲ್ಲಾಗೋಳ ನಿರೂಪಣೆ ಹಾಗೂ ಸಿ ಎಸ್ ಮೋಹಿತೆ ವಂದನಾರ್ಪಣೆಯನ್ನು ನಿರ್ವಹಿಸಿದರು.

## ಹೂಗಾರಗೆ ಉತ್ತಮ ಉಪನ್ಯಾಸಕ ಪ್ರಶಸ್ತಿ



**ಜಮಖಂಡಿ:** ನೆರೆಯ ಗೋವಾ ರಾಜ್ಯದ ಮಡಗಾಂವದಲ್ಲಿ ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ತಾಲೂಕಿನ ಹುನ್ನೂರ ಸರಕಾರಿ ಪದವಿಪೂರ್ವ ಕಾಲೇಜಿನ ಗಣಿತಶಾಸ್ತ್ರ ಉಪನ್ಯಾಸಕ ಆನಂದ ಹೂಗಾರ ಅವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿದೆ.

ಇದೇ ಸಂದರ್ಭದಲ್ಲಿ ಗೋವಾ ರಾಜ್ಯದ ಶಿಕ್ಷಣ ಇಲಾಖೆ ಸಮಗ್ರ ಶಿಕ್ಷಣ ನಿರ್ದೇಶನಾಲಯದ ಸಂಯೋಜಕ ಜಾನ್ ಸಿಲ್ವೆಸ್ಟ್ರ ಸಿಲ್ವೇರಿಯಾ, ಯೋಗಿರಾಜ ದಿಗಂಬರಕಾಮತ್, ರಾಜನ ತಾಲಕ್, ಜಯಮೋಲ ನಾಯಕ, ಡಾ.ಕೀರ್ತಿ ನಾಯಕ, ಜಮಖಂಡಿ ಲಯನ್ಸ ಕ್ಲಬ್ ಸದಸ್ಯ, ಜಿ.ಎಲ್.ಟಿ. ಸದಸ್ಯ ಎಸ್.ಎಂ.ಕುಂಬಾರ ಇದ್ದರು.

ಉತ್ತಮ ಶಿಕ್ಷಕ ಪ್ರಶಸ್ತಿಯಲ್ಲಿ ಗೋವಾ ರಾಜ್ಯದಿಂದ 40 ಮತ್ತು ಕರ್ನಾಟಕದಿಂದ 12 ಜನ ಶಿಕ್ಷಕರು ಪ್ರಶಸ್ತಿಗೆ ಆಯ್ಕೆಗೊಂಡಿದ್ದರು. ಪ್ರಶಸ್ತಿಗೆ ಆಯ್ಕೆಗೊಂಡಿದ್ದ ಶಿಕ್ಷಕರಿಗೆ ಪ್ರಮಾಣ ಪತ್ರ ಮತ್ತು ಪ್ರಶಸ್ತಿ ನೀಡಿ ಗೌರವಿಸಲಾಯಿತು. ಹುನ್ನೂರಿನ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ಸನ್ 2013ರಿಂದ ಗಣಿತಶಾಸ್ತ್ರ ಉಪನ್ಯಾಸಕರಾಗಿ ಆನಂದ ಹೂಗಾರ ವಿಷಯ ಬೋಧನೆ ಮಾಡುತ್ತಿದ್ದಾರೆ. ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆದಿದ್ದಾರೆ. ಜಿಲ್ಲಾ ಹಾಗೂ ರಾಜ್ಯಮಟ್ಟದ ಸಂಪನ್ಮೂಲ ವ್ಯಕ್ತಿಯಾಗಿ ಕ್ರಿಯಾಶೀಲರಾಗಿ ಗುರುತಿಸಿಕೊಂಡಿದ್ದಾರೆ. ಅವರ ಸೇವೆಯನ್ನು ಲಯನ್ಸ್ ಸಂಸ್ಥೆ ಪ್ರಶಸ್ತಿ ನೀಡಿ ಗೌರವಿಸಿದೆ.

# ಪಿಎಂ ಧನ್-ಧಾನ್ಯ ಕೃಷಿ ಯೋಜನೆಗಳಿಗೆ ಚಾಲನೆ

**ಬಾಗಲಕೋಟೆ:** ಭಾರತ ಸರ್ಕಾರದ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಹಾಗೂ ಗ್ರಾಮೀಣ ಅಭಿವೃದ್ಧಿ ಸಚಿವಾಲಯದಿಂದ 2025 ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಧನ್-ಧಾನ್ಯ ಕೃಷಿ ಯೋಜನೆ ಮತ್ತು ದ್ವಿದಳ ಧಾನ್ಯಗಳ ಸ್ವಾವಲಂಬನೆ ಮಿಷನ್ ಶುಭಾರಂಭ ಮತ್ತು ಕೃಷಿ ಮೂಲ ಸೌಕರ್ಯ ನಿಧಿ, ಪಶು ಸಂಗೋಪನೆ, ಮೀನುಗಾರಿಕೆ ಮತ್ತು ಆಹಾರ ಸಂಸ್ಕರಣ ವಲಯದ 2100 ಕ್ಕೂ ಹೆಚ್ಚು ಯೋಜನೆಗಳ ಉದ್ಘಾಟನೆ ಮತ್ತು ಶಿಲಾನ್ಯಾಸ ಕಾರ್ಯಕ್ರಮದ ನೇರ ಪ್ರಸಾರವನ್ನು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ವೀಕ್ಷಣೆ ಮಾಡಿ ಜಿಲ್ಲೆಯಲ್ಲಿ ಚಾಲನೆ ನೀಡಿದರು.

ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾದ ಪಿಎಂ ಧನ್-ಧಾನ್ಯ ಕೃಷಿ ಯೋಜನೆಗಳ ಉದ್ಘಾಟನೆ ಮತ್ತು ಶಿಲಾನ್ಯಾಸ ನೇರ ಪ್ರಸಾರದಲ್ಲಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿಜಿಯವರು ಈ ಯೋಜನೆಯು ಕೃಷಿ ಕ್ಷೇತ್ರದಲ್ಲಿ ಸಮಗ್ರ ಅಭಿವೃದ್ದಿಯನ್ನು ಹೊಂದುವ ಗುರಿಯೊಂದಿದ್ದು, ರೈತರಿಗೆ ಆರ್ಥಿಕ ಬಲ, ಉತ್ಪಾದಕತೆ, ಸಂಗ್ರಹಣಾ ಸೌಲಭ್ಯ ಮತ್ತು ಮಾರುಕಟ್ಟೆ ಸಂಪರ್ಕವನ್ನು ಬಲಪಡಿಸುವುದು ಈ ಯೋಜನೆಯ ಮುಖ್ಯ ಗುರಿಯಾಗಿದೆ ಎಂದರು.

ಕೃಷಿ ಮೂಲ ಸೌಕರ್ಯ ನಿಧಿ ಯೋಜನೆಯಲ್ಲಿ ರೈತರ ಉತ್ಪಾದನಾ ವ್ಯವಸ್ಥೆಗೆ ಅಗತ್ಯವಾದ ಗೋದಾಮು, ಸಂಸ್ಕರಣಾ ಘಟಕಗಳು ಮತ್ತು ಮಾರುಕಟ್ಟೆ ಮೂಲ ಸೌಕರ್ಯ ನಿರ್ಮಿಸಲು ಸಾಲ ಸೌಲಭ್ಯ ಒದಗಿಸುವ ಗುರಿ ಹೊಂದಿದೆ. ಈ ನಿಧಿಯಡಿ ಪ್ರಾರಂಭವಾಗುವ 2100 ಕ್ಕೂ ಹೆಚ್ಚು ಯೋಜನೆಗಳು ಗ್ರಾಮಿಣ ಪ್ರದೇಶದಲ್ಲಿ ಕೃಷಿಯ ಮೌಲ್ಯ ಬಲಪಡಿಸುತ್ತವೆ. ಪಶುಸಂಗೋಪನೆ, ಮೀನುಗಾರಿಕೆ ಮತ್ತು ಆಹಾರ ಸಂಸ್ಕರಣಾ



ವಲಯಗಳನ್ನು ಒಳಗೊಂಡಂತೆ ಸಮಗ್ರ ಕೃಷಿಯ ಅಭಿವೃದ್ಧಿಯು ಈ ಯೋಜನೆಯ ಉದ್ದೇಶವಾಗಿದೆ ಎಂದು ರೈತರಿಗೆ ತಿಳಿಸಿದರು.

ಕಾರ್ಯಕ್ರಮ ವೀಕ್ಷಣೆ ನಂತರ ಮಾತನಾಡಿದ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಅವರು ಆಧುನಿಕ ವಿಜ್ಞಾನ ಆಧಾರಿತ ತಂತ್ರಜ್ಞಾನಗಳನ್ನು ಕೃಷಿಯಲ್ಲಿ ಅಳವಡಿಸಿಕೊಳ್ಳುವ ಅಗತ್ಯತೆಯನ್ನು ರೈತರಿಗೆ ಒತ್ತಿ ಹೇಳಿದರು. ನವೀನ ಕೃಷಿ ವಿಧಾನಗಳನ್ನು ಅನುಸರಿಸುವ ಮೂಲಕ ಉತ್ಪಾದನೆ ಹಾಗೂ ಆದಾಯವನ್ನು ಹೆಚ್ಚಿಸಬಹುದು ಎಂಬ ಸಲಹೆಯನ್ನು ರೈತರಿಗೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಮಹಾಂತೇಶ್ ಹಟ್ಟಿ ಮತ್ತು ಜಂಟಿ ಕೃಷಿ ನಿರ್ದೇಶಕರಾದ ಶ್ರೀ ಲಕ್ಷ್ಮಣ ಕಳ್ಳೆಣ್ಣನವರ್ ಅವರು ಮುಖ್ಯ ಅತಿಥಿಗಳಾಗಿ ನೇರ ಪ್ರಸಾರದ ಕಾರ್ಯಕ್ರಮವನ್ನು ವಿಕ್ಷೀಸಿ ರೈತರನ್ನು ಪ್ರೋತ್ಸಾಹಿಸಿದರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಗುರುದತ್ತ ಹೆಗಡೆ ಅವರು ಈ ಕಾರ್ಯಕ್ರಮವನ್ನು ಉದ್ದೇಶಿಸಿ ಪ್ರಾಸ್ತಾವಿಕವಾಗಿ ಮಾಹಿತಿಯನ್ನು ನೀಡಿ ನೇರ ಪ್ರಸಾರದ ಮಾಹಿತಿಯನ್ನು ಕನ್ನಡದಲ್ಲಿ ಅನುವಾದ ಮಾಡಿ ರೈತರಿಗೆ ತಿಳಿಸಿದರು. ಸುಮಾರು 150ಕ್ಕೂ ಹೆಚ್ಚು ರೈತರು ಕೇಂದ್ರದಲ್ಲಿ ನೇರ ಪ್ರಸಾರ ವೀಕ್ಷಿಸಿದರು ಹಾಗೂ 500ಕ್ಕೂ ಹೆಚ್ಚು ರೈತರು ಮತ್ತು ರೈತ ಮಹಿಳೆಯರು ವಾಟ್ಸಪ್ ಲಿಂಕ್‌ಗಳ ಮೂಲಕ ಆನ್‌ಲೈನ್‌ನಲ್ಲಿ ಪ್ರಧಾನಮಂತ್ರಿಗಳ ಕಾರ್ಯಕ್ರಮವನ್ನು ವೀಕ್ಷಿಸಿದರು.

ಈ ಸಂದರ್ಭದಲ್ಲಿ ಮುಂಚೂಣಿ ಪ್ರಾತ್ಯಕ್ಷತೆಯಡಿಯಲ್ಲಿ ಅತ್ಯಾವಶ್ಯಕ ಕೃಷಿ ಪರಿಕರಗಳ ವಿತರಣೆ ಕಾರ್ಯಕ್ರಮವೂ ನಡೆಯಿತು. ಕಾರ್ಯಕ್ರಮದಲ್ಲಿ ಡಾ. ವೆಂಕಣ್ಣ ಬಳಗಾನೂರ, ಡಾ. ಭವ್ಯ ಎಂ. ಆರ್, ಡಾ. ರಮಿತಾ ಬಿ.ಇ., ಡಾ. ಸಿದ್ದಪ್ಪ ಅಂಗಡಿ ಮತ್ತು ಡಾ. ಬಸವರಾಜ ನಾಗಲೀಕರ ಸೇರಿದಂತೆ ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ವಿಜ್ಞಾನಿಗಳು ಉಪಸ್ಥಿತರಿದ್ದರು ಹಾಗೂ ಹಿಂಗಾರು ಬೆಳೆಗಳ ಕುರಿತು ರೈತರಿಗೆ ಮಾಹಿತಿಯನ್ನು ನೀಡಿದರು. ರೈತರು ಪ್ರಧಾನಮಂತ್ರಿಗಳ ನೇರ ಸಂದೇಶವನ್ನು ಗಮನದಿಂದ ಆಲಿಸಿ, ಕೃಷಿ ಅಭಿವೃದ್ಧಿಯತ್ತ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಶ್ಲಾಘಿಸಿದರು.

## ಆರ್‌ಎಸ್‌ಎಸ್ ಶತಮಾನೋತ್ಸವ ಸಮಾರಂಭ

**ರಾಯಬಾಗ:** ರಾಷ್ಟ್ರೀಯ ಸ್ವಯಂ ಸೇವಕ ಸಂಘವು ದೇಶದ ಪ್ರತಿಯೊಬ್ಬ ಭಾರತೀಯನಲ್ಲಿ ರಾಷ್ಟ್ರಾಭಿಮಾನ ಬೆಳಸುವ ಸಂಘಟನೆಯೆಂದು ಎಂದು ಚಿಕ್ಕೋಡಿ ಜಿಲ್ಲಾ ಆರ್.ಎಸ್.ಎಸ್ ಸಂಚಾಲಕ ಸಂಜಯ ಅಡಿಕೆ ಹೇಳಿದರು.

ಶನಿವಾರ ಸಾಯಂಕಾಲ ಪಟ್ಟಣದ ಮಹಾವೀರ ಆಂಗ್ಲ ಮಾಧ್ಯಮ ಶಾಲೆ ಆವರಣದಲ್ಲಿ ಆರ್.ಎಸ್.ಎಸ್. ದಿಂದ ಹಮ್ಮಿಕೊಂಡಿದ್ದ ವಿಜಯ ದಶಮಿ ಉತ್ಸವ ಹಾಗೂ ಆರ್.ಎಸ್.ಎಸ್ ಶತಮಾನೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಆರ್.ಎಸ್.ಎಸ್ ರಾಷ್ಟ್ರದ ನಾಗರಿಕರಲ್ಲಿ ರಾಷ್ಟ್ರೀಯ ಮನೋಭಾವ ಬೆಳೆಸುವ ಮತ್ತು ಶಿಸ್ತಿನ ಸಂಘವಾಗಿದೆ ಎಂದರು.

ಪಟ್ಟಣದ ಪ್ರಮುಖ ರಸ್ತೆ ಮತ್ತು ಬೀದಿಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವತಿಯಿಂದ ಗಣಧಾರಿಗಳ ಶಿಸ್ತಿನ ಪಥ ಸಂಚಲನ ನಡೆಯಿತು. ಪಥ ಸಂಚಲನದಲ್ಲಿ ವಿಧಾನ ಪರಿಷತ್ತ ಮಾಜಿ ಸದಸ್ಯ ವಿವೇಕರಾವ ಪಾಟೀಲ, ಶಾಸಕ ಡಿ.ಎಮ್.ಐಹೊಳೆ, ಮಾಜಿ ಶಾಸಕ ಪಿ.ರಾಜೀವ, ಭರತೇಶ ಬನವಣೆ, ಸದಾಶಿವ ದೇಶಿಂಗೆ, ವೆಂಕಟೇಶ ದೇಶಪಾಂಡೆ, ಅಣ್ಣಾಸಾಹೇಬ ಕುಲಗುಡೆ, ಸದಾನಂದ ಹಳಿಂಗಳಿ, ರಾಜು ದೇಶಪಾಂಡೆ. ಪ್ರಭಾಕರ ಪುರಾಣಿಕ, ಅಶೋಕ ಅಂಗಡಿ, ಪೃಥ್ವಿರಾಜ ಜಾಧವ, ಸತ್ಯಕುಮಾರ ಬಿರಾಜ ಏಕನಾಥ ಮಾಚಕನೂರ ಅನಿಲ್ ಶೆಟ್ಟಿ ಕೃಷ್ಣ ನಾಯ್ಕ್ ಡಾಕ್ಟರ್ ಸದಾನಂದ ನಾಯಕ್ ಪುಟ್ಟು ತೇಲಿ ಸುರೇಶ್ ನಾಯಕ್ ಯಲ್ಲಾಲಿಂಗ ಕಿಚಡೆ ಹಾಗೂ ತಾಲೂಕಿನಿಂದ ಸಾವಿರಾರು ಗನ ಸೇವಕರು ಪಾಲ್ಗೊಂಡಿದ್ದರು.



## ಆಕಾಶದ ಅಧ್ಯಯನದಿಂದ ತಾಂತ್ರಿಕ ಪ್ರಗತಿಯತ್ತ: ಪಟೇವಾಲೆ

**ವಿಜಯಪುರ:** ಸಿಕ್ಯಾಬ್ ಇನ್ಸಿಟ್ಯೂಟ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗಾಗಿ ರೆಡಿಯೋ ಖಗೋಳಶಾಸ್ತ್ರದ ಸವಾಲುಗಳು ಅವಕಾಶಗಳು ಎಂಬ ಒಂದು ದಿನದ ತಾಂತ್ರಿಕ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ತಮಿಳುನಾಡಿನ ಊಟಿಯಲ್ಲಿರುವ ನ್ಯಾಷನಲ್ ಸೆಂಟರ್ ಫಾರ್ ರೆಡಿಯೋ ಅಸ್ಟ್ರೋಫಿಸಿಕ್ಸ್‌ನ ಎಲೆಕ್ಟ್ರಾನಿಕ್ಸ್ ಎಂಜಿನಿಯರಾದ ಅಬ್ದುಲ್ ಖಾದರ್ ಪಟೇವಾಲೆ.

1971 ರಲ್ಲಿ ನಿರ್ಮಿಸಲಾದ ಖಗೋಳಶಾಸ್ತ್ರ ಪಠ್ಯಪುಸ್ತಕವು ದೇಶೀಯ ವಿಜ್ಞಾನ ಕ್ಷೇತ್ರಕ್ಕೆ ಹೊಸ ಪ್ರೇರಣೆ ನೀಡಿದೆ. ಪ್ರಾಚೀನ ವೈದ್ಯರು ಮತ್ತು ವಿಜ್ಞಾನಿಗಳು ವಿದ್ಯಾರ್ಥಿಗಳಿಗೆ ಆಕಾಶ ಮತ್ತು ನಕ್ಷತ್ರಗಳ ಅಧ್ಯಯನವನ್ನು ಕಲಿಸಲು ಶ್ರಮಿಸಿದ್ದಾರೆ. ಮಧ್ಯಯುಗದಲ್ಲಿ ಹಲವಾರು ವಿಜ್ಞಾನಿಗಳು ತಮ್ಮ ಸ್ಮರಣೆ ಮತ್ತು ಅನುಭವದ ಆಧಾರದಲ್ಲಿ ಸೂರ್ಯಗ್ರಹಣ ಮುಂತಾದ ಖಗೋಳದ ಘಟನೆಗಳನ್ನು ಊಹಿಸುತ್ತಿದ್ದರು. ಕಾಲಮಾನದ ನಿಖರ ಅಳತೆಯ ಕೊರತೆಯಿಂದ ಕೆಲವೊಮ್ಮೆ ಊಹೆಗಳು ತಪ್ಪಾಗಿರುತ್ತವೆ. ಎಂದು ಈ ಸವಾಲುಗಳೇ




ನೂತನ ವೈಜ್ಞಾನಿಕ ಅಧ್ಯಯನಕ್ಕೆ ಪ್ರೇರಣೆ ನೀಡಿತು. ನಮ್ಮ ಗ್ರಹಗಳು , ಆಕಾಶ ಮತ್ತು ವಿಸ್ತೀರ್ಣವಾದದನ್ನು ತಿಳಿದುಕೊಳ್ಳಲು ಈ ಅಧ್ಯಯನ ಬಹುಮುಖ್ಯವಾಗಿದೆ. ಹಾಗಾಗಿ ರೇಡಿಯೋ ಜಗತ್ತಿನ ಬಗ್ಗೆ ಇಂಜಿನಿಯರಿಂಗ್ ವಿದ್ಯಾರ್ಥಿಗಳು ತಿಳಿದು ಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆಂದು ಅವರು ವಿದ್ಯಾರ್ಥಿಗಳಿಗೆ ಹೇಳಿದರು.

ಕಾರ್ಯಕ್ರಮದಲ್ಲಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯರಾದ ಡಾ, ಸೈಯದ್ ಅಬ್ಬಾಸ್ ಅಲಿ, ಡಾ. ಅಸ್ಲಂ ಕರ್ಜಗಿ, ಡಾ. ರವಿ ಹೊಸಮನಿ, ಡಾ. ಮಹಮ್ಮದ್ ಜಿಯಾವುಲ್ಲಾ ಚೌಧರಿ, ಪ್ರೊ. ಸಾದಿಕ್ ಮುಜಾವರ, ಡಾ. ವಸಿಂ ನಿಡಗುಂದಿ, ಪ್ರೊ. ಬೇನಜೀರ್ ಮುಂತೆಸಿರ್, ಪ್ರೊ. ಆರೀಫ್ ಮಕಾಂದಾರ ಪ್ರೊ. ಎಂ ಆರ್ ಚಿಕ್ಕೊಂಡ ಹಾಗೂ ವಿದ್ಯಾರ್ಥಿಗಳು ಭಾಗಿಯಾಗಿದ್ದರು.

## ಶ್ರೀಕೃಷ್ಣನ ಮಹಾಪೂಜೆಗಾಗಿ ಆಹ್ವಾನ

**ಮುದ್ದೇಬಿಹಾಳ:** ಜನೆವರಿ 18, 2026 ರಿಂದ 2028 ಜನೆವರಿ 17 ವರೆಗೆ ಉಡುಪಿ ಶ್ರೀ ಕೃಷ್ಣನ ಮಹಾಪೂಜೆ ನೆರವೇರುತ್ತಿದ್ದ ಕುರಿತು ಮನೆಮನೆಗೆ ಆಮಂತ್ರಣ ನೀಡಲು ಪ್ರಾರಂಭಗೊಂಡಿದೆ. ಈ ಪೂಜೆಗಾಗಿ ಆಮಂತ್ರಣ ನೀಡಲು ಉಡುಪಿಯಿಂದ ಆಗಮಿಸಿದ ಪೂರ್ವಭಾವಿ ಪರ್ಯಾಯ ಸಂಚಾರದ ತಂಡ ಮುದ್ದೇಬಿಹಾಳಕ್ಕೆ ಆಗಮಿಸಿ ಶ್ರೀ ರಾಘವೇಂದ್ರ ಸ್ವಾಮಿಗಳ ಸನ್ನಿದಾನಕ್ಕೂ ಕೂಡಾ ಆಮಂತ್ರಣ ನೀಡಿ ತಂಡ ಮುಂದುವರೆಯಿತು. ಸಂಭಂದಿತ 8 ಮಠಗಳಲ್ಲಿ ಪ್ರತೀ 2 ವರ್ಷಕ್ಕೆ ಸೇವೆ ಸಲ್ಲಿಸುತ್ತಾ ಸಾಗಿಬರಲಾಗಿದ್ದು ಈಗಾಗಲೇ ಪೂರ್ವಭಾವಿ ಪರ್ಯಾಯ ಸಂಚಾರ ತಂಡ ಮುದ್ದೇಬಿಹಾಳ, ಯಲಗೂರ, ಸಿಂದಗಿ, ನಾರಾಯಣಪೂರ, ವಿಜಯಪುರ ಕಲ್ಬುರ್ಗಿ ಕಡೆ ಸಾಗಲಿದೆ. ಒಟ್ಟು 6 ಜಿಲ್ಲೆಗಳಿಗೆ ಜನೇವರಿ 1 ರವರೆಗೆ ಈ ಆಮಂತ್ರಣ ತಲುಪಬೇಕಾಗಿದ್ದು ಅಕ್ಕಿಮೂರ್ತ, ಬಾಳೆಮೂರ್ತ, ಈ ಮೂರ್ತಗಳಲ್ಲಿ ಈ ಸೇವಾ ಕಾರ್ಯ ಮಾಡಬೇಕಾಗಿದೆ ಈಗಾಗಲೇ ತಮಿಳುನಾಡಿನಲ್ಲಿ ಪೂರ್ವಬಾವಿ ಸಂಚಾರದ ವ್ಯವಸ್ಥೆ ಮುಗಿಸಿಬರಲಾಗಿದ್ದು ಉಡುಪಿ ಶ್ರೀಕೃಷ್ಣ ಮಠದ ಇನ್ನೂ ಕೆಲವು ಸಂಭಂದಿತ ಮಠಗಳಿಗೆ ತಂಡ ಭೆಟ್ಟಿ ನೀಡಲಿದೆ ಎಂದು ಸುಭಾಸ ಕುಲಕರ್ಣಿ ಅವರು ತಿಳಿಸಿದ್ದಾರೆ.



# ಆರ್‌ಎಸ್‌ಎಸ್ ಭವ್ಯ ಪಥಸಂಚಲನ



**ಮುದ್ದೇಬಿಹಾಳ:** ಪಟ್ಟಣದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದಿಂದ ಸಂಘದ100 ನೇ ಶತಾಬ್ದಿ ಅಂಗವಾಗಿ ಭವ್ಯ ಪಥಸಂಚಲನ ನಡೆಯಿತು.

ಮೆರವಣಿಗೆಯಲ್ಲಿ ಭಾರತ ಮಾತೆಯ ಹಾಗೂ ಡಾಕ್ಟರ್ ಜೀ, ಗುರೂಜೀ ಮತ್ತು ಭಗವಾಧ್ವಜದ ಮೆರವಣಿಗೆ ಘೋಷದೂಂದಿಗೆ ನೆರವೇರಿಸಲಾಯಿತು.

ನಾಲ್ಕು ಗಂಟಗೆ ಆರಂಭವಾದ ಪಥಸಂಚಲನ ಪಟ್ಟಣದ ಪ್ರಮುಖ ವೃತ್ತ ಹಾಗೂ ನಿಗದಿತ ಮಾರ್ಗದಲ್ಲಿ ಅಂದಾಜು 4 ಕಿಮೀ ಸಂಚರಿಸಿ ವಿಬಿಸಿ ಮೈದಾನ ಸಾಯಂಕಾಲ5 ಗಂಟೆಗೆ ತಲುಪಿತು

ಮೆರವಣಿಗೆಯಲ್ಲಿ ಮಾಜಿ ಶಾಸಕ ಎ.ಎಸ್ ಪಾಟೀಲ್ ನಡಹಳ್ಳಿ ಗಣವೇಷ ಧರಿಸಿ ಸ್ವಯಂ ಸೇವಕರಿಗೆ ಪುಷ್ಪಾರ್ಚನೆ ಮಾಡಿದರು.

ಮೆರವಣಿಗೆ ಉದ್ದಕ್ಕೂ ಮಾತೆಯರು ರಂಗೋಲಿ ಬಿಡಿಸಿ, ಭಗನಿಯರು ಮಕ್ಕಳಿಗೆ ದೇಶಭಕ್ತರ ವೇಷಭೂಷಣ ಹಾಕಿಸಿ ದೇಶಪ್ರೇಮ ಮೆರೆದರು.

# ಸ್ವಾರ್ಥಭಾವನೆ ಬಿಟ್ಟು ಒಗ್ಗಟ್ಟಾಗಬೇಕಿದೆ: ಶ್ರೀನಿವಾಸ ಜಿ



ನಗರದ ಬೈಪಾಸ್ ರಸ್ತೆಯಲ್ಲಿರುವ ಸಮಸ್ಕಾರ ಮಂಡಳಿ ಮೈದಾನದಲ್ಲಿ ಶನಿವಾರ ಸಂಜೆ ನಡೆದ ಪಥಸಂಚಲನದ ಸಮಾರೋಪ ಸಮಾರಂಭದಲ್ಲಿ ಶ್ರೀನಿವಾಸಜೀ ಮಾತನಾಡಿದರು.

**ಜಮಖಂಡಿ:** ಹಿಂದು ಸಮಾಜ ಸಂಘಟಿತವಾಗಿ ಹೋರಾಟ ಮಾಡುವ ಅವಶ್ಯಕತೆ ಇದೆ. ಜಾತಿ, ಸ್ವಾರ್ಥಭಾವನೆ ಬಿಟ್ಟು, ಒಗ್ಗಟ್ಟಾಗಬೇಕಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಉತ್ತರ ಕರ್ನಾಟಕ ಸಹ ಪ್ರಾಂತ ಪ್ರಚಾರಕ ಶ್ರೀನಿವಾಸಜೀ ಹೇಳಿದರು.

ನಗರದ ಬೈಪಾಸ್ ರಸ್ತೆಯಲ್ಲಿರುವ ಸಮಸ್ಕಾರ ಮಂಡಳಿ ಮೈದಾನದಲ್ಲಿ ಶನಿವಾರ ಸಂಜೆ ನಡೆದ ವಿಜಯದಶಮಿ ಉತ್ಸವ ಮತ್ತು ಬೃಹತ್ ಪಥಸಂಚಲನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಜಿಹಾದಿಶಕ್ತಿಗಳು, ಕಮ್ಯುನಿಷ್ಟರು, ಜಾತಿಗಳನ್ನು ಒಡೆಯುವಂತಹ ಜಾತಿಗಣತಿಯ ನೀತಿಗಳಿಂದ ಎಚ್ಚರಿಕೆಯಿಂದ ಇರಬೇಕು. ಸಮಾಜ ಒಗ್ಗಟ್ಟಾದರೆ ಯಾರಿಂದಲೂ ಏನೂ ಮಾಡಲಾಗುವದಿಲ್ಲ. ಒಡಕಾದರೇ ವಿಭಜನೆಯಾಗುತ್ತದೆ ಎಂಬ ಸತ್ಯವನ್ನು ಅರಿತುಕೊಳ್ಳಬೇಕು. ಅದಕ್ಕಾಗಿ ಪ್ರತಿಯೊಬ್ಬ ಸ್ವಯಂಸೇವಕ ತಮ್ಮ ಮನೆಗಳಿಂದ ಇಂಥಹ ವಿಚಾರಗಳನ್ನು ಸತ್ಸಂಗದ ಮೂಲಕ ತಿಳಿಸಬೇಕು ಎಂದರು.

ದೇಶದ ಇತಿಹಾಸ ಅವಲೋಕಿಸಿದಾಗ ಸ್ವಾರ್ಥಕ್ಕಾಗಿ ಹಿಂದೂಗಳೇ ಒಬ್ಬರ ಮೇಲೊಬ್ಬರು ಯುದ್ಧಗಳನ್ನು ಮಾಡಿದ್ದಾರೆ. ಕೊಲ್ಕತ್ತಾದಲ್ಲಿ ನಡೆದ ಸ್ವತಂತ್ರ್ಯ ಚಳುವಳಿಯಲ್ಲಿ ಹಿಂದೂ-ಮುಸ್ಲಿಂರು ಒಗ್ಗಟ್ಟಾಗಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದರು, ಇದನ್ನು ಗಮನಿಸಿದ ಆಂಗ್ಲರು ಒಡೆದು ಆಳಲು ಪ್ರಾರಂಭಿಸಿದರು ಇದರಿಂದ ದೇಶಕ್ಕೆ ಹಿನ್ನಡೆಯಾಗಿ ದೇಶ ವಿಭಜನೆಯಾಯಿತು.

ನಮ್ಮಲ್ಲಿ ವಯಕ್ತಿಕ ಚಾರಿತ್ರ್ಯ, ದೈವ ಭಕ್ತಿ ಎಲ್ಲವು ಇದೆ ಆದರೆ ರಾಷ್ಟ್ರಚಾರಿತ್ರ್ಯದ ಕೊರತೆಇದೆ ಇದರಿಂದ ನಮ್ಮವರಿಂದಲೇ ನಮ್ಮ ಸಮಾಜಕ್ಕೆ ಹಾನಿಯಾಗಿದೆ. ಮತ್ತೊಂದು ಧರ್ಮದವರಿಗೆ ನೋವಾಗುತ್ತದೆ ಎಂದು ಹೇಳುವರೇ ಹಿಂದುಗಳು ಇದರಿಂದ ಸಮ್ಮ ಸಮಾಜ ಹಿಂದುಳಿಯಲು ಕಾರಣವಾಗಿದೆ. ಹಿಂದೂಗಳೆಲ್ಲರೂ ಒಂದೇ ಎಂಬ ಭಾವನೆ ಬರಬೇಕು ಇದೇ ಮನೋಭಾವವಿಟ್ಟುಕೊಂಡು ಸಂಘ ಕೆಲಸ ಮಾಡುತ್ತಿದೆ. 1.5ಲಕ್ಷಕ್ಕೂ ಹೆಚ್ಚು ಸೇವಾಕಾರ್ಯಗಳು ನಡೆಯುತ್ತಿವೆ. 48 ವಿವಿಧ ಸಂಘದ ಪರಿವಾರಗಳು ಕಾರ್ಯನಿರತವಾಗಿವೆ. ಬಲಿಷ್ಟ ಹಿಂದೂ ಸಮಾಜದ ನಿರ್ಮಾಣಕ್ಕೆ ಪ್ರತಿಯೊಬ್ಬ ಹಿಂದು ತನ್ನ ಸ್ವಾರ್ಥ ಬಿಟ್ಟು ದೇಶ ಮೊದಲು ಎಂಬ ಮನೋಭಾವದಿಂದ ಒಗ್ಗಟ್ಟಾಗಬೇಕು ಎಂದರು.

ಪಥಸಂಚಲನ; ನಮಸ್ಕಾರ ಮಂಡಳ ಹಾಗೂ ಕುಂಚನೂರು ರಸ್ತೆಯಿಂದ ಎರಡು ಪ್ರತ್ಯೇಕ ತಂಡಗಳಿಂದ ನಗರದ ಪ್ರಮುಖ ರಸ್ತೆಗಳಲ್ಲಿ ಆಕರ್ಷಕ ಪಥಸಂಚಲನ ನಡೆಯಿತು. ರಸ್ತೆಯುದ್ದಕ್ಕೂ ಸಾವಿರಾರು ಸಂಖ್ಯೆಯಲ್ಲಿ ಜನರು ಕಣ್ಮುಂಬಿಕೊಂಡರು. 8 ಘೋಷ ವಾದ್ಯಮೇಳಗಳು, 5 ಸಾವಿರಕ್ಕೂ ಜನ ಗಣವೇಶಧಾರಿಗಳು ಪಥ ಸಂಚಲನದಲ್ಲಿ ಭಾಗವಹಿಸಿದ್ದರು. ಗಣವೇಧಾರಿಗಳಿಗೆ ಮಕ್ಕಳು, ಮಹಿಳೆಯರು ದಾರಿಯುದ್ದಕ್ಕೂ ಪುಷ್ಪವೃಷ್ಟಿಗೈದು ಸಂಭ್ರಮಿಸಿದರು. ಪಥಸಂಚಲನದ ರಸ್ತೆಗಳನ್ನು ತೋರಣ, ರಂಗೋಲಿಗಳಿಂದ ಅಲಂಕರಿಸಲಾಗಿತ್ತು ಪುಟ್ಟಮಕ್ಕಳು ಭಾರತ ಮಾತೆ ಛದ್ಮವೇಷ ಅಲಂಕಾರ ಮಾಡಿಕೊಂಡಿದ್ದರು. ಅಶೋಕ ವೃತ್ತದಲ್ಲಿ ಎರಡು ತಂಡಗಳ ಸಮಾಗಮವಾಗಿ ಅಲ್ಲಿಂದ ನಮಸ್ಕಾರ ಮಂಡಳಿ ಆವರಣದವರೆಗೆ ಪಥಸಂಚಲನ ನಡೆಯಿತು. ಯಾವುದೇ ಅಹಿತರಕರ ಘಟನೆ ಸಂಬಂಧಿಸಿದಂತೆ ಪೊಲೀಸರು ಹೆಚ್ಚಿನ ಬಿಗಿ ಬಂದೊಬಸ್ತ ವ್ಯವಸ್ಥೆ ಕೈಗೊಂಡಿದ್ದರು.

ಪಡಸಲಗಿಯ ಸಾವಯವ ಕೃಷಿಕ ಮಲ್ಲಿನಾಥ ಭುಜಬಲಿ ಮಾತನಾಡಿದರು. ವೇದಿಕೆಯಲ್ಲಿ ಕಲ್ಯಾಣಮಠದ ಗೌರಿಶಂಕರ ಶಿವಾಚರ್ಯರು, ಓಲೆಮಠದ ಪ.ಪೂ. ಆನಂದದೇವರು, ರುದ್ರಸ್ವಾಮಿಪೇಠದ ಕೃಷ್ಣಾನಂದ ಅವಧೂತರು, ಮುತ್ತೂರಿನ ಗುರುಸಿದ್ದೇಶ್ವರಶ್ರೀ, ಮಾತೋಶ್ರೀಗಳಾದ ಅಕ್ಕಮಾದೇವಿಅಮ್ಮ, ಅನುಸೂಯಾ, ಸುನಂದಾತಾಯಿ, ಪ್ರಮೀಳಾತಾಯಿ, ಹನ್ನೂರಿನ ವಿಶ್ವನಾಥ ಶಾಸ್ತ್ರೀಗಳು, ಶಿವಾನಂದ ಶ್ರೀಗಳು ಸಹಿತ ಶ್ರೀಗಳು, ಮಠಾಧೀಶರು, ಶರಣರು ಇದ್ದರು.

ನಗರಕಾರ್ಯವಾಹಕ ಮಲ್ಲಿಕಾರ್ಜುನ ಇಂಗಳಗಾಂವಿ ಸ್ವಾಗತಿಸಿದರು, ಶಿವಾನಂದ ಕಾಮತನವರ ನಿರೂಪಿಸಿದರು. ವಿಜಯ ಮಡಿವಾಳ ವಂದಿಸಿದರು.

# ಆಕರ್ಷಕ ಬೃಹತ್ ಆರ್‌ಎಸ್‌ಎಸ್ ಪಥಸಂಚಲನ




**ಜಮಖಂಡಿ:** ನಗರದಲ್ಲಿ ಶನಿವಾರ ಹಬ್ಬದ ವಾತಾವಾರಣ ಸೃಷ್ಟಿಯಾಗುವ ಮೂಲಕ ಬೃಹತ್ ಪಥಸಂಚಲನಕ್ಕೆ ಸಂಪೂರ್ಣವಾಗಿ ಶೃಂಗರಿಸಲಾಗಿತ್ತು. ನಗರದ ನಮಸ್ಕಾರ ಮಂಡಳಿ ಹಮ್ಮಿಕೊಂಡಿದ್ದ ವಿಜಯದಶಮಿ ಉತ್ಸವ ಮತ್ತು ಬೃಹತ್ ಪಥಸಂಚಲನದ ಎರಡು ತಂಡಗಳನ್ನಾಗಿ ನೇಮಕ ಮಾಡಲಾಗಿತ್ತು. ಪ್ರಥಮ ತಂಡ ನಮಸ್ಕಾರ ಮಂಡಳ ಮೈದಾನದಿಂದ ಆರಂಭಗೊಂಡ ಪಥಷಂಚನದಲ್ಲಿ 2500 ಹೆಚ್ಚು ಗಣವೇಷಧಾರಿಗಳು ಪಾಲ್ಗೊಂಡಿದ್ದರು.

ನಂತರ ಎರಡನೇಯ ತಂಡ ನಗರದ ಕುಂಚನೂರ ರಸ್ತೆಯಲ್ಲಿರುವ ಸಂತೆ ಮೈದಾನದಿಂದ ಆರಂಭಗೊಂಡ ಪಥಸಂಚಲನದಲ್ಲಿ 2500 ಕ್ಕೂ ಹೆಚ್ಚು ಗಣ ವೇಷಧಾರಿಗಳು ಪಾಲ್ಗೊಂಡಿದ್ದರು.

ನಮಸ್ಕಾರ ಮಂಡಳ ಹಾಗೂ ಕುಂಚನೂರು ರಸ್ತೆಯಿಂದ ಎರಡು ತಂಡಗಳಿಂದ ನಗರದ ಪ್ರಮುಖ ರಸ್ತೆಗಳಲ್ಲಿ ಆಕರ್ಷಕ ಪಥಸಂಚಲನ ನಡೆಯಿತು. ರಸ್ತೆಯುದ್ದಕ್ಕೂ ಸಾವಿರಾರು ಸಂಖ್ಯೆಯಲ್ಲಿ ಜನರು ಕಣ್ಮುಂಬಿಕೊಂಡರು. 8 ಘೋಷ ವಾದ್ಯಮೇಳಗಳು, 5 ಸಾವಿರಕ್ಕೂ ಜನ ಗಣವೇಶಧಾರಿಗಳು ಪಥ ಸಂಚಲನದಲ್ಲಿ ಭಾಗವಹಿಸಿದ್ದರು. ಗಣವೇಧಾರಿಗಳಿಗೆ ಮಕ್ಕಳು, ಮಹಿಳೆಯರು ದಾರಿಯುದ್ದಕ್ಕೂ ಪುಷ್ಪವೃಷ್ಟಿಗೈದು ಸಂಭ್ರಮಿಸಿದರು. ಪಥಸಂಚಲನದ ರಸ್ತೆಗಳನ್ನು ತೋರಣ, ರಂಗೋಲಿಗಳಿಂದ ಅಲಂಕರಿಸಲಾಗಿತ್ತು ಪುಟ್ಟಮಕ್ಕಳು ಭಾರತಮಾತೆ ಛದ್ಮವೇಷ ಅಲಂಕಾರ ಮಾಡಿಕೊಂಡಿದ್ದರು.

ನಮಸ್ಕಾರ ಮಂಡಳಿ ಆರಂಭಗೊಂಡ ತಂಡ ಮತ್ತು ಕುಂಚನೂರ ರಸ್ತೆಯಿಂದ ಆರಂಭಗೊಂಡ ಗಣವೇಧಾರಿಗಳ ಎರಡು ತಂಡಗ:ಳು ನಗರದ ಅಶೋಕ ವೃತ್ತದಲ್ಲಿ ಸಮಾಗಮಗೊಂಡು ಬೈಪಾಸ್ ರಸ್ತೆಯಲ್ಲಿರುವ ನಮಸ್ಕಾರ ಮಂಡಳಿ ಮೈದಾನದವರೆಗೆ ಪೊಲೀಸ ಬಿಗಿ ಬಂದೊಬಸ್ತ ಆಕರ್ಷಕ ಪಥಸಂಚಲನ ನಡೆಯಿತು.



## ನಾಮ ನಿರ್ದೇಶಕರಾಗಿ ಅಜೀತಕುಮಾರ ಆಯ್ಕೆ

**ಯರಗಟ್ಟಿ:** ಬೆಳಗಾವಿ ಜಿಲ್ಲಾ ಕೆ.ಎಂ.ಎಫ್. ಅಧ್ಯಕ್ಷರಾದ ಬಾಲಚಂದ್ರ ಜಾರಕಿಹೊಳಿ ಹಾಗೂ ಸವದತ್ತಿ ಮಂಡಲದ ಬಿಜೆಪಿ ಅಧ್ಯಕ್ಷ ವಿರೂಪಾಕ್ಷ ಮಾಮನಿ ನೇತೃತ್ವದಲ್ಲಿ ಯರಗಟ್ಟಿ ಭಾಗದ ಮಾಜಿ ಜಿ. ಪಂ. ಸದಸ್ಯ ಅಜೀತಕುಮಾರ ದೇಸಾಯಿ ಅವರನ್ನು ಬೆಳಗಾವಿ ಜಿಲ್ಲಾ ಕೆ.ಎಂ.ಎಫ್. ನಾಮ ನಿರ್ದೇಶನ ಸದಸ್ಯರನ್ನಾಗಿ ಆಯ್ಕೆ ಮಾಡಿ ಘೋಷಣಾ ಪತ್ರವನ್ನು ನೀಡಲಾಯಿತು.ಈ ವೇಳೆ ಬೆಳಗಾವಿ ತಾಲೂಕು ಹುಟ್ಟುವಳಿ ಮಾರಾಟ ಸಂಘದ ಅಧ್ಯಕ್ಷ ಶಂಕರಗೌಡ ಪಾಟೀಲ, ಶೇಖರ ಗೋಕಾಂವಿ, ರಾಜು ನಿಡವನಿ, ಮಾಹಂತೇಶ ಯಕ್ಕೇರಿ ಸೇರಿದಂತ ಅನೇಕರು ಇದ್ದರು.



**ಯರಗಟ್ಟಿ:** ಬೆಳಗಾವಿ ಡಿಸಿಸಿ ಬ್ಯಾಂಕ್ ಚುನಾವಣೆಗೆ ಸವದತ್ತಿ ಕ್ಷೇತ್ರದಿಂದ ಅವಿರೋದ ಆಯ್ಕೆ ಖಚಿತಗೊಳ್ಳುತ್ತಿದ್ದಂತೆ ವಿರೂಪಾಕ್ಷ ಮಾಮನಿ ಮತ್ತು ಬಿಜೆಪಿ ಬೆಂಬಲಿಗರು ಶನಿವಾರ ಯರಗಟ್ಟಿ ಪಟ್ಟಣದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ವಿಜಯೋತ್ಸವ ಆಚರಿಸಿದರು.

# ಸಮಾಜ ಹಿರಿಯರನ್ನು ಗೌರವದಿಂದ ಕಾಣಬೇಕು: ನ್ಯಾ. ಘಟ್ಟಿ

**ಬಸವನಬಾಗೇವಾಡಿ:** ಸಮಾಜಕ್ಕೆ ಹಿರಿಯರ ಮಾರ್ಗದರ್ಶನ ನಿರಂತರವಾಗಿ ಇದ್ದರೆ ಸಮಾಜವು ಸುಸ್ಥಿರವಾಗಿ ಇರಲು ಸಾಧ್ಯ. ಈ ನಿಟ್ಟಿನಲ್ಲಿ ಸಮಾಜವು ಹಿರಿಯರನ್ನು ಗೌರವದಿಂದ ಕಾಣುವಂತಾಗಬೇಕೆಂದು ಸಿವ್ಹಿಲ್ ನ್ಯಾಯಾಧೀಶ ಅಮಿತ ಘಟ್ಟಿ ಹೇಳಿದರು.



ಪಟ್ಟಣದ ಕಾಳಿಕಾದೇವಿದ ಕಲ್ಯಾಣ ಮಂಟಪದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕರ ಸೇವಾ ವೇದಿಕೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾವೆಲ್ಲರೂ ಹಿರಿಯರಿಂದ ಅನೇಕ ವಿಷಯಗಳನ್ನು ಕಲಿತುಕೊಂಡು ಜೀವನವನ್ನು ಸನ್ಮಾರ್ಗದಲ್ಲಿ ನಡೆಯುವಂತೆ ರೂಪಿಸಿಕೊಂಡಿದ್ದೇವೆ. ಹಿರಿಯರು ತಮ್ಮ ಕುಟುಂಬದ ಎಲ್ಲ ಸದಸ್ಯರನ್ನು ಚೆನ್ನಾಗಿ ಬೆಳೆಸುವಲ್ಲಿ ತಮ್ಮ ಜೀವನ ತ್ಯಾಗ ಮಾಡುವದನ್ನು ಕಾಣುತ್ತೇವೆ. ಇಂದು ಕುಟುಂಬ ವ್ಯವಸ್ಥೆಯಲ್ಲಿ ಹಿರಿಯರನ್ನು ತಾತ್ಸಾರ ಭಾವದಿಂದ ಕಾಣುವಂತಾಗಿರುವದು ವಿಷಾದಕರ ಸಂಗತಿ. ಇಂದಿನ ಜನಾಂಗಕ್ಕೆ ಹಿರಿಯರನ್ನು ಗೌರವಿಸುವ ಭಾವನೆ ಬೆಳೆಯುವಂತೆ ಮಾಡಬೇಕಿದೆ. ಹಿರಿಯರಿಗೆ ಯಾವುದೇ ರೀತಿಯ ದೌರ್ಜನ್ಯವಾಗದಂತೆ ನೋಡಿಕೊಳ್ಳಲು ಹಿರಿಯರ ಕಾಯ್ದೆ ಜಾರಿಗೆ ಬಂದಿದೆ. ಒಂದು ವೇಳೆ ಯಾವುದೇ ಹಿರಿಯರ ಮೇಲೆ ದೌರ್ಜನ್ಯ, ಅಗೌರವದಿಂದ ಕಾಣುತ್ತಿದ್ದರೆ ಈ ಕಾಯ್ದೆಯ ಸದುಪಯೋಗವನ್ನು ಹಿರಿಯರು ಪಡೆದುಕೊಳ್ಳಬಹುದು ಎಂದರು.

ಹೆಚ್ಚುವರಿ ನ್ಯಾಯಾಧೀಶ ಈರಪ್ಪ ಢವಳೇಶ್ವರ ಮಾತನಾಡಿ, 60 ವರ್ಷದ ದಾಟಿದವರನ್ನು ಹಿರಿಯರು ಎಂದು ಪರಿಗಣಿಸಲಾಗುತ್ತದೆ. ಎಲ್ಲ ವರ್ಗದ ಹಿರಿಯರಿಗೆ ನೆರವಾಗುವ ಉದ್ದೇಶದಿಂದ ಹಿರಿಯರ ಕಾಯ್ದೆ ಜಾರಿಗೆ ಬಂದಿದೆ. ರೈತರಿಗೆ ಈ ಕಾಯ್ದೆ ಬಗ್ಗೆ ಅಷ್ಟಾಗಿ ತಿಳುವಳಿಕೆ ಇಲ್ಲ. ಹಿರಿಯ ನಾಗರಿಕರ ಸೇವಾ ವೇದಿಕೆಯು ಹಿರಿಯರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ನೆರವಾಗುವಂತೆ ಕಾರ್ಯನಿರ್ವಹಿಸಬೇಕೆಂದರು.

ಸಹಕಾರ ಮಹಾಮಂಡಳ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ ಮಾತನಾಡಿ, ಸಂಘಟನೆಯಲ್ಲಿ ಶಕ್ತಿ ಇರುತ್ತದೆ. ಹಿರಿಯರ ಬಗೆಹರಿಯರ ಸಮಸ್ಯೆಗಳನ್ನು ಬಗೆ ಹರಿಸುವ ನಿಟ್ಟಿನಲ್ಲಿ ಈ ವೇದಿಕೆಯು ಆರಂಭವಾಗುತ್ತಿರುವದು ಶ್ಲಾಘನೀಯ. ಸರ್ಕಾರವು ಹಿರಿಯರಿಗೆ ಸೌಲಭ್ಯ ಒದಗಿಸಲು ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಪ್ರತಿಯೊಬ್ಬರೂ ಹಿರಿಯರನ್ನು ಗೌರವದಿಂದ ಕಾಣುವಂತಾಗಬೇಕು. ವೇದಿಕೆಯು ಹಿರಿಯ ನಾಗರಿಕರ ಸ್ವಾತಂತ್ರ್ಯ ಬದುಕು ನಡೆಸಲು ಪೂರಕವಾಗಿ ಕಾರ್ಯ ಮಾಡುವಂತಾಗಬೇಕೆಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ರಾಜಶೇಖರ ದೈವಾಡಿ ಮಾತನಾಡಿ, ಸಮಾಜದಲ್ಲಿ ಎಲ್ಲಕ್ಕಿಂತಲೂ ಗುರು-ಹಿರಿಯರು ದೊಡ್ಡವರು. ಸಂಘಟನೆ ತಾವು ಸಮಾಜದಲ್ಲಿ ಬೆಳೆಯುವಂತೆ ಮಾಡಿಕೊಳ್ಳದೇ ಸಮಾಜದಲ್ಲಿ ಬದಲಾವಣೆ ಮಾಡಲು ಇದ್ದರೆ ಸಂಘಟನೆ ಸಾರ್ಥಕವಾಗುತ್ತದೆ.ಹಿಂದೆ ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ಹಿರಿಯರನ್ನು ಗೌರವದಿಂದ ಕಾಣುತ್ತಿದ್ದರು. ಇಂದು ನಾವು ನೋಡುವ ದೃಷ್ಟಿಕೋನ ಬದಲಾಗಿದೆ. ನಾವು ಒಳ್ಳೆಯ ದೃಷ್ಟಿಕೋನದಿಂದ ನೋಡುವಂತಾದರೆ ಸಮಾಜದ ಸೃಷ್ಟಿಯು ಬದಲಾಗುತ್ತದೆ. ಮನಸ್ಸು ಪರಿವರ್ತನೆಯಾಗಬೇಕಿದೆ. ಹಿರಿಯರಾದವರ ಮನಸ್ಸು ಸ್ಥಿತಿಯು ಇಂದು ಬದಲಾಗಬೇಕಿದೆ. ತಮ್ಮ ಮಕ್ಕಳಿಗೆ ಚಿಕ್ಕವರು ಇದ್ದಾಗಲೇ ಸಾಮಾಜಿಕ ಜವಾಬ್ದಾರಿ ಕಲಿಸಬೇಕು. ನಾವು ಒಣ ಪ್ರತಿಷ್ಠೆಗೆ ಬಿದ್ದರೆ ನಮ್ಮನ್ನು ಹಾಳುಮಾಡುತ್ತದೆ.ನಮ್ಮ ಜವಾಬ್ದಾರಿಗಳನ್ನು ಸೂಕ್ಷ್ಮವಾಗಿ ಬಳಸಬೇಕಿದೆ ಎಂದರು.


ನಾವು ಹೃದಯವಂತಿಕೆಯಿಂದ ಜೀವನ ಮಾಡಬೇಕಿದೆ. ನಾವು ತ್ಯಾಗ ಗುಣ ಬೆಳೆಸಿಕೊಂಡರೆ ಮಾತ್ರ ಸಮಾಜವು ನಮ್ಮನ್ನು ಒಪ್ಪಿಕೊಳ್ಳುತ್ತದೆ ಎಂದರು.

ಹಿರಿಯ ನಾಗರಿಕರ ಸೇವಾ ವೇದಿಕೆಯ ಅಧ್ಯಕ್ಷ ಆರ್.ಜಿ.ಅಳ್ಳಗಿ ಮಾತನಾಡಿ, ವೇದಿಕೆಯು ಹಿರಿಯ ನಾಗರಿಕರ ಸಮಸ್ಯೆಗಳಿಗೆ ಸ್ಪಂದಿಸಿ ಕಾರ್ಯ ಮಾಡುವ ಉದ್ದೇಶ ಹೊಂದಿದೆ. ಪ್ರತಿಯೊಬ್ಬ ಹಿರಿಯರು ಸಂತೋಷದ ಜೀವನ ಸಾಗಿಸುವಂತಾಗಬೇಕು.ಹಿರಿಯರಿಗೆ ಅನಾರೋಗ್ಯ ಉಂಟಾಗಿ ಅವರನ್ನು ಯಾರು ನೋಡಿಕೊಳ್ಳದೇ ಇರುವದು ಕಂಡುಬಂದರೆ ಆಗ ವೇದಿಕೆಯು ಅವರ ನೆರವಿಗೆ ಧಾವಿಸಿ ಅವರಿಗೆ ಚಿಕಿತ್ಸೆ ಕೊಡಿಸುವ ಕಾರ್ಯ ಮಾಡುವ ಉದ್ದೇಶ ಹೊಂದಿದೆ. ಹಿರಿಯ ನಾಗರಿಕರಿಗೆ ಸೇವೆ ಒದಗಿಸುವ ಉದ್ದೇಶ ವೇದಿಕೆಯದಾಗಿದೆ ಎಂದರು.

ಸಾನಿಧ್ಯ ವಹಿಸಿದ್ದ ಸಿದ್ದಲಿಂಗ ಸ್ವಾಮೀಜಿ, ಡಿವೈಎಸ್ಪಿ ಬಲ್ಲಪ್ಪ ನಂದಗಾಂವಿ, ಕೃಷಿಕ ಸಮಾಜದ ಜಿಲ್ಲಾಧ್ಯಕ್ಷ ಶಿವನಗೌಡ ಬಿರಾದಾರ, ಹಿರಿಯ ನ್ಯಾಯವಾದಿ ಬಿ.ಕೆ. ಕಲ್ಲೂರ ಮಾತನಾಡಿದರು.

ಅಧ್ಯಕ್ಷತೆಯನ್ನು ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ತಾಲೂಕಾಧ್ಯಕ್ಷ ಎಫ್.ಡಿ.ಮೇಟಿ ವಹಿಸಿದ್ದರು. ವೇದಿಕೆಯಲ್ಲಿ ಸಾಹಿತಿ ಲ.ರು.ಗೊಳಸಂಗಿ ಇತರರು ಇದ್ದರು. ಎಸ್.ಎ.ದೇಗಿನಾಳ ಸ್ವಾಗತಿಸಿದರು. ಎಸ್.ಜಿ.ಮೊಖಾಸಿ ನಿರೂಪಿಸಿದರು.ಎಸ್.ಜೆ.ಹೆಗಡ್ಯಾಳ ವಂದಿಸಿದರು. ಇದೇ ಸಂದರ್ಭದಲ್ಲಿ 90 ವರ್ಷ ತುಂಬಿದ ಹಿರಿಯ ನಾಗರಿಕರಾದ ಎಫ್.ಡಿ.ಮೇಟಿ, ಎಸ್.ಎಸ್.ಡೋಣೂರ, ಎಲ್.ಎನ್. ನಾಯ್ಕೋಡಿ, ಸೋಮಪ್ಪ ಸಜ್ಜನ, ವೈ.ಎಸ್.ಮನಗೂಳಿ, ಡಿ.ಎಂ. ಗಿಡ್ಡಪ್ಪಗೋಳ,ವೈ.ಎಂ.ಬೂದಿಹಾಳ, ಕೆ.ವೈ. ದೇಶಪಾಂಡೆ, ಶಿವರಾಜ ರಾಯಗೊಂಡ ಸನ್ಮಾನಿಸಿದರು.

# 'ಸಮಗ್ರ ಅಭಿವೃದ್ಧಿಯೊಂದಿಗೆ ಅವಳಿ ತಾಲೂಕಿನ ಮತದಾರರ ಋಣ ತೀರಿಸುವೆ'



**ಯರಗಟ್ಟಿ:** ಸಮಗ್ರ ಅಭಿವೃದ್ಧಿಯೊಂದಿಗೆ ಕ್ಷೇತ್ರದ ಯರಗಟ್ಟಿ ಮತ್ತು ಸವದತ್ತಿ ಅವಳಿ ತಾಲೂಕಿನ ಮತದಾರರ ಋಣ ತೀರಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಶಾಸಕ ವಿಶ್ವಾಸ ವೈದ್ಯ ಹೇಳಿದರು.

ಸಮೀಪದ ಯರಝುರ್ವಿ ಗ್ರಾಮದಲ್ಲಿ ಶನಿವಾರ ವಿಶ್ವಾಸ ವೈದ್ಯ ಅಭಿಮಾನಿ ಬಳಗ ಹಮ್ಮಿಕೊಂಡಿದ್ದ ವಿಶ್ವಾಸ ವೈದ್ಯ ಅವರ 44ನೇ ವರ್ಷದ ಜನ್ಮದಿನಾಚರಣೆ ಹಾಗೂ ಸಂಗೀತ ಸಂಜೆ, ಸಾಧಕರ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಯರಗಟ್ಟಿ ತಾಲೂಕಿನ ಸಮಸ್ತ ಜನತೆ ಬೆಳಗಾವಿ ಬಿಡಿಸಿಸಿ ಬ್ಯಾಂಕ ನಿರ್ದೇಶಕನಾಗಿ ಅವಿರೋಧವಾಗಿ ಆಯ್ಕೆಮಾಡಿ ನನ್ನ ಹುಟ್ಟು ಹಬ್ಬಕ್ಕೆ ವಿಶೇಷವಾದ ಉಡುಗೊರೆ ನೀಡಿದ್ದೀರಿ ತಾಲೂಕಿನ ಸಮಸ್ತ ಜನತೆಗೆ ಅಭಿನಂದನೆ ಸಲ್ಲಿಸಿದ್ದರು.

ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ, ವಿದ್ಯಾರ್ಥಿಗಳ ಅನಕೂಲಕ್ಕೆ ಪಿಯುಸಿ ಕಾಲೇಜು ಪ್ರಾರಂಭಿಸಲು ಮಂಜುರಾತಿ ಮಾಡಲಾಗುವುದು ಎಂದು ಭರವಸೆ ನೀಡಿದರು.

ಮುನವಳ್ಳಿ ಸೋಮಶೇಖರ ಮಠದ ಮುರುಘೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಮಠ ಮಾನ್ಯ ಉಳುವಿಗೆ ಇಂದಿನ ಯುವಕರು ಮುಂದಾಗಬೇಕು. ಜನಪದ ಸಾಹಿತ್ಯ ಗ್ರಾಮೀಣ ಭಾಗದ ಕಲೆ ಆಗಿದ್ದು ಕಲೆ ಮೂಲಕ ಜನ್ಮ ದಿನಾಚರಣೆ ಮಾಡುವ ಮೂಲಕ ಮಾದರಿಯಾಗಿದ್ದಿರಿ ಎಂದರು. ವಿಶ್ವಾಸ ವೈದ್ಯ ಅವರನ್ನು ಗ್ರಾಮಸ್ಥರು, ಅಭಿಮಾನಿಗಳು ಬೃಹತ್ತಾಕಾರದ ಸೇಬು ಹಣ್ಣಿನ ಹೂಮಾಲೆ ಇಂದ ಸನ್ಮಾನಿಸಿದರು.

ಸ್ಥಳೀಯ ಯಲ್ಲಾಲಿಂಗ ಮಠದ ಚಿದಾನಂದ ಸ್ವಾಮೀಜಿ ಸಾನ್ನಿದ್ಯ ವಹಿಸಿದ್ದರು, ಗ್ರಾ.ಪಂ.ಅಧ್ಯಕ್ಷ ಬಸವ್ವ ನಂದಿ, ಯರಗಟ್ಟಿ ಎಪಿಎಂಸಿ ಅಧ್ಯಕ್ಷ ನೀಲಕಂಠ ಶೀದಬಸನ್ನವರ, ಕಾಂಗ್ರೆಸ್ ಮುಖಂಡ ಪ್ರಕಾಶ ವಾಲಿ, ಬೆಮುಲ ನಿರ್ದೇಶಕ ಶಂಕರ ಇಟ್ನಾಳ, ಪ್ರಥಮ ದರ್ಜೆ ಗುತ್ತಿಗೆದಾರ ಮಹಾಂತೇಶ ಉರಬ್ಬಿನ್ನವರ, ಬಂಗಾರೆಪ್ಪ ಹರಳಿ, ಅಶ್ವಥ ವೈದ್ಯ, ಜಿ.ಪಂ. ಮಾಜಿ ಸದಸ್ಯ ಫಕ್ಕೀರಪ್ಪ ಹದ್ದನ್ನವರ, ಚಾಯಪ್ಪ ಹುಂಡೇಕಾರ, ಮಲಿಕಸಾಬ ಬಾಗವಾನ, ಆರ್.ಕೆ.ಪಟಾತ, ಲಕ್ಷ್ಮಣ ಕುಂಟಿರಪ್ಪಗೋಳ, ವಿಠ್ಠಲ ಬಂಟನೂರ, ಸಂತೋಷ ಹಾದಿಮನಿ, ಮುನವಳ್ಳಿ ಪುರಸಭೆ ಅಧ್ಯಕ್ಷ ಸಿ.ಬಿ.ಬಾಳಿ, ಸವದತ್ತಿ ಎಪಿಎಂಸಿ ಅಧ್ಯಕ್ಷ ಚಂದ್ರು ಜಂಬ್ರಿ, ಖ್ಯಾತ ಜಾನಪದ ಕಲಾವಿದ ಬಾಳು ಬೆಳಗುಂದಿ, ಪ್ರಕಾಶ ಸೂಣಧೋಳಿ, ಯಂಕಣ್ಣಾ ಕಳ್ಳಿಗುದ್ದಿ, ತವನಪ್ಪ ಟೋಪ್ಪಣ್ಣವರ, ಮಂಜು ಪಾಂಚಗಿ, ವೀರೇಶ ಬ್ಯಾಹಟ್ಟಿ, ಅಶೋಕ ಕುಡಚಿ, ನಿಖಿಲ ಪಾಟೀಲ, ರಾಘವೇಂದ್ರ ಗಿಡ್ಡಮಲ್ಲಪ್ಪಗೋಳ, ಅಶೋಕ ಗಡಮ್ಮನ್ನವರ, ಸತ್ಯಪ್ಪ ತಲ್ಲೂರ, ಎಂ.ಎಂ.ಶಂಕಲಿಂಗಪ್ಪ ಸೇರಿದಂತೆ ಕಾರ್ಯಕರ್ತರು ಅಭಿಮಾನಿಗಳು ಇದ್ದರು.

# 894ನೇ ಮಾಸ್ತಮ್ಮನ ಕೆರೆ ನಾಮಫಲಕ ಅನಾವರಣ

**ರಾಮದುರ್ಗ:** ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಅಭಿವೃದ್ಧಿ ಪಡಿಸಿದ ಹೊಸಕೇರಿ ಕೆರೆಯಿಂದ ಈ ಭಾಗದ ನೂರಾರು ರೈತ ಕುಟುಂಬಗಳಿಗೆ ನೀರಾವರಿಗೆ ಅನುಕೂಲವಾಗಲಿದೆ. ಕೆರೆ ಸುತ್ತಮುತ್ತಲೂ ತಂತಿ ಬೇಲಿ ನಿರ್ಮಿಸಲು ಸರಕಾರದಿಂದ ಶೀಘ್ರ ಅನುದಾನ ಒದಗಿಸುವುದಾಗಿ ವಿಧಾನಸಭೆ ಮುಖ್ಯ ಸಚೇತಕ ಶಾಸಕ ಅಶೋಕ ಪಟ್ಟಣ ಭರವಸೆ ನೀಡಿದರು.

ತಾಲೂಕಿನ ಹೊಸಕೇರಿ ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಗ್ರಾಮ ಪಂಚಾಯಿತಿ ಹಾಗೂ ಕೆರೆ ಅಭಿವೃದ್ಧಿ ಸಮಿತಿಯ ಸಂಯುಕ್ತ ಆಶ್ರಯದಲ್ಲಿ ನಮ್ಮೂರು ನಮ್ಮಕೆರೆ ಯೋಜನೆಯಲ್ಲಿ ಪುನಶ್ಚೇತನಗೊಳಿಸಲಾದ 894ನೇ ಮಾಸ್ತಮ್ಮನ ಕೆರೆ ನಾಮಫಲಕ ಅನಾವರಣ ಹಾಗೂ ಕೆರೆಗೆ ಬಾಗೀನ ಅರ್ಪಿಸಿ ಅವರು ಮಾತನಾಡಿದರು.

ಗ್ರಾಮಸ್ಥರು ಕೆರೆಯಿಂದ ಅನುಕೂಲ ಪಡೆಯುವುದು ಅಷ್ಟೇ ಅಲ್ಲ ಕೆರೆಯ ಸಂರಕ್ಷಣೆಯು ಮುಖ್ಯವಾಗಿದೆ. ಕೆರೆ ಸುತ್ತ ಸ್ವಚ್ಛತೆ ಕಾಪಾಡುವುದರ ಜೊತೆಗೆ ಸುತ್ತಲು ಗಿಡ ಮರಗಳನ್ನು ಬೆಳೆಸಲು ಗ್ರಾಮ ಪಂಚಾಯಿತಿ ಸದಸ್ಯರು ಶ್ರಮಿಸಬೇಕೆಂದು ಅವರು ತಿಳಿಸಿದರು.

ಶ್ರೀಧನಲಕ್ಷ್ಮೀ ಸಹಕಾರಿ ಸಕ್ಕರೆ ಕಾರ್ಖಾನೆ ನಿರ್ದೇಶಕ ಮಲ್ಲಣ್ಣ ಯಾದವಾಡ ಮಾತನಾಡಿ, ಧರ್ಮಸ್ಥಳ ಸಂಸ್ಥೆ ರಾಜ್ಯಾದ್ಯಂತ ಅನೇಕ ಜನಪರ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿ ಮನೆ ಮಾತಾಗಿದ್ದಾರೆ. ತಳ ಮಟ್ಟದ ಬಡವರ ಪಾಲಿಗೆ ಸಂಸ್ಥೆಯ ಕಾರ್ಯಕ್ರಮಗಳು ಪುನಶ್ಚೇತನ ನೀಡುತ್ತಿದ್ದು, ಸಮುದಾಯ ಸಹಕಾರ ನೀಡಬೇಕೆಂದು ಮನವಿ ಮಾಡಿದರು. ಸಾನಿಧ್ಯ ವಹಿಸಿದ ಕಿಲ್ಲಾತೊರಗಲ ಗಚ್ಚಿನ ಹಿರೇಮಠದ ಚನ್ನಮಲ್ಲ ಶಿವಾಚಾರ್ಯ ಸ್ವಾಮೀಜಿ, ಜಿಲ್ಲಾ ನಿರ್ದೇಶಕ ಹೆಚ್. ಆರ್. ಲವಕುಮಾರ್ ಸಂಸ್ಥೆಯ ಕಾರ್ಯ ಯೋಜನೆಗಳ ಕುರಿತು ಮಾತನಾಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಈರಣ್ಣ ಹರಣಟ್ಟಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಸಾನಿಧ್ಯ ವಹಿಸಿದ್ದ ನೀಲಲೋಚನ ತಾಯಿ, ಫಕೀರಪ್ಪ ಬೆಳವಣಕಿ, ಅಶೋಕ ಕುಲಗೋಡ, ಜಿ.ಬಿ. ರಂಗನಗೌಡ್ರ, ರಮೇಶ ಜಲಗೇರಿ, ಪಿಡಿಒ ಬಲರಾಮ ಲಮಾಣಿ, ಉಮೇಶ ಕನಕನ್ನವರ, ಸೇವಾ ಪ್ರತಿನಿಧಿ ಮಹಾಂತೇಶ, ಅಭಿಯಂತರ ನಿಂಗರಾಜ್, ಗ್ರಾಪಂ ಸದಸ್ಯರು, ಗ್ರಾಮದ ಮುಖಂಡರು, ಒಕ್ಕೂಟದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಯೋಜನಾಧಿಕಾರಿ ಸಚಿನ್ ಸ್ವಾಗತಿಸಿದರು. ವಲಯ ಮೇಲ್ವಿಚಾರಕ ಕೇಶವ ನಿರೂಪಿಸಿದರು. ಕೃಷಿ ಮೇಲ್ವಿಚಾರಕ ಪ್ರದೀಪ್ ವಂದಿಸಿದರು.





ಬೈಲಹೊಂಗಲ: ಉತ್ತರ ಪ್ರದೇಶದ ಲಖನೌ ಮಹಾನಗರದಲ್ಲಿ ಈಚೆಗೆ ಜರುಗಿದ ರಾಷ್ಟ್ರ ಮಟ್ಟದ ಪ್ಯಾರಾ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಕರ್ನಾಟಕದಿಂದ ಪ್ರತಿನಿಧಿಸಿ ಕಂಚಿನ ಪದಕ ಪಡೆದ ಪಟ್ಟಣದ ಕೆ. ಆರ್. ಸಿ. ಇ. ಎಸ್ ಶಿಕ್ಷಣ ಸಂಸ್ಥೆಯ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿ ಪ್ರಜ್ವಲ್ ಅಂಬಡಗಟ್ಟಿ ಇವನನ್ನು ಚನ್ನಮ್ಮನ ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ್ ಸನ್ಮಾನ ಮಾಡಿದರು.



# ಪ.ಪಂಗಡದ ಮೇದಾರ ಅಲೆಮಾರಿ ಜನಾಂಗದ ಕುಂದು ಕೊರತೆ ಸಭೆ

**ಬಾಗಲಕೋಟೆ:** ನಗರದ ಬಸವೇಶ್ವರ ವೃತ್ತ ಗಣಪತಿ ಮಂದಿರದ ಹತ್ತಿರ ಆಯೋಜಿಸಲಾಗಿದ್ದ ಪರಿಶಿಷ್ಟ ಪಂಗಡದ ಮೇದಾರ್ ಅಲೆಮಾರಿ ಜನಾಂಗದ ಕುಂದು ಕೊರತೆ ಸಭೆಯಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಜಿ ಬಂದ ಮನವಿಗಳಿಗೆ ಸ್ಪಂದಿಸುವ ಕಾರ್ಯ ಮಾಡಿದರು.

ನಂತರ ಮಾತನಾಡಿದ ಅವರು ಮೇದಾರ್ ಜನಾಂಗ ಅಭಿವೃದ್ಧಿಗೆ ಹಾಗೂ ಆರ್ಥಿಕ ಸ್ವಾವಲಂಬನೆಗೆ ರಾಜ್ಯ ಸರ್ಕಾರದಿಂದ ಪ್ರತ್ಯೇಕ ನಿಗಮವನ್ನು ಸ್ಥಾಪಿಸಲಾಗಿದ್ದು ನಿಗಮದಿಂದ ಹಲವಾರು ಯೋಜನೆಗಳು ಅನುಷ್ಠಾನಗೊಳ್ಳುತ್ತಿದ್ದು, ಅವುಗಳನ್ನು ಪಡೆದುಕೊಂಡು ಸ್ವಾವಲಂಬಿ ಬದುಕು ಕಟ್ಟಿಕೊಂಡು ಡಾ.ಬಿ.ಆರ್ ಅಂಬೇಡ್ಕರ್ ರವರ ಆಶಯದಂತೆ ಶಿಕ್ಷಣ, ಸಂಘಟನೆ ಮತ್ತು ಹೋರಾಟ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಒಳ್ಳೆಯ ಜೀವನ ನಡೆಸುವಂತೆ ಸಮಾಜದ ಜನರಲ್ಲಿ ಜಾಗೃತಿ ಮೂಡಿಸಿದರು. ಈ ಸಮಯದಲ್ಲಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ವಿವಿಧ ಇಲಾಖೆಗಳ ಅಧಿಕಾರಿಗಳು ನಿಗಮದ ನಾಮ ನಿರ್ದೇಶಕ ಸದಸ್ಯರಾದ ಚನ್ನಬಸಪ್ಪ ಬುಡ್ಡರ, ಸದಾಶಿವ ಮೇದಾರ್ ಹಾಗೂ ಸಮಾಜದ ಮುಖಂಡರು ಸಭೆಗೆ ಹಾಜರಿದ್ದರು.

## ನಿಧನ ವಾರ್ತೆ

### ಭಾಗೀರಥಿ ಉಮರಾಣಿ



**ರಬಕವಿ-ಬನಹಟ್ಟಿ:** ಬನಹಟ್ಟಿಯ ಸೋಮವಾರ ಪೇಟೆಯ ಶರಣರ ಬಾವಿ ಹತ್ತಿರದ ನಿವಾಸಿ ಭಾಗೀರಥಿ ಉಮರಾಣಿ(95) ನಿಧನರಾದರು. ಮೃತರಿಗೆ ಐವರು ಪುತ್ರರು ಹಾಗೂ ಓರ್ವ ಪುತ್ರಿ ಸೇರಿದಂತೆ ಅಪಾರ ಬಳಗವಿದೆ.

## ಕ. ಸಾ. ಪ.ಜಿಲ್ಲಾ ಘಟಕದ ವತಿಯಿಂದ ನಡೆದ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಸಾಹಿತಿ ಜಲತ್ ಕುಮಾರ ಪುಣಜಗೌಡ ಅಭಿಮತ

# ಭಾವ, ನೈಜತೆಗಳನ್ನು ಹೊರ ಹೊಮ್ಮಿಸುವ ಜೀವಂತ ಪದಗಳೇ ಕವಿತೆಗಳು

**ಬೆಳಗಾವಿ:** ಕವನಗಳು ಕವಿಯ ಭಾವಗಳು ಮತ್ತು ನೈಜತೆ ಪರಿಸ್ಥಿತಿಗಳನ್ನು ಹೊರಹೊಮ್ಮಿಸುವ ಜೀವಂತ ಪದಗಳಾಗಿವೆ. ಆಧುನಿಕತೆಯ ಭರಾಟೆಯಲ್ಲೂ ಭಾವನೆಗಳಿಗೆ, ಸಂಸ್ಕೃತಿ, ಸಂಸ್ಕಾರ ಬೆಳೆಸುವ ಎಲ್ಲಾ ವಯೋಮಾನದವರ ದುಗುಡ, ತುಮುಲ, ಆತಂಕ, ಸಂತೋಷ, ದುಃಖ ಹೀಗೆ ಎಲ್ಲವೂಗಳನ್ನು ಒಳಗೊಂಡಿರುವ ಕವನಗಳನ್ನು ಓದಿ ಅದರ ಸಾರವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಷ್ಟು ಸಾರ ಕವಿತೆಗಳು ಹೊಂದಿರುತ್ತವೆ ಎಂದು ಶನಿವಾರ ದಿ. 11 ಬೆಳಗಾವಿಯ ಕನ್ನಡ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಬೆಳಗಾವಿ ಮತ್ತು ಕನ್ನಡ ಸಾಂಸ್ಕೃತಿಕ ಭವನದ ಕ್ಷೇಮಾಭಿವೃದ್ಧಿ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಕವಿಗೋಷ್ಠಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹಾಗೂ ಎಂ.ವೈ. ಮೆಣಸಿನಕಾಯಿ ಅವರ ಶ್ರೀ ಗಣೇಶಾಯ ನಮಃ ಕವನ ಸಂಕಲನ ಬಿಡುಗಡೆ ಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ಬೆಳಗಾವಿ ಜಿಲ್ಲೆಯ ವಿವಿಧ ತಾಲೂಕುಗಳ ವಿ. ಕೆ. ಗಿರಿಮಲ್ಲನವರ, ಸುಮಿತ್ರಾ ಕರವಿನಕೊಪ್ಪ, ಪಾರ್ವತಿ ತುಪ್ಪದ,ಡಾ. ಭವ್ಯಾ ಸಂಪಗಾರ, ಸುನೀಲ ಪರೀಟ, ಲಾವಣ್ಯಾ ಅಂಗಡಿ ಸೇರಿದಂತೆ 20ಕ್ಕೂ ಹೆಚ್ಚು ಕವಿಗಳು ಕನ್ನಡ ನಾಡು-ನುಡಿ, ತಾಯಿ, ಮಾನವೀಯ ಸಂಬಂಧಗಳು, ಸಮಾನತೆ, ನಡೆ-ನುಡಿ, ಮೌಲ್ಯಗಳು ಕುರಿತಾದ ಅನೇಕ ಕವನಗಳನ್ನು ವಾಚನ ಮಾಡಿದರು.ಸಾಹಿತಿ ಜಯಶೀಲಾ ಬ್ಯಾಕೋಡ ಅಧ್ಯಕ್ಷತೆ ವಹಿಸಿ ಮಾತನಾಡಿ ಮನಗಳನ್ನು ತಣಿಸುವ ಇಂತಹ ಕಾರ್ಯಕ್ರಮಗಳು ಆಗಾಗ ನಡೆಯಲಿ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿಗಳಾದ ಯ. ರು. ಪಾಟೀಲ, ಬಿ. ಕೆ. ಮಲಾಬಾದಿ,ಬಿ. ಬಿ. ಮಠಪತಿ, ಜ್ಯೋತಿ ಬದಾಮಿ, ಎಂ.ಎಸ್.ಹೊಂಗಲ, ರುದ್ರಾಂಬಿಕ ಯಾಳಗಿ, ಸಂಗಮೇಶ ಅರಳಿ, ವೀರಭದ್ರ ಅಂಗಡಿ, ಎಸ್. ಎಸ್. ಗಡದವರ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಜಿಲ್ಲಾ ಕಾರ್ಯದರ್ಶಿ ಎಂ. ವೈ. ಮೆಣಸಿನಕಾಯಿ ಸ್ವಾಗತಿಸಿ ಪರಿಚಯಿಸಿದರು. ಡಾ ಹೇಮಾ ಸೋನೊಳ್ಳಿ ನಿರೂಪಿಸಿದರು.

ಶಿವಾನಂದ ತಲ್ಲೂರ ವಂದಿಸಿದರು.

# ಉಚಿತ ಬಸ್ ಪಾಸ್‌ಗೆ ಅರ್ಜಿ ಆಹ್ವಾನ

**ವಿಜಯಪುರ:** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಮಾಧ್ಯಮ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಾಲ್ಲೂಕು ಮಟ್ಟದ ಪತ್ರಕರ್ತರು ತಮ್ಮ ವೃತ್ತಿ ನಿರತ ಚಟುವಟಿಕೆಗಳ ಸಂಬಂಧ ತಮ್ಮ ಜಿಲ್ಲಾದ್ಯಂತ ಉಚಿತವಾಗಿ ಸಂಚರಿಸಲು ಅನುಕೂಲವಾಗುವಂತೆ ಉಚಿತ ಬಸ್ ಪಾಸ್ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪತ್ರಕರ್ತರು ತಾವು ಕಾರ್ಯನಿರ್ವಹಿಸುತ್ತಿರುವ ಮಾಧ್ಯಮ ಸಂಸ್ಥೆಗಳಿಂದ ಸೇವಾ ಪ್ರಮಾಣಪತ್ರ, ಶಿಫಾರಸ್ಸು ಪತ್ರ ಮತ್ತು 11 ತಿಂಗಳುಗಳ ವೇತನಪತ್ರ (ಲೈನೇಜ್/ಸಂಭಾವನೆ/ಕಮೀಷನ್ ಪಡೆದಿರುವ ದಾಖಲೆ)ಗಳನ್ನು ಅಥವಾ ವೇತನ ಜಮಾ ಆಗಿರುವ ಮಾಹಿತಿ ಇರುವಂತಹ ಬ್ಯಾಂಕ್ ಸ್ಟೇಟಮೆಂಟ್ ಲಗತ್ತಿಸಿ "ಸೇವಾಸಿಂಧು" ಪೋರ್ಟಲ್ (https://sevasindhu.karnataka.gov.in) ಮೂಲಕ ಆನ್ ಲೈನ್ ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು.

ಆನ್ ಲೈನ್ ನಲ್ಲಿ ಸಲ್ಲಿಸಲಾದ ಅರ್ಜಿ ಮತ್ತು ಲಗತ್ತಿಸಲಾಗಿರುವ ದಾಖಲೆಗಳ ಒಂದು ಪ್ರತಿಯನ್ನು ಜಿಲ್ಲಾ ವಾರ್ತಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು.ಸ್ವೀಕೃತ ಅರ್ಜಿಗಳನ್ನು ಆಯ್ಕೆ ಸಮಿತಿಯ ಸಭೆಯಲ್ಲಿ ಪರಿಶೀಲಿಸಿ ಬಸ್ ಪಾಸ್ ಮಂಜೂರು ಮಾಡಲಾಗುತ್ತದೆ. ಎಲ್ಲ ತಾಲ್ಲೂಕುಗಳ ಅರ್ಹ ಪತ್ರಕರ್ತರು ಕೂಡಲೇ "ಸೇವಾಸಿಂಧು" ಪೋರ್ಟಲ್ ಮೂಲಕ ಅರ್ಜಿಗಳನ್ನು ಸಲ್ಲಿಸುವುದರ ಮೂಲಕ ಈ ಸದುಪಯೋಗ ಪಡೆದುಕೊಳ್ಳಬಹುದು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಹೇಮಂತ್ ನಿಂಬಾಳ್ಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಸತಿ ನಿಲಯ ಕಟ್ಟಡ ಕಾಮಗಾರಿಗೆ ಚಾಲನೆ



**ರಾಯಬಾಗ:** ಪಟ್ಟಣಕ್ಕೆ ಗ್ರಾಮೀಣ ಭಾಗದಿಂದ ವಿದ್ಯಾಭ್ಯಾಸ ಮಾಡಲು ಬರುವ ಪ್ರತಿಭಾವಂತ ಬಡ ಪ.ಜಾತಿ ವಿದ್ಯಾರ್ಥಿನಿಯರಿಗೆ ಅನುಕೂಲವಾಗಲು ಸುಸಜ್ಜಿತ ವಸತಿ ನಿಲಯ ನಿರ್ಮಿಸಲಾಗುತ್ತಿದೆ ಎಂದು ಶಾಸಕ ಡಿ.ಎಮ್. ಐಹೊಳೆ ಹೇಳಿದರು.

ಸೋಮವಾರ ಪಟ್ಟದ ಬಿಇಒ ಕಚೇರಿ ಹತ್ತಿರ ಸಮಾಜ ಕಲ್ಯಾಣ ಇಲಾಖೆಯ ಕರ್ನಾಟಕ ರಾಜ್ಯ ವಸತಿ ಶಿಕ್ಷಣ ಸಂಸ್ಥೆಯಿಂದ ಮಂಜೂರಾದ 5 ಕೋಟಿ ರೂ. ಅನುದಾನದಲ್ಲಿ ಪರಿಶಿಷ್ಟ ಜಾತಿಯ ಮೆಟ್ರಿಕ ನಂತರದ ವಿದ್ಯಾರ್ಥಿನಿಯರ ವಸತಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ತಾಲೂಕಿನಲ್ಲಿ ಶೈಕ್ಷಣಿಕ ಬೆಳವಣಿಗೆಗೆ ಪೂರಕವಾದ ವಾತಾವರಣ ನಿರ್ಮಾಣ ಮಾಡಲಾಗುತ್ತಿದೆ. ವಿದ್ಯಾರ್ಥಿನಿಯರು ಉನ್ನತ ವ್ಯಾಸಂಗ ಮಾಡಲು ಸರ್ಕಾರದಿಂದ ದೊರೆಯುವ ಎಲ್ಲ ಸೌಲಭ್ಯ ಕಲ್ಪಿಸಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಅಂದಿನ ಕಾಂಗ್ರೆಸ ಪಕ್ಷದ ಪ್ರಧಾನಿಗಳಾದ ನೆಹರೂ ಮತ್ತು ಇಂದಿರಾ ಗಾಂಧಿಯವರಿಗೆ ಆರ್. ಎಸ್.ಎಸ್ ಬ್ಯಾನ್ ಮಾಡಲು ಸಾಧ್ಯವಾಗಿಲ್ಲ ಅನ್ನುವುದನ್ನು ಖರ್ಗೆ ಅವರು ಮೊದಲು ತಿಳಿದುಕೊಳ್ಳಬೇಕಬೇಕೆಂದರು. ಡಿಕೆ ಶಿವಕುಮಾರ ಅವರು ಬಿಜೆಪಿ ಶಾಸಕ ಮುನಿರತ್ನ ಅವರ ಜೊತೆಗೆ ನಡೆದುಕೊಂಡಿರುವ ರೀತಿ ಕಾಂಗ್ರೆಸ ಪಕ್ಷದ ಸಂಸ್ಕೃತಿ ತಿಳಿಸುತ್ತದೆ ಎಂದು ಟೀಕಿಸಿದರು.

ಎಇಇ ಚಂದ್ರಶೇಖರ, ಬಿಇಒ ಬಸವರಾಜಪ್ಪ ಆರ್, ಸದಾಶಿವ ಘೋರ್ಪಡೆ, ಪಟ್ಟಣ ಪಂಚಾಯತಿ ಅಧ್ಯಕ್ಷರಾದ ಅಶೋಕ ಅಂಗಡಿ, ಸುರೇಶ ಮಾಳಿ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸದಾನಂದ ಹಳಿಂಗಳಿ, ಉಮೇಶ್ ಮೇತ್ರಿ. ರೀತೇಶ ಅವಳೆ, ಸುಭಾಷ ಕಾಂಬಳೆ, ಪ್ರೇಮ ಸಾನೆ ಸೇರಿ ಅನೇಕರು ಇದ್ದರು.

# ನೌಕರರಲ್ಲಿ ಪ್ರವೃತ್ತಿಯ ಸಂಸ್ಕೃತಿ ಎದ್ದು ಕಾಣುತ್ತದೆ: ಬೀಡಿಕರ

**ಜಮಖಂಡಿ:** ಸರ್ಕಾರದ ಯೋಜನೆಗಳು ಕಾರ್ಯರೂಪಕ್ಕೆ ಬರಲು ರಾಜ್ಯ ಸರ್ಕಾರಿ ನೌಕರರ ಪಾತ್ರ ಬಹುಮುಖ್ಯ ಆಗಿದೆ. ಸಮಾಜದಲ್ಲಿ ಅತ್ಯವಶ್ಯಕ ನೌಕರರ ಕಷ್ಟಗಳನ್ನು ಸರಿಪಡಿಸಲು ಸಂಘಗಳಿಂದ ಸಹಕಾರಿಯಾಗಲಿದೆ. ನೌಕರರಲ್ಲಿ ಪ್ರವೃತ್ತಿಯ ಸಂಸ್ಕೃತಿ ಎದ್ದು ಕಾಣುತ್ತದೆ ಎಂದು ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ ಹೇಳಿದರು.

ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಂ ಸಭಾಭವನದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ತಾಲೂಕ ಘಟಕ ಹಮ್ಮಿಕೊಂಡಿದ್ದ ವಾರ್ಷಿಕ ಸರ್ವಸದಸ್ಯರ ಮಹಾಸಭೆ ಹಾಗೂ ನೂತನ ಪದಗ್ರಹಣ ಸಮಾರಂಭ ಉದ್ಘಾಟಿಸಿ ಮಾತುನಾಡಿದರು.

ಸರಕಾರಿ ನೌಕರರು ಶ್ರದ್ಧೆಯಿಂದ ಕೆಲಸ ಮಾಡಿದಲ್ಲಿ ಸರ್ಕಾರದ ಯೋಜನೆಗಳ ಅನುಷ್ಠಾನ ಮತ್ತು ಸಾರ್ವಜನಿಕ ಸೇವೆಗಳು ಗುಣಮಟ್ಟವಾಗಲಿವೆ. ಸಾರ್ವಜನಿಕ ಸೇವೆಯ ಗುಣಮಟ್ಟವನ್ನು ಸುಧಾರಿಸಲು ರಾಜ್ಯ ಸರ್ಕಾರಿ ನೌಕರರ ಸಕ್ರಿಯ ಸಹಭಾಗಿತ್ವ ಮತ್ತು ಬದ್ಧತೆ ಅತ್ಯಗತ್ಯವಾಗಿದೆ. ಸರ್ಕಾರಿ ನೌಕರರು ಉತ್ತಮ ಸೇವೆ ಒದಗಿಸುವಲ್ಲಿ ಬಹಳಷ್ಟು ಶ್ರಮಿಸಬೇಕು.



ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಸಭಾಭವನದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘ ತಾಲೂಕ ಘಟಕದ ವಾರ್ಷಿಕ ಸರ್ವಸದಸ್ಯರ ಮಹಾಸಭೆ ಮತ್ತು ನೂತನ ಪದಗ್ರಹಣ ಸಮಾರಂಭವನ್ನು ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ ಉದ್ಘಾಟಿಸಿದರು.

ಸರಕಾರಿ ಕೆಲಸ, ದೇವರ ಕೆಲಸ ಎಂಬ ನಂಬಿಕೆಯಲ್ಲಿ ಸಾರ್ವಜನಿಕರಿಗೆ ನಾವೆಲ್ಲರೂ ಸೇರಿಕೊಂಡು ಉತ್ತಮ ಸೇವೆಗಳನ್ನು ನೀಡೋಣ ಎಂದರು.

ನೌಕರರ ಸಂಘದ ಜಿಲ್ಲಾಧ್ಯಕ್ಷ ಎಂ.ಬಿ.ಬಳ್ಳಾರಿ ಮಾತನಾಡಿ, ಸಂಘದಿಂದ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ನೌಕರರ ಮಕ್ಕಳಿಗೆ ಪ್ರತಿಭಾಪುರಸ್ಕಾರ, ನೌಕರರಿಗಾಗಿ ವಿವಿಧ ಕ್ರೀಡಾಕೂಟ ಆಯೋಜನೆ ಸಹಿತ ವಿವಿಧ ಸ್ಪರ್ಧಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಮಹಿಳಾ ನೌಕರರಿಗೆ ವಿಶೇಷ ರಜೆ ನೀಡಲು ಸಂಘ ಪ್ರಮುಖ ಪಾತ್ರ ವಹಿಸಿದೆ. ಸರಕಾರಿ ನೌಕರರಿಗೆ 7ನೇ ವೇತನ ಜಾರಿ ಮಾಡುವಲ್ಲಿ ತನ್ನದೇಯಾದ ಹೋರಾಟ ಮಾಡುವ ಮೂಲಕ ಯಶಸ್ವಿಯಾಗಿದೆ. ಇನ್ನು ಹಳೆ ಪಿಂಚಣಿ ಯೋಜನೆ ಅತಿ ಶೀಘ್ರದಲ್ಲಿ ಜಾರಿ ಮಾಡಲು ಸರಕಾರದ ಗಮನ ಸೆಳೆಯುವಲ್ಲಿ ಸಫಲರಾಗಲಿದ್ದೇವೆ ಎಂದರು.

ತಹಶೀಲ್ದಾರ ಅನಿಲ ಬಡಿಗೇರ ಮಾತನಾಡಿದರು. ಇದೇ ಸಂದರ್ಭದಲ್ಲಿ ನೂತನ ಆಯ್ಕೆಗೊಂಡಡಿರುವ ನೂತನ ಪದಾಧಿಕಾರಿಗಳಿಗೆ ಪ್ರಮಾಣಪತ್ರ ನೀಡಿ ಗೌರವಿಸಲಾಯಿತು. ವೇದಿಕೆಯಲ್ಲಿ ಸಂಜೀವ ಸತರಡ್ಡಿ, ತಾಲೂಕಾ ವೈದ್ಯಾ್ಯಧಿಕಾರಿ ಡಾ.ಜಿ.ಎಸ್.ಗಲಗಲಿ, ಸರಕಾರಿ ಆಸ್ಪತ್ರೆ ಸಿಎಂಒ ಡಾ. ವಾಸು ಮುದಿಗೌಡರ, ಡಾ.ಕೃಷ್ಣಾ ಬಣ್ಣದ, ಡಾ.ಪಿ.ಬಿ.ಬಳ್ಳೂರ, ಬಿಇಒ ಎ.ಕೆ.ಬಸನ್ನವರ, ನರೇಂದ್ರ ನಿಡೋಣಿ, ಗೋಪಾಲ ನೀಲನಾಯಕ, ಪ್ರಕಾಶ ಹೊಸಮನಿ, ಬಸವರಾಜ ಹನಗಂಡಿ, ಸಂಗಮೇಶ ಮಲಕಪ್ಪನವರ ಸಹಿತ ಹಲವರು ಇದ್ದರು.

ನೌಕರರ ಸಂಘದ ತಾಲ್ಲೂಕಾಧ್ಯಕ್ಷ ಪಿ.ಬಿ.ಅಜ್ಜನವರ ಸ್ವಾಗತಿಸುವ ಮೂಲಕ ಸಭೆಯ ನಡಾವಳಿಗಳನ್ನು ಮಂಡಿಸಿ ಅನುಮೋದನೆ ಪಡೆದರು. ಶಿಕ್ಷಕ ಪಿ.ಎಸ್. ಕಟ್ಟಿಮನಿ ಪ್ರಾರ್ಥಿಸಿದರು, ಶಿಕ್ಷಕರಾದ ಎಸ್. ಎಂ.ಕಾಯಿ, ಎಸ್.ಆರ್.ಮುದ್ದೂರ ಸ್ವಾಗತಿಸಿದರು. ವಿಜಯಕುಮಾರ ಯಳಮೇಲಿ ನಿರೂಪಿಸಿದರು. ಎ.ಎಚ್.ಮುಲ್ಲಾ ವಂದಿಸಿದರು.

# ರೋಟರಿ ಅಡಿಯಲ್ಲಿ ಉಚಿತ ಕಣ್ಣು ತಪಾಸಣೆ ಶಿಬಿರ

**ಜಮಖಂಡಿ:** ರೋಟರಿ ಸಂಸ್ಥೆಯ ಅಡಿಯಲ್ಲಿ ಬಾಗಲಕೋಟೆಯ ಡಾ.ಮಾಸೂರಕರ ಅವರ ಕಣ್ಣಿನ ಆಸ್ಪತ್ರೆಯ ಆಶ್ರಯದಲ್ಲಿ ಬಡವರಿಗೆ ಉಚಿತವಾಗಿ ಕಣ್ಣು ತಪಾಸಣೆ ಶಿಬಿರ ಆಯೋಜಿಸಲಾಗುವುದು. ಶೇ 50ರ ರಿಯಾಯಿತಿ ದರದಲ್ಲಿ ಕನ್ನಡಕ ವಿತರಿಸಲಾಗುವುದು. ರೋಟರಿ ಸಂಸ್ಥೆ ಸೂಚಿಸುವ ಕಡೆ ಶಿಬಿರವನ್ನು ಆಯೋಜಿಸಲಾಗುವುದು ಎಂದು ರೋಟರಿ ಮುಖ್ಯಸ್ಥ ನಾರಾಯಣ ಹೆರಕಲ್ ಹೇಳಿದರು.

ನಗರದ ವಿಜಯಪುರ ರಸ್ತೆಯಲ್ಲಿನ ರೋಟರಿ ಭವನದಲ್ಲಿ ರೋಟರಿ ಸಂಸ್ಥೆಯ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿದ ಅವರು, ಪಲ್ಸ್ ಪೋಲಿಯೋ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಕುರಿತು ವಿಶೇಷ ಉಪನ್ಯಾಸ ವ್ಯವಸ್ಥೆ ಮಾಡಬೇಕು. ಮಳೆ ನೀರು ಕೊಯ್ಲು, ಚೆಕ್ ಡ್ಯಾಂ ನಿರ್ಮಾಣದ ಮಹತ್ವ ಕುರಿತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಶಿಕ್ಷಕರಿಗೆ ತರಬೇತಿ ಕಾರ್ಯಾಗಾರ, ಶಾಲಾ-ಕಾಲೇಜು ಮಕ್ಕಳಿಗೆ ಗಣಕಯಂತ್ರ ಮತ್ತು ಸೈಕಲ್ ವಿತರಿಸುವಂತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ರೋಟರಿ ಜಿಲ್ಲೆ ಸ್ಥಾನ ಅರ್ಹತೆವುಳ್ಳ ವ್ಯಕ್ತಿಗಳನ್ನು ಗುರುತಿಸಿ ರೋಟರಿ ಸದಸ್ಯರನ್ನಾಗಿ ಮಾಡಿಕೊಳ್ಳಬೇಕು. ಮುಂಬರುವ ದಿನಗಳಲ್ಲಿ ಹೊಸ ಮತ್ತು ವಿನೂತನವಾದ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕು ಎಂದರು.




ನಗರದ ವಿಜಯಪುರ ರಸ್ತೆಯಲ್ಲಿನ ರೋಟರಿ ಭವನದಲ್ಲಿ ರೋಟರಿ ಸಂಸ್ಥೆಯ ಹಮ್ಮಿಕೊಂಡಿದ್ದ ಸಭೆಯಲ್ಲಿ ರೋಟರಿ ಮುಖ್ಯಸ್ಥ ನಾರಾಯಣ ಹೆರಕಲ್ ಅವರನ್ನು ಸನ್ಮಾನಿಸಲಾಯಿತು.

ಸ್ಥಳೀಯ ರೋಟರಿ ಸಂಸ್ಥೆಯ ಅಧ್ಯಕ್ಷ ರಾಜಶೇಖರ ಕೋವಳ್ಳಿ ಅಧ್ಯಕ್ಷತೆ ವಹಿಸಿ ಮಾತನಾಡಿ, ರೋಟರಿ ಸಂಸ್ಥೆ ನಿರ್ಮಿಸುತ್ತಿರುವ ಅಡುಗೆ ಕೋಣೆ ಉದ್ಘಾಟನೆ ಮತ್ತು ರೋಟರಿ ಜಿಲ್ಲಾಮಟ್ಟದ ಕಾರ್ಯಕ್ರಮಗಳನ್ನು ಜಮಖಂಡಿಗೆ ವಹಿಸಿಕೊಡಲು ಮನವಿ ಮಾಡಿದರು. ವೇದಿಕೆಯಲ್ಲಿ ರೋಟರಿ ಸಂಸ್ಥೆ ಕಾರ್ಯದರ್ಶಿ ಎಂ.ಎಚ್.ಕಡ್ಲಿಮಟ್ಟಿ, ಖಜಾಂಚಿ ಶಂಕರ ತೇಲಿ ಸಹಿತ ಹಲವರು ಇದ್ದರು.

# ಅ.17 ರಂದು ಜಿಲ್ಲಾ ಮಟ್ಟದ ಯುವಜನೋತ್ಸವ

**ಕೊಪ್ಪಳ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ 2025-26ನೇ ಸಾಲಿನ ಕೊಪ್ಪಳ ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮವನ್ನು ಅಕ್ಟೋಬರ್ 17 ರಂದು ನಗರದ ಸಾಹಿತ್ಯ ಭವನದಲ್ಲಿ ಹಮ್ಮಿಕೊಳ್ಳಲಾಗುತ್ತಿದ್ದು, ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮದಲ್ಲಿ 15 ರಿಂದ 29 ವರ್ಷ ವಯೋಮಾನದೊಳಗಿನ ಯುವಜನರು ಭಾಗವಹಿಸಲು ಅವಕಾಶವಿರುತ್ತದೆ.

ಕೇಂದ್ರ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಮಂತ್ರಾಲಯವು ರಾಷ್ಟ್ರ ಮಟ್ಟದ ಯುವಜನೋತ್ಸವವನ್ನು ಪ್ರತಿ ವರ್ಷ ಜನವರಿ 12 ರಿಂದ 16ರ ವರೆಗೆ ಆಯೋಜಿಸಲಾಗುತ್ತದೆ. ಈ ಕಾರ್ಯಕ್ರಮಕ್ಕೆ ಕರ್ನಾಟಕ ವಿಜೇತ ಸ್ಪರ್ಧಾಳುಗಳ ತಂಡವನ್ನು ಕಳುಹಿಸುವ ಸಲುವಾಗಿ ಜಿಲ್ಲಾ ಮತ್ತು ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮವನ್ನು ಸಂಘಟಿಸಬೇಕಾಗಿದ್ದು, ಅದರಂತೆ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಮಟ್ಟದ ಯುವ ಜನೋತ್ಸವ ಕಾರ್ಯಕ್ರಮದಲ್ಲಿ ಪ್ರಥಮ ಸ್ಥಾನ ಪಡೆದವರು ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಅರ್ಹರಿರುತ್ತಾರೆ. ರಾಜ್ಯ ಮಟ್ಟದಲ್ಲಿ ಭಾಗವಹಿಸಿ ವಿಜೇತರಾದವರು ರಾಷ್ಟ್ರ ಮಟ್ಟದ ಯುವ ಜನೋತ್ಸವ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುತ್ತಾರೆ.

ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮದ ಸ್ಪರ್ಧೆಗಳಲ್ಲಿ ಸಾಂಸ್ಕೃತಿಕ ವಿಭಾಗದಲ್ಲಿ ಜನಪದ ನೃತ್ಯ (ತಂಡ), ಜನಪದ ಗೀತೆ (ತಂಡ) ಪ್ರಾದೇಶಿಕ ಭಾಷೆ, ಕಥೆ ಬರೆಯುವುದು (Story Writing) (1000 ಪದಗಳಿಗೆ ಮೀರದಂತೆ, ಹಿಂದಿ, ಆಂಗ್ಲ, ಪ್ರಾದೇಶಿಕ ಭಾಷೆಯಲ್ಲಿ), ಚಿತ್ರಕಲೆ, ಘೋಷಣೆ(ಹಿಂದಿ ಮತ್ತು ಆಂಗ್ಲ ಭಾಷೆಯಲ್ಲಿ ಇರಬೇಕು. ಸ್ಪರ್ಧಿಗಳು ಸಿದ್ಧಪಡಿಸಿಕೊಂಡಿರುವ ಆಯ್ದ ವಿಷಯಗಳ ಬಗ್ಗೆ 7 ನಿಮಿಷಗಳ ಭಾಷಣ ಮಾಡಬೇಕು), ಕವಿತೆ ಬರೆಯುವುದು (ವೈಯಕ್ತಿಕ: ಹಿಂದಿ, ಆಂಗ್ಲ, ಪ್ರಾದೇಶಿಕ ಭಾಷೆಯಲ್ಲಿ) ಹಾಗೂ ಖಟಿಟಿಠತಚಿಣುಠಟ ಖಿಡಿಚಿಛಿಇ ವಿಭಾಗದಲ್ಲಿ Exhibition of Science Mela ರಾಜ್ಯ ಮಟ್ಟದವರೆಗೆ ಮಾತ್ರ ಆಯೋಜಿಸಲಾಗುವುದು

ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಚ್ಛಿಸುವ ಸ್ಪರ್ಧಾಳುಗಳು ಆಧಾರ್ ಕಾರ್ಡ್ ಝುರಾಕ್ಸ್ ಪ್ರತಿ, ಬ್ಯಾಂಕ್ ಪಾಸಬುಕ್ ಪ್ರತಿ, 2-ಭಾವಚಿತ್ರದೊಂದಿಗೆ ಕಾರ್ಯಕ್ರಮ ದಿನದಂದು ಬೆಳಿಗ್ಗೆ 9 ಗಂಟೆಯೊಳಗಾಗಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು. ದೂರವಾಣಿ ಮುಖಾಂತರ ನೋಂದಣಿಗಾಗಿ ಬಿ.ಕೀರ್ತಿವರ್ಧನ ದ್ವಿ.ದ.ಸ-7676343554, ತುಕಾರಾಮ, ಕಛೇರಿ ಸಿಬ್ಬಂದಿ-8197398600 ಇವರನ್ನು ಹಾಗೂ ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಜಿಲ್ಲಾ ಕ್ರೀಡಾಂಗಣ, ಗದಗ ರಸ್ತೆ, ಕೊಪ್ಪಳ ಕಛೇರಿಯ ದೂರವಾಣಿ ಸಂಖ್ಯೆ: 08539-230121 ಗೆ ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದು ಎಂದು ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೇಕಾರ ಸೇವಾ ಸಂಘ ವಿರುದ್ಧ ಆಕ್ರೋಶ



**ರಬಕವಿ-ಬನಹಟ್ಟಿ:** ಶಾಸಕ ಸಿದ್ದು ಸವದಿ ಕೆಎಚ್‌ಡಿಸಿ ಅಧ್ಯಕ್ಷರಾದಾಗ ನಡೆದ ಅವ್ಯವಹಾರ ಕುರಿತಾಗಿ ರಾಜ್ಯ ನೇಕಾರ ಸೇವಾ ಸಂಘದ ಅಧ್ಯಕ್ಷ ಶಿವಲಿಂಗ ಟಿರಕಿ ನೀಡಿರುವ ಹೇಳಿಕೆ ವಿರುದ್ಧ ಬನಹಟ್ಟಿ ಪೋಲೀಸ್ ಠಾಣೆಯಲ್ಲಿ ಬಿಜೆಪಿ ನಗರಾಧ್ಯಕ್ಷ ಶ್ರೀಶೈಲ ಬೀಳಗಿ ದೂರು ನೀಡಿದ್ದ ಹಿನ್ನೆಲೆಯಲ್ಲಿ ವಿಚಾರಣೆಗೆ ಆಗಮಿಸಿದ್ದ ಟಿರಕಿ ಮತ್ತವರ ಬೆಂಬಲಿಗರನ್ನು ಸುತ್ತುವರೆದು ಬಿಜೆಪಿ ಕಾರ್ಯಕರ್ತರು ಆರೋಪದ ಬಗ್ಗೆ ಸಾಕ್ಷಿ ಒದಗಿಸಲು ಪಟ್ಟು ಹಿಡಿದರು.

ಅವ್ಯವಹಾರ ನಡೆದ ಬಗ್ಗೆ ಶಾಸಕರೇ ಒಂದು ಸಂದರ್ಶನದಲ್ಲಿ ಒಪ್ಪಿಕೊಂಡಿದ್ದು ಮತ್ತು ಸದನದಲ್ಲಿ ಜವಳಿ ಸಚಿವರು ನಿಗಮದಲ್ಲಿ ನಡೆದ ಅವ್ಯವಹಾರದ ತನಿಖೆ ನಡೆಸುವ ಹೇಳಿಕೆ ನೀಡಿರುವುದು ಮಾಧ್ಯಮಗಳಲ್ಲಿ ಬಿತ್ತರಗೊಂಡಿವೆ. ಅವ್ಯವಹಾರದ ಬಗ್ಗೆ ಜಿಲ್ಲಾಧಿಕಾರಿಗಳು ಸೇರಿ ಸಚಿವರು, ಸಿಎಂಗೆ ಮನವಿ ಸಲ್ಲಿಸಿ ನೇಕಾರ ಸಂಘಟನೆ ಆಗ್ರಹಿಸಿದೆಯಲ್ಲದೇ ದಾಖಲೆಗಳು ನಮ್ಮ ಬಳಿ ಇವೆಯೆಂದು ಟಿರಕಿ ಸ್ಪಷ್ಟನೆ ನೀಡಿದರು.

> ನೇಕಾರ ಸಂಘಟನೆ ರಾಜ್ಯಾಧ್ಯಕ್ಷ ಟಿರಕಿ ಗಾಳಿಯಲ್ಲಿ ಗುಂಡು ಹಾರಿಸುತ್ತ ಶಾಸಕ ಸಿದ್ದು ಸವದಿ ಹೆಸರಿಗೆ ಕಳಂಕ ತರುತ್ತಿದ್ದಾರೆ. ತಮ್ಮಲ್ಲಿ ದಾಖಲೆಗಳಿದ್ದರೆ ಲೋಕಾಯುಕ್ತ ಇಲ್ಲವೇ ಬೇರೆ ಸಂಸ್ಥೆಗಳಲ್ಲಿ ಪ್ರಕರಣ ದಾಖಲಿಸಲಿ ಸತ್ಯವಿದ್ದರೆ ನಾವೂ ಬೆಂಬಲಿಸುತ್ತೇವೆ.
>
> **ಶ್ರೀಶೈಲ ಬೀಳಗಿ.**
> **ಅಧ್ಯಕ್ಷರ ನಗರ ಬಿಜೆಪಿ.**

> ನಾನು ಮಾಡಿರುವ ಆರೋಪದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಶಾಸಕ ಸಿದ್ದು ಸವದಿ ಅಧ್ಯಕ್ಷರಾದಾಗಲೇ ನಿಗಮದಲ್ಲಿ 106 ಕೋಟಿ ಮೊತ್ತದ ಭ್ರಷ್ಟಾಚಾರ ಆಗಿದ್ದು ಇದರಿಂದ ನೇಕಾರರಿಗೆ ಅನ್ಯಾಯವಾಗಿದೆ.
>
> **ಶಿವಲಿಂಗ ಟಿರಕಿ. ರಾಜ್ಯಾಧ್ಯಕ್ಷರು,**
> **ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘ**

ಬಿಜೆಪಿ ಸದಸ್ಯರ ಮತ್ತು ನೇಕಾರ, ರೈತ ಸಂಘಟನೆಗಳ ಧುರೀಣರ ನಡುವೆ ವಾಗ್ಯುದ್ಧ ಬಿರುಸುಗೊಂಡಾಗ, ಪಿಎಸ್ಸೈ ಶಾಂತಾ ಹಳ್ಳಿ ಉಭಯತರರಿಗೆ ದೂರು ಸ್ವೀಕರಿಸುವುದು ನಮ್ಮ ವ್ಯಾಪ್ತಿಯಲ್ಲಿ ಇಲ್ಲದಿದ್ದಾಗ್ಯು ಸಣ್ಣ ಕಿಡಿ ದಳ್ಳುರಿ ಆಗಬಾರದೆಂದು ಸ್ವೀಕರಿಸಿದ್ದು, ಸಂಯಮ ಮೀರಿದರೆ ಕಾರಣರಾದವರನ್ನು ಮುಲಾಜಿಲ್ಲದೇ ಒಳಹಾಕಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು.

ಪರಸ್ಪರರು ಶಾಂತಿ ಕಾಯ್ದುಕೊಳ್ಳುವಂತೆ ಎಚ್ಚರಿಸಿ ಮತ್ತು ಭ್ರಷ್ಟಾಚಾರದ ದಾಖಲೆಗಳಿದ್ದಲ್ಲಿ ಸಂಬಂಧಿತ ಇಲಾಖೆಯಲ್ಲಿ ಪ್ರಕರಣ ದಾಖಲಿಸಿ ಮುಂದುವರೆಯಿರಿ. ಸುಮ್ಮನೇ ಆರೋಪ ಮಾಡುತ್ತ ಶಾಂತಿ ಕದಡಬಾರದೆಂದು ಎಚ್ಚರಿಕೆ ನೀಡಿದರು.

# ವಿಕಲಚೇತನ ಮಕ್ಕಳ ವೈದ್ಯಕೀಯ ಮೌಲ್ಯಾಂಕನ ಶಿಬಿರ

**ಬೈಲಹೊಂಗಲ:** ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಕ್ಷೇತ್ರ ಸಂಪನ್ಮೂಲ ಕೇಂದ್ರದ ಆಶ್ರಯದಲ್ಲಿ ತಾಲೂಕಾ ಮಟ್ಟದ ವಿಕಲಚೇತನ ಮಕ್ಕಳ ಉಚಿತ ವೈದ್ಯಕೀಯ ತಪಾಸಣಾ ಶಿಬಿರವನ್ನು ಶುಕ್ರವಾರ ಹಮ್ಮಿಕೊಳ್ಳಲಾಗಿತ್ತು

ಮುಖ್ಯ ಅಥಿತಿಗಳಾಗಿ ಆಗಮಿಸಿದ ತಾಲೂಕಾ ಆರೋಗ್ಯಾಧಿಕಾರಿ ಡಾ. ಸಂಜಯ ಸಿದ್ದಣ್ಣವರ ಮಾತನಾಡಿ, ವಿಕಲಚೇತನ ಮಕ್ಕಳಲ್ಲಿ ವಿಶೇಷವಾದ ಕೌಶಲ್ಯಗಳಿದ್ದು ಅವುಗಳನ್ನು ಗುರುತಿಸಿ ಪ್ರೋತ್ಸಾಹಿಸಬೇಕು. ಸರ್ಕಾರದಿಂದ ಆಯೋಜಿಸಿರುವ ಈ ಶಿಬಿರದ ಸದುಪಯೋಗವನ್ನು ತಾಲೂಕಿನ ಎಲ್ಲ ಮಕ್ಕಳು ಪಡೆದುಕೊಳ್ಳಬೇಕೆಂದು ಹೇಳಿದರು.


ಪ್ರಭಾರಿ ಕ್ಷೇತ್ರ ಸಮನ್ವಯಾಧಿಕಾರಿ ಎಂ. ಎನ್. ಕಾಂಬಳೆ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಂಯೋಜಕ ಗಂಗಾಧರ ಕಾಮಕರ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಪುಷ್ಪಾ ಶಿಂತ್ರಿ, ತಜ್ಞ ವೈದ್ಯ ಡಾ.ರವೀಂದ್ರ ಜಕನೂರ, ಎಲುವು ಕೀಳುಗಳ ತಜ್ಞ ಡಾ. ವೀರೇಂದ್ರ ಹಡಪದ ನೇತ್ರ ತಜ್ಞ ಡಾ. ಎನ್. ಆಯ್. ಸಂವಸುದ್ದಿ, ಡಾ. ವರ್ಷಾ ಅಲಿಂಕೋ, ಸಂಸ್ಥೆಯ ಡಾ. ಅಭಿಷೇಕ ಮತ್ತು ತಂಡದವರು ವಿವಿಧ ನ್ಯೂನತೆ ಮಕ್ಕಳನ್ನು ತಪಾಸಣೆ ಮಾಡಿದರು.

ತಪಾಸಣೆಗೆ ಒಳಪಟ್ಟ ಮಕ್ಕಳಿಗೆ ಅವಶ್ಯಕತೆ ಇರುವ ಸಾಧನ ಸಲಕರಣೆ ಶಿಫಾರಸು ಮಾಡಿದರು. ಶಿಬಿರದಲ್ಲಿ ಇಸಿಓ, ಬಿ.ಆರ್‌ಪಿ, ಸಿಆರ್‌ಪಿ, ಬಿಆಯ್‌ಇಆರ್‌ಟಿ ಸಿಬ್ಬಂದಿ ಉಪಸ್ಥಿತರಿದ್ದರು. ಶಿಕ್ಷಕ ರಮೇಶ ಇಂಗಳಗಿ ಸ್ವಾಗತಿಸಿದರು. ಶಿಕ್ಷಕ ಮಂಜುನಾಥ ಕಾಜಗಾರ ನಿರೂಪಿಸಿದರು. ಶಿಕ್ಷಕ ರವಿ ತುರಮರಿ ವಂದಿಸಿದರು.



ಬೈಲಹೊಂಗಲದ ಬಿಇಓ ಕಛೇರಿಯಲ್ಲಿ ನಡೆದ ತಾಲೂಕಾ ಮಟ್ಟದ ವಿಕಲಚೇತನ ಮಕ್ಕಳ ಉಚಿತ ವೈದ್ಯಕೀಯ ತಪಾಸಣಾ ಶಿಬಿರವನ್ನು ಗಣ್ಯರು, ತಜ್ಞ ವೈದ್ಯರು ಉದ್ಘಾಟಿಸಿದರು.

# ಶೂ ಎಸೆತ ಖಂಡಿಸಿ ಪ್ರತಿಭಟನೆ





**ರಾಮದುರ್ಗ:** ಸುಪ್ರೀಂಕೋರ್ಟನ ನ್ಯಾಯಾಧೀಶರ ಮೇಲೆ ನ್ಯಾಯವಾದಿ ಯೊಬ್ಬರು ಶೂ ಎಸೆದ ಘಟನೆಯನ್ನು ಖಂಡಿಸಿ ರಾಮದುರ್ಗದಲ್ಲಿ ವಿವಿಧ ಸಂಘಟನೆಗಳ ಸದಸ್ಯರು ಪ್ರತಿಭಟನೆ ನಡೆಸಿ ತಹಸೀಲ್ದಾರರ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿ, ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

ಕಾರ್ಮಿಕ ಮುಖಂಡ ಗೈಬು ಜೈನೆಖಾನ್ ಮಾತನಾಡಿ, ಸನಾತನ ಧರ್ಮ ರಕ್ಷಣೆ ಬಗ್ಗೆ ಕೂಗುತ್ತಾ ಕೋರ್ಟ್ನಲ್ಲಿ ಕಲಾಪಗಳು ನಡೆಯುತ್ತಿರುವ ಸಂದರ್ಭದಲ್ಲಿ ರಾಕೇಶ ಕಿಶೋರ್ ಎಂಬ ಮತೀಯವಾದಿ ವಕೀಲರು ಸರ್ವೋಚ್ಛ ನ್ಯಾಯಾಲಯದ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆದಿರುವ ಘಟನೆ ಸಂವಿಧಾನಕ್ಕೆ ಮಾಡಿರುವ ಅಪಮಾನ ಹಾಗೂ ಭಾರತ ದೇಶಕ್ಕೆ ಒಂದು ಕಪ್ಪು ಚುಕ್ಕೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಿವೃತ್ತ ಪ್ರಾಚಾರ್ಯ ಎಸ್.ಜಿ.ಚಿಕ್ಕನರಗುಂದ ಮಾತನಾಡಿ, ಸುಪ್ರೀಂ ಕೋರ್ಟ್ನ ಮುಖ್ಯ ನ್ಯಾಯಾಧೀಶ ಬಿ.ಅರ್.ಗವಾಯಿ ಅವರು ಪರಿಶಿಷ್ಟ ಜಾತಿ ಸಮುದಾಯಕ್ಕೆ ಸೇರಿದ್ದರಿಂದ ಹಾಗೂ ಅವರು ಉನ್ನತ ಸ್ಥಾನದಲ್ಲಿರುವ ಒಬ್ಬ ವ್ಯಕ್ತಿ ಎಂದು ಧರ್ಮ ರಕ್ಷಕನ ಅಸಹನೆಗೆ ತುತ್ತಾಗಿದ್ದಾರೆ. ಪ್ರಜಾಪ್ರಭುತ್ವ ದೇಶದಲ್ಲಿ ಈ ರೀತಿಯ ಘಟನೆ ನಡೆಯುತ್ತಿರುವುದು ತುಂಬಾ ನೋವು ತಂದಿದೆ ಎಂದು ವಿಷಾದ ವ್ಯಕ್ತಪಡಿಸಿದರು. ಸಮುದಾಯ ಘಟಕದ ರಾಜಶೇಖರ ಶಲವಡಿ ಮಾತನಾಡಿ, ದೇಶದಲ್ಲಿ ನಿತ್ಯ ಈ ರೀತಿಯ ಘಟನೆಗಳು ನಡೆಯುತ್ತಲಿವೆ. ಅಲ್ಪಸಂಖ್ಯಾತ, ದಲಿತರ, ಮಹಿಳೆಯರ ಮೇಲೆ ದೌರ್ಜನ್ಯಗಳು ನಡೆಯುತ್ತಲಿದ್ದರು ಆಳುವ ಸರಕಾರಗಳು ಕಣ್ಣು ಮುಚ್ಚಿ ಕುಳಿತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಮುಖಂಡರಾದ ನಾಗಪ್ಪ ಸಂಗೊಳ್ಳಿ, ಮಹಮ್ಮದಶಫಿ ಬೆಣ್ಣಿ, ಎಂ.ಕೆ. ಯಾದವಾಡ, ದುಂಡಪ್ಪ ಕರಿಗಾರ, ಸುಭಾಸ ಘೋಡಕೆ, ಪಡಿಯಪ್ಪ ಕ್ವಾರಿ, ಆಶೀಫ್ ಖಲೀಫ್, ಬಸೀರ ಬೈರಕದಾರ, ತುಳಸಮ್ಮ ಮಾಳದಕರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಜೈನ್ ಸಮಾಜದಲ್ಲಿ ಪಂಡಿತರ ಪಾತ್ರ ಬಹಳ ಮಹತ್ವದ್ದು



**ರಾಯಬಾಗ:** ಜೈನ್ ಸಮಾಜದಲ್ಲಿ ಹುಟ್ಟಿದ ದಿನದಿಂದ ಸಾಯುವವರೆಗೆ ಪಂಡಿತರ ಪಾತ್ರ ಬಹಳ ಮಹತ್ವದ್ದಿದೆ ಎಂದು ಇಂಡಿಯ ಚಂದ್ರಕಾಂತ ಉಪಾಧ್ಯೆ ಹೇಳಿದರು.

ತಾಲೂಕಿನ ನಸಲಾಪೂರ ಗ್ರಾಮದಲ್ಲಿ ಬಾಲಾಚಾರ್ಯ 108 ಡಾ.ಶ್ರೀ ಸಿದ್ಧಸೇನ ಮುನಿಮಹಾರಾಜರ ಸಾನ್ನಿಧ್ಯದಲ್ಲಿ ರಾಜ್ಯ ಮಟ್ಟದ ಜೈನ ಪಂಡಿತ (ಉಪಾಧ್ಯೆ, ಪುರೋಹಿತರು), ಲೇಖಕ, ಸಾಹಿತ್ಯಕಾರ, ಇಂಜಿನಿಯರ್. ಸಿ.ಏ., ಸಂಗೀತಕಾರರ ಸಮಾವೇಶಕ್ಕೆ ಚಾಲನೆ ನೀಡಿ ಮಾತನಾಡಿ, ಅಡುಗೆ ಮನೆಯೊಳಗೆ ಹೋಗಿ ಹೋಮ ಹವನ ಮಾಡುವ ಅಧಿಕಾರ ಅರ್ಚಕರಿಗೆ ಇರುತ್ತದೆ. ಹಾಗಾಗಿ ಈ ವೃತ್ತಿಯನ್ನು ಗೌರವಿಸಿ ಎಂದರು.

ಗ್ರಾಮದಲ್ಲಿ ಜೈನರು ಒಕ್ಕಟ್ಟಾಗಿ ಸಮಾನ ಮನಸ್ಕರರು ಇದ್ದರೆ ಪೂಜೆ ಪುನಸ್ಕಾರಗಳು ಉತ್ತಮ ರೀತಿಯಲ್ಲಿ ಸಾಗುತ್ತದೆ. ಪಂಡಿತರಾದವರು ಕಲಿಯುವುದನ್ನು ನಿಲ್ಲಿಸಬೇಡಿ ಶಾಸ್ತ್ರ, ಗ್ರಂಥಗಳ ಕುರಿತು ಹೆಚ್ಚಿನ ಅಧ್ಯಯನ ಮಾಡಬೇಕಿದೆ ಎಂದರು. ವಾಸ್ತು ಶಾಸ್ತ್ರ ಜ್ಯೋತಿಷ್ಯ ಶಾಸ್ತ್ರದ ಬಗ್ಗೆ ಹೇಳುದಾದ್ರೆ ಜೈನ ಧರ್ಮ ಗರ್ಭ ಸಿದ್ಧಾಂತದ ಮೇಲಿದೆ. ನಿಮ್ಮ ಕರ್ಮ ಚೆನ್ನಾಗಿದ್ದರೆ ಸ್ಮಶಾನದಲ್ಲಿ ಮನೆ ಕಟ್ಟಿದರೂ ಶಾಂತವಾಗಿರುತ್ತದೆ. ಕರ್ಮವನ್ನು ಚೆನ್ನಾಗಿಟ್ಟುಕೊಳ್ಳಲು ಪ್ರಯತ್ನಿಸಿ ಎಂದು ತಿಳಿಸಿದರು. ಪಂಡಿತ (ಉಪಾಧ್ಯೆ, ಪುರೋಹಿತರು), ಲೇಖಕ, ಸಾಹಿತ್ಯಕಾರ, ಇಂಜಿನಿಯರ್. ಸಿ.ಏ., ಸಂಗೀತಕಾರರನ್ನು ಇದೇವೇಳೆ ಸನ್ಮಾನಿಸಲಾಯಿತು. ಮತ್ತು ಚಂದ್ರಕಾಂತ ಉಪಾಧ್ಯೆ ಅವರು ಪುರೋಹಿತರಿಗೆ ಉಪಯೋಗವಾಗಲೆಂದು 'ಅರಿಹಂತ ಅರ್ಚನಾ' ಪುಸ್ತಕ ಬಿಡುಗಡೆ ಮಾಡಲಾಯಿತು. ಇದೇ ವೇಳೆ ವಿಫುಲ ಹವಳೆ ಅವರಿಂದ ಸಂಗೀತ ಕಾರ್ಯಕ್ರಮ ನೆರವೇರಿತು.

ಈ ಸಂದರ್ಭದಲ್ಲಿ ಎಂಜನೀಯರ ಅಮರ ದುರ್ಗಣ್ಣವರ, ಅಜೀತ ಪಾಟೀಲ, ಅಜೀತ ಉಪಾಧ್ಯೆ, ಚಂದ್ರಕಾಂತ ಪಂಡಿತ, ಶಾಂತಿನಾಥ ಉಪಾಧ್ಯೆ, ನೇಮಿನಾಥ ಉಪಾಧ್ಯೆ, ಶಾಂತಿನಾಥ ಉಪಾಧ್ಯೆ, ಸಮ್ಮೇದ ಉಪಾಧ್ಯೆ, ಆಧಿನಾಥ ಉಪಾಧ್ಯೆ, ಪಾಸಗೌಂಡ ಪಾಟೀಲ, ರಾಜು ಭಯ್ಯಾ, ಭೂಪಾಲ ಉಪಾಧ್ಯೆ , ಪದ್ಮರಾಜ ಉಪಾಧ್ಯೆ, ಜಂಬು ಉಪಾಧ್ಯೆ ಸೇರಿದಂತೆ ಜೈನ ಶ್ರಾವಕ ಶ್ರಾವಕಿಯರು ಉಪಸ್ಥಿತರಿದ್ದರು. ಆನಂದ ಉಪಾಧ್ಯೆ ಸ್ವಾಗತಿಸಿದರು. ಶಾಂತಿನಾಥ ಉಪಾಧ್ಯೆ ವಂದಿಸಿದರು.

### ಪ್ರಧಾನಮಂತ್ರಿ ಧನ-ಧಾನ್ಯ ಕೃಷಿ ಯೋಜನೆಗಳ ಉದ್ಘಾಟಿಸಿದ ಸಂಸದ ಬಸವರಾಜ ಬೊಮ್ಮಾಯಿ

# ದೇಶದ ಸಮಗ್ರ ಅಭಿವೃದ್ಧಿಗೆ ಕೃಷಿ ಪಾತ್ರ ಪ್ರಮುಖವಾಗಿದೆ

**ಹಾವೇರಿ:** ದೇಶದ ಸಮಗ್ರ ಅಭಿವೃದ್ಧಿಗೆ ಕೃಷಿ ಪಾತ್ರ ಪ್ರಮುಖವಾಗಿದೆ. ಕೃಷಿ ಕ್ಷೇತ್ರದಲ್ಲಿ ಶೇ.ಒಂದರಷ್ಟು ಅಧಿಕವಾದರೆ ಶೇ.4 ಪ್ಯಾಕಿಂಗ್ ಹಾಗೂ ಶೇ.10 ರಷ್ಟು ಸೇವಾ ವಲಯದ ಅಭಿವೃದ್ಧಿಯಾಗುತ್ತದೆ ಎಂದು ಆರ್ಥಿಕ ತಜ್ಞರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ ಎಂದು ಮಾಜಿ ಮುಖ್ಯಮಂತ್ರಿಗಳು ಹಾಗೂ ಲೋಕಸಭಾ ಸದಸ್ಯರಾದ ಬಸವರಾಜ ಬೊಮ್ಮಾಯಿ ಅವರು ಹೇಳಿದರು.

ಹನುಮನಮಟ್ಟಿ ಕೃಷಿ ಜ್ಞಾನ ಕೇಂದ್ರದಲ್ಲಿ ಶನಿವಾರ ಮಾನ್ಯ ಪ್ರಧಾನಮಂತ್ರಿಗಳು ದೆಹಲಿಯಿಂದ 'ಪ್ರಧಾನಮಂತ್ರಿ ಧನ-ಧಾನ್ಯ ಕೃಷಿ ಯೋಜನೆಗಳನ್ನು ಉದ್ಘಾಟಿಸಿದ ನೇರ ಪ್ರಸಾರದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಒಕ್ಕಲಿಗನ ಬದುಕು ಬಯಲಿನ ಬದುಕು ಹಾಗೂ ಅನಿಶ್ಚಿತ ಬದುಕು. ಮಳೆ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ, ಸರಿಯಾದ ಬೆಲೆ ಸಿಗುತ್ತದೆಯೋ ಇಲ್ಲವೋ ಗೊತ್ತಿಲ್ಲ, ಆದರೂ ಬಿತ್ತನೆ ಮಾಡುತ್ತಾನೆ, ರೈತ ತನಗೋಸ್ಕರ ಬೆಳೆ ಬೆಳೆಯಲ್ಲ, ಮನುಷ್ಯರ ಒಳತಿಗಾಗಿ ಬೆಳೆಯುತ್ತಾನೆ. ಇಂತಹ ರೈತನ ಶ್ರಮ ಗುರುತಿಸುವ ಕೆಲಸವಾಗಬೇಕು ಎಂದರು.

ರೈತರ ಪರಿಸ್ಥಿತಿಯನ್ನ ಮನಗಂಡ ಪ್ರಧಾನಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಜಿ ಅವರು, ಪ್ರಧಾನಮಂತ್ರಿ ಧನ-ಧಾನ್ಯ ಕೃಷಿ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಇಳುವರಿ ಕಡಿಮೆ ಇರುವ ದೇಶದ 100 ಜಿಲ್ಲೆಗಳನ್ನು ಈ ಯೋಜನೆ ಆಯ್ಕೆ ಮಾಡಲಾಗಿದೆ. ಇದರಲ್ಲಿ ಕರ್ನಾಟಕ ರಾಜ್ಯದ ತುಮಕೂರು, ಚಿತ್ರದುರ್ಗ, ಕೊಪ್ಪಳ, ಚಿಕ್ಕಬಳ್ಳಾಪುರ, ಗದಗ ಹಾಗೂ ಹಾವೇರಿ ಜಿಲ್ಲೆ ಒಳಗೊಂಡ ಆರು ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಬರುವ ದಿನಗಳಲ್ಲಿ ಕೃಷಿ ಕ್ಷೇತ್ರಕ್ಕೆ ಅಧಿಕ ಸಾಲ ಕೊಡಿಸಲಾಗುವುದು. ರೈತರಿಗೆ ಕೃಷಿ ಸಾಲ ನೀಡುವಾಗ ಸಿಬಿಲ್ ಸ್ಕೋರ್ ಅವಶ್ಯಕತೆ ಇರುವುದಿಲ್ಲ. ಈ ಬಗ್ಗೆ ನಾನು ಆರ್.ಬಿ.ಐ. ಹಾಗೂ ಸಿಬಿಲ್ ಸಂಸ್ಥೆಯೊಂದಿಗೆ ಮಾತನಾಡಿದ್ದೇನೆ ಎಂದು ಹೇಳಿದರು.



ಈ ಮೊದಲು ಕೃಷಿಗೆ ಶೇ.14 ರಷ್ಟು ವೆಚ್ಚಮಾಡಲಾಗುತ್ತಿತ್ತು. ಈ ಯೋಜನೆಯಿಂದ ಶೇ.24 ರಷ್ಟು ವೆಚ್ಚಮಾಡಲಾಗುತ್ತದೆ. ಜಿಲ್ಲೆಯಲ್ಲಿ ಈ ಯೋಜನೆ ಅನುಷ್ಠಾನ ಸಮರ್ಪಕವಾಗಿ ಆಗಬೇಕು. ರೈತರಿಗೆ ಈ ಯೋಜನೆ ಮಾಹಿತಿ ಕುರಿತು ತರಬೇತಿ ಹಾಗೂ ರೈತರಿಂದ ಸಲಹೆ ಸೂಚನೆ ಪಡೆಯುವಂತೆ ಹಾಗೂ ಕೇಂದ್ರ ಹಾಗೂ ರಾಜ್ಯದ ಸರ್ಕಾರದ ಯೋಜನೆಗಳನ್ನು ಒಗ್ಗೂಡಿಸಿ ಸಮಗ್ರವಾಗಿ ಅನುಷ್ಠಾನಗೊಳಿಸಬೇಕು ಎಂದು ಕೃಷಿ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು. ದೇಶದಲ್ಲಿ 130 ರಿಂದ 140 ಕೋಟಿ ಜನಸಂಖ್ಯೆ ಇದೆ. ಬೇರೆ ದೇಶಗಳಿಗಿಂತ ನಮ್ಮ ದೇಶದಲ್ಲಿ ಹೆಚ್ಚಿನ ಸಂಖ್ಯೆ ಇದ್ದರೂ ಸಹ, ಆರ್ಥಿಕವಾಗಿ, ಸಾಮಾಜಿಕ ಹಾಗೂ ಕಾನೂನು ವ್ಯವಸ್ಥೆ ಸುಭದ್ರವಾಗಿದೆ. ರೈತನಿಗೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸುಭದ್ರತೆ ಕೊಡಬೇಕು. ಈ ನಿಟ್ಟಿನಲ್ಲಿ ನಾನು ಸಿ.ಎಂ.ಆಗಿದ್ದ ಸಮಯದಲ್ಲಿ ರೈತರ ಮಕ್ಕಳಿಗೆ ವಿದ್ಯಾರ್ಥಿ ವೇತನ ಯೋಜನೆ ಜಾರಿಗೆ ತಂದಿದ್ದೆ ಎಂದು ಹೇಳಿದರು. ರೈತರು ತುಂಗಾ ಮೇಲ್ದಂಡೆ ಯೋಜನೆಯ ಸಂಪೂರ್ಣ ಸದುಪಯೋಗ ಪಡೆದುಕೊಳ್ಳಬೇಕು. ತುಂಗಾ ಮೇಲ್ದಂಡೆ ಯೋಜನೆಯಿಂದ ಹಿರೇಕೆರೂರು, ರಾಣೇಬೆನ್ನೂರು ಹಾಗೂ ಬ್ಯಾಡಗಿ ಭಾಗದ ರೈತರಿಗೆ ಅನುಕೂಲವಾಗಲಿದೆ. ಬೆಡ್ತಿ-ವರದಾ ನದಿ ಜೋಡಣೆ ಅಗತ್ಯವಾಗಿದೆ. ಇದರಿಂದ ಉತ್ತರ ಕನ್ನಡ ಜಿಲ್ಲೆಗೆ ಏನು ತೊಂದರೆಯಾಗುವುದಿಲ್ಲ. ಬೆಡ್ತಿ ವರದಾ ನದಿ ಜೋಡಣೆಯಿಂದ ಹಾವೇರಿ, ಬ್ಯಾಡಗಿ, ಶಿಗ್ಗಾಂವ ಹಾಗೂ ಸವಣೂರ ತಾಲೂಕುಗಳ ರೈತರಿಗೆ ಅನುಕೂಲವಾಗಲಿದೆ ಎಂದರು. ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಸದಸ್ಯ ವೀರನಗೌಡ ಪೊಲೀಸಗೌಡ್ರ, ಗ್ರಾ.ಪಂ.ಅಧ್ಯಕ್ಷೆ ಗೀತಾ ಮಡಿವಾಳರ, ಮಾಜಿ ಶಾಸಕ ವಿರುಪಾಕ್ಷಪ್ಪ ಬಳ್ಳಾರಿ, ಜಂಟಿ ಕೃಷಿ ನಿರ್ದೇಶಕ ಡಾ.ಮಲ್ಲಿಕಾರ್ಜುನ, ಉಪ ನಿರ್ದೇಶಕ ಕರಿಯಲ್ಲಪ್ಪ, ಶಿವಕುಮಾರ, ಡಾ.ಬಸವರಾಜ ಕೆಲಗಾರ ಇತರರು ಉಪಸ್ಥಿತರಿದ್ದರು.


# 72 ಲಕ್ಷ ರೂ. ವೆಚ್ಚದಲ್ಲಿ ಬಸವೇಶ್ವರ ದೇವಸ್ಥಾನ ನಿರ್ಮಾಣ

**ಬೆಳಗಾವಿ:** ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ಒದಗಿಸಿರುವ 72 ಲಕ್ಷ ರೂ ಅನುದಾನ ಬಳಸಿ ಕರಡಿಗುದ್ದಿ ಗ್ರಾಮದಲ್ಲಿ ಬಸವೇಶ್ವರ ದೇವಸ್ಥಾನದ ನೂತನ ಕಟ್ಟಡ ನಿರ್ಮಾಣ ಮಾಡಲಾಗಿದ್ದು, ಭಾನುವಾರ ನೂತನ ಕಟ್ಟಡ ಲೋಕಾರ್ಪಣೆ ಹಾಗೂ ಕಳಸಾರೋಹಣ ಕಾರ್ಯಕ್ರಮ ನಡೆಯಿತು.

ಈ ವೇಳೆ ಮಾತನಾಡಿದ ಸಚಿವರು, ಅಧಿಕಾರ ಶಾಶ್ವತವಲ್ಲ, ಆದರೆ ಅಧಿಕಾರ ಇದ್ದಾಗ ಒಳ್ಳೆಯ ಕೆಲಸ ಮಾಡಬೇಕೆಂದು ಸಂಕಲ್ಪ ಮಾಡಿದ್ದೇನೆ. ಊರಿನ ಮಗಳಾಗಿ ಸೇವೆ ಮಾಡುವ ಅವಕಾಶ ಸಿಕ್ಕಿದೆ ಎಂದು ಹೇಳಿದರು.

ಗ್ರಾಮದಲ್ಲಿ ವಿಜೃಂಭಣೆಯಿಂದ ದೇವಸ್ಥಾನವನ್ನು ಉದ್ಘಾಟಿಸಲಾಗಿದೆ. ಊರಿನ ಸಂಭ್ರಮ, ಸಡಗರವನ್ನು ನೋಡಲು ಎರಡು ಕಣ್ಣು ಸಾಲದು. 72 ಲಕ್ಷ ರೂಪಾಯಿ ವೆಚ್ಚದಲ್ಲಿ ಬಸವೇಶ್ವರ ದೇವಸ್ಥಾನ ನಿರ್ಮಾಣ ಮಾಡಲಾಗಿದ್ದು, ಅಲಂಕಾರಿಕ ಶಿಲ್ಪಕಲೆಯೊಂದಿಗೆ ವಿನ್ಯಾಸಗೊಳಿಸಲಾದ ಈ ದೇವಸ್ಥಾನವು ಧಾರ್ಮಿಕ ನಂಬಿಕೆಗೆ ಮಾತ್ರವಲ್ಲ, ಸಾಂಸ್ಕೃತಿಕ ಸೌಂದರ್ಯಕ್ಕೂ ಮಾದರಿಯಾಗಿದೆ. ಭಕ್ತರ ಶ್ರದ್ಧೆ ಹಾಗೂ ದೇವರ ಆಶೀರ್ವಾದದಿಂದ ಈ ಪವಿತ್ರ ತಾಣ ಮುಂದಿನ ಪೀಳಿಗೆಗಳಿಗೆ ಪ್ರೇರಣೆಯಾಗಲಿ ಎಂದು ಆಶಿಸುತ್ತೇನೆ ಎಂದರು.

ಕರಡಿಗುದ್ದಿ ಗ್ರಾಮದಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದು, 1.25 ಕೋಟಿ ರೂಪಾಯಿ ವೆಚ್ಚದಲ್ಲಿ ಕಲ್ಯಾಣ ಮಂಟಪ ನಿರ್ಮಾಣ ಮಾಡಲಾಗುತ್ತಿದೆ. ಪಶು ಆಸ್ಪತ್ರೆ




ಮಾಡಲಾಗಿದೆ, 4 ಕೋಟಿ ವೆಚ್ಚದಲ್ಲಿ ಗ್ರಾಮದ ರಸ್ತೆಗಳ ಅಭಿವೃದ್ಧಿ ಮಾಡಲಾಗುವುದು. ಪ್ರತಿ ಗ್ರಾಮದಲ್ಲಿ 2–3 ದೇವಸ್ಥಾನ ನಿರ್ಮಾಣ ಮಾಡಲಾಗಿದೆ, ಅರಳಿಕಟ್ಟಿಯಲ್ಲಿ ಮಠ ಸೇರಿದಂತೆ 3 ದೇವಸ್ಥಾನ ನಿರ್ಮಾಣ ಮಾಡಲಾಗಿದೆ ಎಂದು ಹೇಳಿದರು.

ಅಧಿಕಾರ ಶಾಶ್ವತವಲ್ಲ, ಆದರೆ ಅಧಿಕಾರ ಇದ್ದಾಗ ಒಳ್ಳೆಯ ಕೆಲಸ ಮಾಡಬೇಕೆಂದು ಸಂಕಲ್ಪ ಮಾಡಿದ್ದೇನೆ. ನಿಮ್ಮೆಲ್ಲರ ಸಹಕಾರದಿಂದ ಶಾಸಕಿಯಾಗಿ, ಸಚಿವೆಯಾಗಿ ಕೆಲಸ ಮಾಡುತ್ತಿದ್ದೇನೆ. ಎಲ್ಲರೂ ಒಂದೇ ತಾಯಿಯ ಮಕ್ಕಳಂತೆ ಕೆಲಸ ಮಾಡೋಣ ಎಂದರು. ಸಚಿವರನ್ನೂ ಊರೊಳಗೆ ಭವ್ಯವಾದ ಮೆರವಣಿಗೆಯೊಂದಿಗೆ ಕರೆದೊಯ್ಯಲಾಯಿತು.

ಪ್ರತಿ ಮನೆ ಮುಂದೆ ರಂಗವಲ್ಲಿ ಹಾಕಿ, ಆರತಿ ಬೆಳಗಿ ಸ್ವಾಗತಿಸಲಾಯಿತು. ಕಾರ್ಯಕ್ರಮದಲ್ಲಿ ಅರಳಿಕಟ್ಟಿ ತೋಂಟದಾರ್ಯ ಮಠದ ಶ್ರೀ ಶಿವಮೂರ್ತಿ ಮಹಾಸ್ವಾಮಿಗಳು ಆಶೀರ್ವಚನ ನೀಡಿ, ಲಕ್ಷ್ಮೀ ಹೆಬ್ಬಾಳಕರ್ ಅವರಂತಹ ಜನಪ್ರತಿನಿಧಿ ಸಿಗುವುದು ಕಷ್ಟ. ಅವರು ಈಗ ಇಡೀ ರಾಜ್ಯದ ಮನೆ ಮಗಳಾಗಿದ್ದಾರೆ. 2028ರಲ್ಲಿ ಕರ್ನಾಟಕದ ಮೊದಲ ಮಹಿಳಾ ಮುಖ್ಯಮಂತ್ರಿ ಆಗಲಿ ಎಂದರು.

ಲಕ್ಷ್ಮೀ ಹೆಬ್ಬಾಳಕರ್ ಶಾಸಕರಾದ ನಂತರ ಕ್ಷೇತ್ರದ ದೇವರುಗಳಿಗೆ ನೆರಳು ಸಿಕ್ಕಿದೆ. ಸರ್ವ ಜಾತಿ, ಧರ್ಮಗಳ ಮಂದಿರಗಳನ್ನೂ ಅವರು ಜೀರ್ಣೋದ್ಧಾರ ಮಾಡಿದ್ದಾರೆ. ಎಲ್ಲರೂ ಅವರನ್ನು ಆಶೀರ್ವದಿಸಿ ಮುಖ್ಯಮಂತ್ರಿ ಆಗುವಂತೆ ಮಾಡಬೇಕು ಎಂದರು. ಶಂಕರಗೌಡ ಪಾಟೀಲ ಮಾತನಾಡಿ, ಮುಂದಿನ ದಿನಗಳಲ್ಲಿ ಪಕ್ಷ ಭೇದ ಮರೆತು ಲಕ್ಷ್ಮೀ ಹೆಬ್ಬಾಳಕರ್ ಅವರನ್ನು ಬೆಂಬಲಿಸಬೇಕು ಎಂದು ಕೋರಿದರು.

ಹಾಲಪ್ಪ ನೇಸರಗಿ, ಅಶೋಕ ಮೂಕನವರ, ಚನ್ನಬಸಪ್ಪ ರಾಚನ್ನವರ, ಗ್ರಾಮ ಪಂಚಾಯತಿ ಅಧ್ಯಕ್ಷರಾದ ಪಾರ್ವತಿ ಅರಬಳ್ಳಿ, ಮೋಹನ ಬಡಿಗೇರ್, ಗಿರಿಜಾ ಪಾಟೀಲ, ಸಂಜಯ್ ಚಾಟೆ, ಕಾಳಪ್ಪ ಗಾಡಿವಡ್ಡರ್, ಸುರೇಶ ಪಡಗಣ್ಣವರ್ ಮುಂತಾದವರು ಉಪಸ್ಥಿತರಿದ್ದರು.

# ನೇಕಾರರ ಹಕ್ಕೊತ್ತಾಯಕ್ಕೆ ಮುಖ್ಯಮಂತ್ರಿಗೆ ಮನವಿ

**ರಬಕವಿ–ಬನಹಟ್ಟಿ:** ಹಲವು ವರ್ಷಗಳಿಂದ ವೃತ್ತಿಪರ ನೇಕಾರರಿಗೆ ದೊರಕಬೇಕಾದ ಸೌಲಭ್ಯಗಳು ದೊರೆಯುತ್ತಿಲ್ಲವೆಂದು ಒತ್ತಾಯಿಸಿ ಸೋಮವಾರ ತಾಲೂಕಿನ ಬಂಡಿಗಣಿ ಗ್ರಾಮಕ್ಕೆ ಆಗಮಿಸಿದ್ದ ಸಿಎಂ ಸಿದ್ಧರಾಮಯ್ಯನವರಿಗೆ ರಾಜ್ಯ ನೇಕಾರ ಸೇವಾ ಸಂಘದಿಂದ ಮನವಿ ಅರ್ಪಿಸಲಾಯಿತು.

ಆರ್ಥಿಕ, ಔದ್ಯೋಗಿಕ ಹಾಗು ಸಾಮಾಜಿಕವಾಗಿ ಹಿಂದುಳಿದ ನೇಕಾರರ ಸಮುದಾಯಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸುವ ಮೂಲಕ ಜವಳಿ ಸಚಿವ ಹಾಗು ಆಯುಕ್ತರಿಗೆ ಆದೇಶಿಸಬೆಕೆಂದು ರಾಜ್ಯಾಧ್ಯಕ್ಷ ಶಿವಲಿಂಗ ಟಿರಕಿ ಮನವಿ ಮಾಡಿದರು. ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡ ಕುಟುಂಬಗಳಿಗೆ ಸೂಕ್ತ ಪರಿಹಾರ ಒದಗಿಲ್ಲ. ಸಂಘಟಿತ ಕಾರ್ಮಿಕರಂತೆ ಕಾರ್ಡ್‌ಗಳ ವಿತರಣೆಯಾಗಬೆಕು.

ನೇಕಾರರಿಗೆ ನಿವೇಶನಗಳನ್ನು ಹಂಚಿಕೆಯೊಂದಿಎ ಸಿಟಿಎಸ್ ಉತಾರೆ ಹಂಚಿಕೆಯಾಗಬೇಕು. 55 ವರ್ಷ ಮೇಲ್ಪಟ್ಟ ನೇಕಾರರಿಗೆ ಮಾಸಿಕ 5 ಸಾವಿರ ಪಿಂಚಣಿ, ನೇಕಾರ ಸಮ್ಮಾನ ಯೋಜನೆ ಹಣ ಬಿಡುಗಡೆಯಲ್ಲಿ ತಾರತಮ್ಯ ಹೋಗಲಾಡಿಸಿ ಎಲ್ಲರಿಗೂ ದೊರೆಯುವಂತಾಗಬೇಕು. ಪ್ರಸಕ್ತ ನೇಕಾರ ಸ್ಥಿತಿ ಚಿಂತಾಜನಕವಾಗಿದ್ದು, ಒಂದು ಬಾರಿ ನೇಕಾರರ ಸಾಲಮನ್ನಾ ಮಾಡಬೇಕೆಂದು ಸೇರಿದಂತೆ ವಿವಿಧ ಬೇಡಿಕೆಗಳ ಕುರಿತು ಹಕ್ಕೊತ್ತಾಯ ಮಾಡಿದರು.

ರಾಜೇಂದ್ರ ಮಿರ್ಜಿ, ಸದಾಶಿವ ಬರಗಿ, ಶಾಂತಾ ಸಂಗಪ್ಪ ಮುರಗೋಡ, ಶಿವಾನಂದ ಬಸಪ್ಪಗೋಳ, ಪ್ರಕಾಶ ರಾವಳ ಸೇರಿದಂತೆ ಅನೇಕರಿದ್ದರು.



# ಮಂಜುನಾಥರ ಸೃಜನಶೀಲತೆಯ ಅನುಕರಣೀಯ: ಡಾ. ಹುಲಕುಂದ

**ಬೈಲಹೊಂಗಲ:** ಕ್ರಿಯಾಶೀಲತೆ ಮತ್ತು ಸೃಜನಶೀಲತೆ ವ್ಯಕ್ತಿಯ ಸಾಧನೆಗೆ ಸಹಕಾರಿ ಎಂದು ಪಟ್ಟಣದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಚಾರ್ಯ ಡಾ. ರಾಘವೇಂದ್ರ ಹುಲಕುಂದ ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಚಕೋರ ವಿಚಾರ ಸಾಹಿತ್ಯ ವೇದಿಕೆಯ ಸಂಚಾಲಕರಾಗಿ ನೇಮಕಗೊಂಡ ಪ್ರೊ. ಮಂಜುನಾಥ ಎಂ. ಅವರಿಗೆ ಮಹಾವಿದ್ಯಾಲಯದಲ್ಲಿ ಬೆಂಗಳೂರಿನ ಕೇಂದ್ರ ಬಸವ ಸಮಿತಿ ವತಿಯಿಂದ ಹಮ್ಮಿಕೊಂಡ ಅಭಿನಂದನಾ ಸಮಾರಂಭದಲ್ಲಿ ಸನ್ಮಾನಿಸಿ ಅವರು ಮಾತನಾಡಿದರು. ಸಾಹಿತ್ಯ, ಕಲೆಯಲ್ಲಿ ಅಪಾರ ಆಸಕ್ತಿ ಹೊಂದಿದ ಮಂಜುನಾಥ ಅವರಿಗೆ ಅಕಾಡೆಮಿಯ ಹುದ್ದೆ ಲಭಿಸಿರುವುದು ನಮ್ಮ ಮಹಾವಿದ್ಯಾಲದ ಹೆಮ್ಮೆ ಎಂದು ಅವರು ಪ್ರಶಂಸೆ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಬೈಲಹೊಂಗಲ ತಾಲೂಕಾಧ್ಯಕ್ಷರಾದ ಎನ್.ಆರ್.ಠಕ್ಕಾಯಿ ಮಾತನಾಡಿ ಕನ್ನಡ ಸಾಹಿತ್ಯ, ಸಂಸ್ಕೃತಿ, ಇತಿಹಾಸದ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿಕೊಂಡು ಮಂಜುನಾಥ ಅವರು ಅನೇಕ ರಾಷ್ಟ್ರೀಯ ವಿಚಾರ ಸಂಕಿರಣ, ಗೋಷ್ಠಿ, ಕಾರ್ಯಾಗಾರ ಹಾಗೂ ಸಮ್ಮೇಳನಗಳಲ್ಲಿ ಭಾಗಿಯಾಗಿ ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಿದ್ದಾರೆ ಎಂದರು. ಬೆಳಗಾವಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಮೋಹನ ಬಸನಗೌಡ ಪಾಟೀಲ ಮಾತನಾಡಿ ಮಂಜುನಾಥ ಅವರ ವ್ಯಕ್ತಿತ್ವ ಮತ್ತು ಪ್ರತಿಭೆಗೆ ತಕ್ಕ ಗೌರವ ಸನ್ಮಾನಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ದೊರಕುವಂತಾಗಲಿ ಎಂದು ಹಾರೈಸಿದರು. ಸರಳ ಸಜ್ಜನಿಕೆಯ ಗುಣ ಹೊಂದಿದ ಅವರು ಪ್ರಯತ್ನವಾದಿಗಳು ಎಂದು ಅಭಿಪ್ರಾಯಪಟ್ಟರು.



ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಮಾರುತಿಗೌಡ ಹಿತಾರಗೌಡರ ಅವರು ಮಾತನಾಡಿ ಚಕೋರ ವಿಚಾರ ಸಾಹಿತ್ಯ ವೇದಿಕೆಯ ಸಂಚಾಲಕರಾಗಿ ನೇಮಕಗೊಂಡಿರುವುದು ಕನ್ನಡ ವಿಭಾಗದ ಗೌರವದ ಗರಿಮೆಯನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ಹೇಳಿದರು.

ಹಿರಿಯ ಪತ್ರಕರ್ತ ಮಹಾಂತೇಶ ರಾಜಗೋಳಿ ಮಾತನಾಡಿ, ಮಂಜುನಾಥ ಅವರ ಜ್ಞಾನ ಸಂಪತ್ತನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಲಿ ಮತ್ತು ಅವರ ಸೇವೆ ಬೈಲಹೊಂಗಲ ನಾಡಿಗೂ ಲಭಿಸುವಂತಾಗಲಿ ಎಂದು ಅವರು ಅಭಿಪ್ರಾಯಪಟ್ಟರು. ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಪ್ರೊ.ಮಂಜುನಾಥ ಸನ್ಮಾನ ಸ್ವೀಕರಿಸಿ ಮಾತನಾಡಿ ಅಕಾಡೆಮಿ ನಂಬಿಕೆಯಿಟ್ಟು ವಹಿಸಿದ ಜವಾಬ್ದಾರಿಯನ್ನು ಅತ್ಯಂತ ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ನಿಭಾಯಿಸುವುದಾಗಿ ಭರವಸೆ ನೀಡಿದರು. ಪ್ರೀತಿಯಿಂದ ಗೌರವಿಸಿದ ಎಲ್ಲರಿಗೂ ಅವರು ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕರಾದ ಮಹಾಂತೇಶ ಬಡಿಗೇರ, ಗಿರೆಪ್ಪ ಕಸಾಳೆ, ಸವಿತಾ ಪಾಟೀಲ, ಡಾ. ಭಾರತಿ ತೆಗ್ಯಾಳ, ಪಾರವ್ವ ಕರಡಿಗುದ್ದಿ, ಡಾ. ವಿಜಯಲಕ್ಷ್ಮೀ ಡೊಂಬರ, ಡಾ. ಮುದ್ದನಗೌಡ ಪಾಟೀಲ, ಮಲ್ಲಿಕಾರ್ಜುನ ದಾಸೋಗ ಹಾಗೂ ಬೆಳವಡಿಯ ವಿದ್ಯಾರ್ಥಿ ಮುಖಂಡ ಶಿವಾನಂದ ಸಂಭೋಜಿ ಉಪಸ್ಥಿತರಿದ್ದರು.

# ರೈತ ಕ್ಷೇತ್ರ ಪಾಠಶಾಲೆ ಕಾರ್ಯಕ್ರಮ

**ಮೂಡಲಗಿ:** ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಆಶ್ರಯದಲ್ಲಿ ರಾಜಾಪುರ ವಲಯದ ಗಣೇಶವಾಡಿ ಕಾರ್ಯಕ್ಷೇತ್ರದಲ್ಲಿ ನರ್ಸರಿ ರಚನೆ ಬಗ್ಗೆ ರೈತ ಕ್ಷೇತ್ರ ಪಾಠಶಾಲೆ ಕಾರ್ಯಕ್ರಮ ಜರುಗಿತು,

ಬರ್ಡ್ಸ್ ಕೃಷಿ ವಿಜ್ಞಾನ ಕೇಂದ್ರದ ಸಂಪನ್ಮೂಲ ವ್ಯಕ್ತಿ ತೋಟಗಾರಿಕೆ ವಿಜ್ಞಾನಿ ಪರಶುರಾಮ್ ಪಾಟೀಲ ಮಾತನಾಡಿ, ನರ್ಸರಿ ರಚನೆ ಬಗ್ಗೆ, ಪಾಲಿ ಹೌಸ್ ಬಗ್ಗೆ, ಹಸಿರು ಮನೆ ರಚನೆ ಬಗ್ಗೆ, ಕಬ್ಬಿನಲ್ಲಿ ಅಂತರ ಬೆಳೆಯಾಗಿ ತರಕಾರಿ ಬೆಳೆಯುವ ಬಗ್ಗೆ,ಎರೆಹುಳ ಗೊಬ್ಬರ ಬಗ್ಗೆ ಮಾಹಿತಿ ನೀಡಿದರು,ಕೃಷಿ ಮೇಲ್ವಿಚಾರಕ ಮೈಲಾರೆಪ್ಪ ಪೈಲಿ ಪ್ರಸ್ತಾವಿಕವಾಗಿ ಮಾತನಾಡಿ, ಯೋಜನೆ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ಸ್ವ ಸಹಾಯ, ಸಂಘದ ಸದಸ್ಯರು ರೈತರಾದ ಮಾರುತಿ ಜಾಧವ, ದುಂಡಪ್ಪ ಮುಲಿಮನಿ ಭಾಗವಹಿಸಿದರು, ಸೇವಾ ಪ್ರತಿನಿಧಿಯಾದ ಮಹಾದೇವಿ ಪಾಟೀಲ ಕಾರ್ಯಕ್ರಮ ನಿರೂಪಿಸಿದರು, ಮೈಲಾರಪ್ಪ ಪೈಲಿ ಸ್ವಾಗತಿಸಿದರು ಆನಂದ್ ಮಂಟೂರ ವಂದಿಸಿದರು.



# ಪತ್ನಿ ಕೊಲೆ: ವ್ಯಕ್ತಿಗೆ ಜೀವಾವದಿ ಶಿಕ್ಷೆ

**ಬೆಳಗಾವಿ:** ಪತ್ನಿಯನ್ನು ಕೊಲೆಗೈದ ಪತಿಗೆ ಬೆಳಗಾವಿಯ 5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಸೋಮವಾರ ಕಠಿಣ ಜೀವಾವಧಿ ಶಿಕ್ಷೆ ಮತ್ತು ರೂ.50 ಸಾವಿರ ದಂಡ ವಿಧಿಸಿ ಮಹತ್ವದ ತೀರ್ಪು ನೀಡಿದೆ.

ಮೂಲತಃ ವಿಜಯಪುರ ಜಿಲ್ಲೆ ತಾಳಿಕೋಟೆಯ ಪರಶುರಾಮ ಗಣಪತಿ ಪೀಸೆ(40)ಶಿಕ್ಷೆಗೊಳಗಾದ ಆರೋಪಿ.2020 ರ ಫೆಬ್ರವರಿ 13 ರಂದು ಮಧ್ಯಾಹ್ನ 1 ರಿಂದ 1.30 ರ ಸುಮಾರಿಗೆ ಈತ ತನ್ನ ಪತ್ನಿ ಕವಿತಾ ಅವರೊಂದಿಗೆ ತನ್ನ ಸಣ್ಣ ಮಕ್ಕಳನ್ನು ಎತ್ತಿಕೊಳ್ಳುವ ವಿಚಾರದಲ್ಲಿ ತಂಟೆ ತೆಗೆದು ಅದೇ ಸಿಟ್ಟಿನಿಂದ ಅವರ ಕುತ್ತಿಗೆ ಹಿಚುಕಿ ಉಸಿರುಗಟ್ಟಿಸಿ ಕೊಲೆಗೈದಿದ್ದ. ಈ ಬಗ್ಗೆ ಕವಿತಾ ಅವರ ತಂದೆ ಕಲಬುರ್ಗಿಯ ಸುನಿಲ್ ಕುಮಾರ್ ಬೆಳಗಾವಿ ಕ್ಯಾಂಪ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದರು. ಈ ಪ್ರಕರಣದ ತನಿಖೆ ನಡೆಸಿದ ಅಂದಿನ ಕ್ಯಾಂಪ್ ಪೊಲೀಸ್ ಠಾಣೆಯ ಪಿ ಐ ಡಿ.ಸಂತೋಷ ಕುಮಾರ್ ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

# ನಾಳೆ ಭೂಮಿ, ವಸತಿ ಹಕ್ಕು ವಂಚಿತರ ಸಭೆ

**ರಬಕವಿ–ಬನಹಟ್ಟಿ:** ಇದೇ 15 ರಂದು ಬೆಳಗ್ಗೆ 11 ಕ್ಕೆ ಬನಹಟ್ಟಿ ನಗರದ ಬಂಗಾರೆವ್ವ ತಟ್ಟಿಮನಿ ಸಮುದಾಯ ಭವನದಲ್ಲಿ ಸರ್ಕಾರದ ಭೂಮಿಯಲ್ಲಿ ಸರ್ಕಾರದ ಆಧೀನದಲ್ಲಿರುವ ಫಾರ್ಮ ನಂ.50, 53, 57 ರಲ್ಲಿ ಅರ್ಜಿ ಸಲ್ಲಿಸಿ ಸಾಗುವಳಿ ಮಾಡುತ್ತಿರುವ ಮತ್ತು 94ಸಿ ಮತ್ತು 94 ಸಿಸಿ ಅಡಿಯಲ್ಲಿ ಅರ್ಜಿ ಸಲ್ಲಿಸಿ ವಾಸ ಮಾಡುತ್ತಿರುವ ಭೂ ರಹಿತ ಮತ್ತು ವಸತಿ ರಹಿತರ ಸಭೆಯನ್ನು ಕರೆಯಲಾಗಿದೆ.

ಸಂಬಂಧಪಟ್ಟವರು ಈಗಾಗಲೇ ಸಲ್ಲಿಸಿದ ಅರ್ಜಿಗಳ ನಕಲು ಪ್ರತಿಗಳನ್ನು ತೆಗೆದುಕೊಂಡು ಬರಬೇಕು. ಸಭೆಯಲ್ಲಿ ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿಯ ರಾಜ್ಯ ಘಟಕದ ಪದಾಧಿಕಾರಿಗಳು ಆಗಮಿಸಲಿದ್ದಾರೆ ಎಂದು ಸ್ಥಳೀಯ ಜೋಡಿಣಿದಾರರ ನೇಕಾರ ಕಾರ್ಮಿಕ ಸಂಘದ ಸದಸ್ಯ ಬಸವರಾಜ ಮುರಗೋಡ ತಿಳಿಸಿದರು.

# ನೆನಪಿನ ಸ್ನೇಹ ಸಮ್ಮಿಲನ, ಅಕ್ಷರ ಋಣಕ್ಕೆ ಗುರುವಂದನೆ

## ಎಸ್‌ಸಿಪಿ ಶಾಲೆಯಲ್ಲಿ 22 ವರ್ಷಗಳ ನಂತರ ನೆನಪಿನ ಬುತ್ತಿ ಬಿಚ್ಚಿದ ಶಿಷ್ಯರು: ಭಾವುಕರಾದ ಶಿಕ್ಷಕ ವೃಂದ

ವರದಿ: ಶಿವಲಿಂಗ ಸಿದ್ನಾಳ

**ಮಹಾಲಿಂಗಪುರ:** ಬಾಲ್ಯದ ವಯಸು ಬಲು ಸೊಗಸು, ವಿದ್ಯಾರ್ಥಿ ಜೀವನ ಬಂಗಾರದಂತೆ ಪಾವನ, ಕಲಿಕೆಯ ಕಾಲವೇ ಕಲರವ, ಸವಿಸವಿ ನೆನಪುಗಳೇ ಕಚಗುಳಿ, ಮರೆಯದ ಮಾಣಿಕ್ಯದಂಥ ಆ ಹೊತ್ತನ್ನು ಮೆಲುಕು ಹಾಕುವ ಸಲುವಾಗಿ, ಅಕ್ಷರ ಜ್ಞಾನದ ತುತ್ತು ಉಣಬಡಿಸಿದ ಗುರುಗಳ ಋಣ ಸಂದಾಯಕ್ಕೆ ನೆನಪಿನ ಬುತ್ತಿ ಬಿಚ್ಚುವ ಮೂಲಕ ಹಳೇ ವಿದ್ಯಾರ್ಥಿಗಳು 22 ವರ್ಷಗಳ ನಂತರ ಮತ್ತೆ ಒಂದಾಗಿ ಸವಿಸವಿ ನೆನಪಿನ ಸ್ನೇಹ ಸಮ್ಮಿಲನ ಮತ್ತು ಗುರುವಂದನ ಕಾರ್ಯಕ್ರಮ ಹಮ್ಮಿಕೊಂಡು ಇಡೀ ದಿನ ಮತ್ತೆ ಮಕ್ಕಳಾದರು.

ಸ್ಥಳೀಯ ಕೆಎಲ್‌ಇ ಸಂಸ್ಥೆಯ ಎಸ್‌ಸಿಪಿ ಪ್ರೌಢಶಾಲೆಯಲ್ಲಿ 2003ರಲ್ಲಿ 10ನೇ ತರಗತಿ ಕಲಿತ ಹಳೆ ವಿದ್ಯಾರ್ಥಿಗಳು ಇತ್ತೀಚೆಗೆ ಸ್ನೇಹ ಸಮ್ಮಿಲನದೊಂದಿಗೆ ಗುರುವಂದನಾ ಕಾರ್ಯಕ್ರಮ ಹಮ್ಮಿಕೊಂಡರು. ರಾಜ್ಯ–ಹೊರರಾಜ್ಯ, ದೇಶ–ವಿದೇಶಗಳಲ್ಲಿ ನೆಲೆಸಿದ ಹಳೇ ವಿದ್ಯಾರ್ಥಿಗಳು ಮತ್ತೆ ಒಂದಾಗಿ ವೈಭವದಿಂದ ಸಂಭ್ರಮಿಸಿದರು.

ಸಾಮೂಹಿಕವಾಗಿ ಕಲಿತು, ಸಾಮಾಜಿಕವಾಗಿ ಬಲಿತು ಒಂದೊಂದು ಕ್ಷೇತ್ರದಲ್ಲಿ ಸಾಧನೆ ಮಾಡಿ ಉತ್ತುಂಗದಲ್ಲಿದ್ದರೂ ಯಾವುದೇ ಹಮ್ಮು–ಬಿಮ್ಮು, ಗತ್ತು–ಗೈರತ್ತು ಇಲ್ಲದೇ ಗುರುಗಳ ಮುಂದೆ ಗೌಣವಾಗಿ ಮಾಸ್ತರ್ ಮುಂದೆ ಮೌನವಾಗಿ, ಗುರುಗಳ ಮುಂದೆ ಮತ್ತೆ ಮಕ್ಕಳಾದರು. ಗುರುವೃಂದಕ್ಕೆ ಪುಷ್ಪವೃಷ್ಟಿ ಮಾಡಿ ಗೌರವಿಸಿದರು. ಗುರುಗಳ ಪದತಲದಲ್ಲಿ ಕುಳಿತು ಭಾವಚಿತ್ರ ತೆಗೆಸಿಕೊಂಡರು. ಅಂದು ಆಟೋಟಗಳೊಂದಿಗೆ ಕಲಿತವರು ತಮಗಿಂತ ಎತ್ತರ ಬೆಳೆದು ಇಂದು ಕಣ್ಮುಂದೆ ಬಂದಾಗ ಗುರುಗಳು ಭಾವುಕರಾದರು.



### ಭಾವುಕರಾದ ಶಿಕ್ಷಕ ವೃಂದ

ಕಲಿತ ಮೇಲೆ ಶಾಲೆಯ ಹಂಗ್ಯಾಕೆ? ಬಲಿತ ಮೇಲೆ ಗುರುವಿನ ಗುಂಗ್ಯಾಕೆ? ಎಂಬ ನಿಂದನೆಗಳೇ ತುಂಬಿರುವ ಇಂದಿನ ದಿನಗಳಲ್ಲಿ ಗುರುವಂದನೆ ಮಾಡಿ ಗುರುಭಕ್ತಿ ಮೆರೆದ, ಸಮಯವೇ ಇಲ್ಲದಷ್ಟು ಬ್ಯುಜಿಯಾಗಿರುವ ಸಂದಿಗ್ಧತೆಯಲ್ಲಿ ಸಹಪಾಠಿಗಳ ಸಮ್ಮಿಲನ ಮಾಡಿ ಸೌಜನ್ಯ ತೋರಿದ ಹಾಗೂ ಅಂದಿನ ಸಾವಿರದ ಸವಿನೆನಪುಗಳನ್ನು ಮೆಲುಕು ಹಾಕಿ ಪುಳಕಿತರಾದ ಶಿಷ್ಯರ ಭಕ್ತಿ ಕಂಡ ಗುರುಗಳು ಭಾವುಕರಾದರು. 2 ದಶಕದ ನಂತರವೂ ಹುಡುಕಿ ಕರೆತಂದು ಗೌರವಿಸಿ, ಸನ್ಮಾನಿಸಿದ ವಿದ್ಯಾರ್ಥಿಗಳ ವಿಧೇಯತೆ ಕಂಡ ಶಿಕ್ಷಕರು ಆನಂದ ಭಾಷ್ಪ ಸುರಿಸಿದರು.

ಇದಕ್ಕೂ ಮುನ್ನ ವಿದ್ಯಾರ್ಥಿಗಳು ಶಾಲೆಯಲ್ಲಿ ಬೆಂಚ್ ಮೇಲೆ ಕುಳಿತು ಗುರುಗಳ ಪಾಠ ಕೇಳಿದರು. ನಂತರ ಎಲ್ಲ ಗುರುವರ್ಯರನ್ನು ಮುಧೋಳ–ನಿಪ್ಪಾಣಿ ಹೆದ್ದಾರಿಯಿಂದ ವಾಸವಿ ವೇದಿಕೆವರೆಗೆ ಕರಡಿಮಜಲು ವಾದ್ಯ ಮೇಳದೊಂದಿಗೆ ಮೆರವಣಿಗೆ ಮಾಡಿದರು. ಪುಷ್ಪವೃಷ್ಟಿ ಮಾಡುವ ಮೂಲಕ ಕೈಮುಗಿದು ಸ್ವಾಗತ ಕೋರಿದರು.

ಅಗಲಿದ ಗುರುಗಳು ಮತ್ತು ಸಹಪಾಠಿಗಳಿಗೆ ಮೌನ ಶ್ರದ್ಧಾಂಜಲಿ ಸಲ್ಲಿಸಿ ಕಾರ್ಯಕ್ರಮ ಆರಂಭಿಸಿದರು. ನಂತರ ಹಳೆ ವಿದ್ಯಾರ್ಥಿಗಳು ತಮ್ಮ ಪ್ರಸ್ತುತ ಜೀವನದ ಜಂಜಡಗಳನ್ನು ಮರೆತು ಇಡೀ ದಿನ ಮಕ್ಕಳಂತೆ ಮೈಮರೆತು ಸಹಪಾಠಿಗಳೊಂದಿಗೆ ಹಾಗೂ ಗುರುಗಳೊಂದಿಗೆ ಬೆರೆತು ನೆನಪುಗಳನ್ನು ಮೆಲಕು ಹಾಕಿದರು. ಕಲಿಕೆಯ ಅವಧಿಯಲ್ಲಿನ ತಮ್ಮ ದೌರ್ಬಲ್ಯ–ಪ್ರಾಬಲ್ಯ, ತಪ್ಪು–ಒಪ್ಪು, ಕೀಟಲೆ–ದಾಂಧಲೆ, ಮೋಜು–ಮಸ್ತಿ, ಅನುಭವ–ಅವಾಂತರಗಳ ಬಗ್ಗೆ ಗುರು–ಶಿಷ್ಯರು ಮೆಲುಕು ಹಾಕಿದರು. ಸಹಪಾಠಿಗಳೆಲ್ಲಾ ವಂತಿಕೆ ಸೇರಿಸಿ ಅಸಹಾಯಕ ಗುರುಗಳಿಗೆ ಹಾಗೂ ಸಹಪಾಠಿಗಳಿಗೆ ಸಹಾಯ ಮಾಡುವ ವಾಗ್ದಾನ ಮಾಡಿದರು. ಗುರು ಶಿಷ್ಯರು ಸಾಮೂಹಿಕವಾಗಿ ಜವಾರಿ ಭೋಜನ ಸವಿದರು. ಕೊನೆಗೆ ರಾಷ್ಟ್ರಗೀತೆ ಹಾಡುವ ಮೂಲಕ ಕಾರ್ಯಕ್ರಮ ಮುಗಿಸಿದರು.

# ಮಹರ್ಷಿ ವಾಲ್ಮೀಕಿ ಜಯಂತೋತ್ಸವ ಕಾರ್ಯಕ್ರಮ

**ರಾಮದುರ್ಗ:** ಮಹಾತ್ಮರ ಹಾಗೂ ಸಾಧು ಸಂತರ ಜಯಂತಿಗಳನ್ನು ಸರಕಾರದಿಂದಲೇ ಆಚರಿಸುವ ಮೂಲಕ ಅವರ ಆದರ್ಶಗಳು ಜನಸಾಮಾನ್ಯರಿಗೆ ತಲುಪಿಸುವ ಕೆಲಸ ಮಾಡಲಾಗುತ್ತಿದೆ ಎಂದು ತಹಶೀಲ್ದಾರ ಪ್ರಕಾಶ ಹೊಳೆಪ್ಪಗೋಳ ಹೇಳಿದರು.


ಪಟ್ಟಣದ ಗುರು ಭವನದಲ್ಲಿ ತಾಲೂಕಾ ಆಡಳಿತ ಹಾಗೂ ವಾಲ್ಮೀಕಿ ಸಮಾಜದಿಂದ ಹಮ್ಮಿಕೊಂಡ ಶ್ರೀ ಮಹರ್ಷಿ ವಾಲ್ಮೀಕಿ ಜಯಂತೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸರಕಾರ ಸಮುದಾಯಕ್ಕಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತರುವ ಮೂಲಕ ಸಾಕಷ್ಟು ಅನುಕೂಲತೆ ಕಲ್ಪಿಸುತ್ತಿವೆ. ಕಾರಣ ತಮ್ಮ ಮಕ್ಕಳಿಗೆ ಸರಕಾರದ ಸೌಲಭ್ಯಗಳನ್ನು ಪಡೆದುಕೊಂಡು ಗುಣಮಟ್ಟದ ಶಿಕ್ಷಣ ಕೊಡಿಸುವ ಮೂಲಕ ಉನ್ನತ ಸ್ಥಾನಗಳನ್ನು ಪಡೆಯುವಲ್ಲಿ ಮುಂದಾಗಬೇಕು. ಜೊತೆಗೆ ಸಮುದಾಯಲ್ಲಿ ಜ್ಞಾನವಂತರು ಸರಕಾರದ ಸೌಲಭ್ಯಗಳನ್ನು ಜನರಿಗೆ ತಿಳಿಸುವ ಕೆಲಸವನ್ನು ಮಾಡಬೇಕು. ಅಂದಾಗ ಮಾತ್ರ ಸಮಾಜದಲ್ಲಿ ಎಲ್ಲರು ಆರ್ಥಿಕವಾಗಿ ಸದೃಡರಾಗಲು ಸಾಧ್ಯ ಎಂದು ಹೇಳಿದರು.

ಶಿಕ್ಷಕ ಎಸ್.ಎಂ.ದಿವಟಗಿ ಅವರು ಮಾತನಾಡಿ, ರಾಮಾಯಣ ಗ್ರಂಥ ಬರೆದ ಮಹರ್ಷಿ ವಾಲ್ಮೀಕಿಯವರ ಆದರ್ಶಗಳ ನಮಗೆಲ್ಲಾ ಮಾದರಿ. ಜೀವನದಲ್ಲಿ ಏನನ್ನು ಸಾಧಿಸಲು ಆಗದು ಎಂಬುವರಿಗೆ ಸಾಧ್ಯ ಎಂಬುವದನ್ನು ರಾಮಾಯಣ ಗ್ರಂಥ ರಚಿಸುವ ಮೂಲಕ ತೋರಿಸಿದ್ದಾರೆ. ಇಂದಿನ ಯುವಕರು ಅವರ ಆದರ್ಶಗಳನ್ನು ಅಳವಡಿಸಿಕೊಂಡು ಉತ್ತಮ ನಾಗರಿಕರಾಗಿ ಹೊರಹೊಮ್ಮಬೇಕು ಎಂದು ಹೇಳಿದರು.

ವಾಲ್ಮೀಕಿ ಸಮಾಜದ ತಾಲೂಕು ಅಧ್ಯಕ್ಷ ಪ್ರಕಾಶ ತಳವಾರ ಸಮಾಜ ಸಂಘಟನೆ ಬಗ್ಗೆ ಮಾತನಾಡಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಆರ್. ಕಾಂಬಳೆ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಹನಮಂತ ವಕ್ಕುಂದ, ಬಿ.ಸಿ.ಎಂ. ಅಧಿಕಾರಿ ವಿಜಯಕುಮಾರ, ಸಮಾಜದ ಮುಖಂಡರಾದ ಲಕ್ಷ್ಮೀನಾಯಣಸ್ವಾಮಿ ಇನಾಮದಾರ, ಬಸವರಾಜ ಪೂಜೇರ, ಮಂಜುನಾಥ ಹನಸಿ, ಕಾಳಪ್ಪ ಹೂವನ್ನವರ, ಭೀಮಪ್ಪ ಬಸಿಡೋಣಿ, ಮಾರಿತು ಪೂಜಾರ, ರಂಗಪ್ಪ ತಳವಾರ, ಅನಂತ ಜೋಶಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಪೂರ್ವದಲ್ಲಿ ವಾಲ್ಮೀಕಿ ಅವರ ಭಾವಚಿತ್ರದ ಮೆರೆವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸಭಾವೇದಿಕೆಯಲ್ಲಿ ಸಮಾವೇಶಗೊಂಡಿತು. ಪೂರ್ಣಕುಂಭ ಹಾಗೂ ಮಂಗಲ ವಾದ್ಯಮೇಳಗಳು ಮೆರವಣಿಗೆ ಕಳೆಯನ್ನು ಹೆಚ್ಚಿಸಿದರು.






# ವಾಲಿಬಾಲ್ ಪಂದ್ಯಾವಳಿ: ರಾಜ್ಯಮಟ್ಟಕ್ಕೆ ಆಯ್ಕೆ

**ಮಹಾಲಿಂಗಪುರ:** ಸಮೀಪದ ಸಂಗಾನಟ್ಟಿ ಗ್ರಾಮದ ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿಯರು ಗದಗ ಜಿಲ್ಲೆಯ ನೆಹರು ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ವಿಭಾಗ ಮಟ್ಟದ ಬಾಲಕಿಯರ ಪ್ರೌಢಶಾಲಾ ವಿಭಾಗದ ವಾಲಿಬಾಲ್ ಪಂದ್ಯದಲ್ಲಿ ಬಾಗಲಕೋಟೆ ಜಿಲ್ಲೆ ಪ್ರತಿನಿಧಿಸಿ ವಿಭಾಗ ಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ರಾಜ್ಯಮಟ್ಟಕ್ಕೆ ಆಯ್ಕೆಯಾದ ರಮ್ಯಾ ಪೂಜೇರಿ, ರೀತು ಮಾಲಬಸರಿ, ಯಲ್ಲವ್ವ ಗಾಡಿಕಾರ, ಅಮೃತಾ ಮಾದರ, ಸೃಷ್ಟಿ ಉಪ್ಪಾರಟ್ಟಿ ತರೀಕೆರೆಯಲ್ಲಿ ನಡೆಯಲಿರುವ ರಾಜ್ಯ ಮಟ್ಟದ ವಾಲಿಬಾಲ್ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ. ದೈಹಿಕ ಶಿಕ್ಷಕ ಬಿ. ಎಂ. ಗಿಂಡೆ, ಎಸ್. ಐ. ರೋಣದ ಲಕ್ಷ್ಮಣ ಗಾಡಿಕಾರ ಮಾರ್ಗದರ್ಶನ ಮಾಡಿದ್ದರು ಎಂದು ಮುಖ್ಯ ಶಿಕ್ಷಕ ಎಸ್. ಬಿ. ಮಲಾಬಾದಿ ತಿಳಿಸಿದ್ದಾರೆ.

# ನಿರಾಶ್ರಿತ ಫಲಾನುಭವಿ ಲಕ್ಕಮ್ಮಗೆ ನೂತನ ಮನೆ ಹಸ್ತಾಂತರ

**ರಾಮದುರ್ಗ:** ನಿರ್ಗತಿಕ ಕುಟುಂಬಗಳಿಗೆ ನೆಲೆ ಒದಗಿಸುವ ಉದ್ದೇಶದಿಂದ ಧರ್ಮಸ್ಥಳ ಸಂಸ್ಥೆ ವಾತ್ಸಲ್ಯ ಯೋಜನೆ ಅನುಷ್ಠಾನಗೊಳಿಸಿ ಮನೆ ಕಟ್ಟಿಕೊಡುವ ಕೆಲಸ ಮಾಡುತ್ತಿದೆ ಎಂದು ಸಂಸ್ಥೆಯ ಜಿಲ್ಲಾ ನಿರ್ದೇಶಕ ಎಚ್.ಆರ್. ಲವಕುಮಾರ್ ಹೇಳಿದರು.

ತಾಲೂಕಿನ ಬನ್ನೂರ ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು ಜ್ಞಾನ ವಿಕಾಸ ಕಾರ್ಯಕ್ರಮದ ವಾತ್ಸಲ್ಯ ಅಡಿಯಲ್ಲಿ ನಿರ್ಮಿಸಿದ ನೂತನ ಮನೆಯನ್ನು ನಿರಾಶ್ರಿತ ಫಲಾನುಭವಿ ಲಕ್ಕಮ್ಮ ಅವರಿಗೆ ಹಸ್ತಾಂತರಿಸಿ ಅವರು ಮಾತನಾಡಿದರು.

ಯೋಜನೆಯಿಂದ ಫಲಾನುಭವಿಗಳು ಸುರಕ್ಷಿತ ಹಾಗೂ ಆರಾಮದಾಯಕ ವಾಸಸ್ಥಾನ ಪಡೆದುಕೊಳ್ಳುವರು. ಸಮಾಜದ ಎಲ್ಲ ಜನರ ಸಹಕಾರದಿಂದ ವಾತ್ಸಲ್ಯ ಯೋಜನೆ ಮುನ್ನುಗ್ಗುತ್ತಿದ್ದು, ರಾಜ್ಯದಲ್ಲಿ ಈ ವರೆಗೆ ಸಂಸ್ಥೆಯಿಂದ ಸುಮಾರು 666 ಮನೆಗಳನ್ನು ನಿರ್ಮಿಸಲಾಗಿದೆ ಎಂದು ಅವರು ತಿಳಿಸಿದರು.



ಧಾರವಾಡ ಪ್ರಾದೇಶಿಕ ವ್ಯಾಪ್ತಿಯ ಜ್ಞಾನ ವಿಕಾಸ ವಿಭಾಗದ ಯೋಜನಾಧಿಕಾರಿ ಸುಧಾ ಮಾತನಾಡಿ, ಅಸಹಾಯಕ ನಿರ್ಗತಿಕರನ್ನು ಗುರುತಿಸಿ ಪ್ರತಿ ತಾಲೂಕಿನಲ್ಲಿ ಅಗತ್ಯಕ್ಕೆ ಅನುಸಾರ ಮನೆಗಳನ್ನು ನಿರ್ಮಿಸಲಾಗುತ್ತಿದೆ.

ಜೊತೆಗೆ ಅರ್ಹರಿಗೆ ಮಾಶಾಸನ, ಮೂಲ ಸೌಕರ್ಯ ಸೇರಿದಂತೆ ಎಲ್ಲ ಬಗೆಯ ಸೌಲಭ್ಯಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ. ಸರ್ವ ಫಲಾನುಭವಿಗಳು ಸಂಸ್ಥೆಯ ಯೋಜನೆಗಳನ್ನು ಸದ್ಬಳಿಕೆ ಮಾಡಿಕೊಳ್ಳಲಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬನ್ನೂರ ಗ್ರಾಮ ಪಂಚಾಯತಿ ಅಧ್ಯಕ್ಷೆ ಸುಶೀಲ ಹಿರೇಮಠ, ಉಪಾಧ್ಯಕ್ಷ ರಾಜಣ್ಣ ನಾಗನೂರ, ಮಾಜಿ ಅಧ್ಯಕ್ಷ ಯಲ್ಲಪ್ಪ ಮರಬದ, ತಾಲೂಕು ಯೋಜನಾಧಿಕಾರಿ ಸಚಿನ್, ಜಿಲ್ಲಾ ಜನಜಾಗೃತಿ ವೇದಿಕೆ ನಿಕಟಪೂರ್ವ ಅಧ್ಯಕ್ಷ ಅಶೋಕ ಕುಲಗೋಡ, ಸದಸ್ಯರಾದ ರಮೇಶ್ ಜಲಗೇರಿ, ಗ್ರಾಮದ ಮುಖಂಡರಾದ ಈರಯ್ಯ ವಸ್ತ್ರದ, ಚಂದ್ರಕಾಂತ ಬೊಗಾರ್, ಮಹಾಂತೇಶ್ ವಾಲಿ, ಸೋಮಲಿಂಗಪ್ಪ ಕುಂದ್ರಾಳ ಉಪಸ್ಥಿತರಿದ್ದರು.

# ಡಿಸಿಸಿ ಬ್ಯಾಂಕ ನಿರ್ದೇಶಕರಾಗಿ ಕಪ್ಪಲಗುದ್ದಿ ಆಯ್ಕೆ

**ಬೆಳಗಾವಿ:** ಸೋಮವಾರದಂದು ಅಧಿಕೃತವಾಗಿ ನಾಮಪತ್ರ ಹಿಂಪಡೆವ ಕೊನೆ ದಿನವಾದ ಪ್ರಯುಕ್ತ ಮೊದಲೇ ನಿರೀಕ್ಷಿಸಿದಂತೆ ಅವಿರೋಧವಾಗಿ ಅಧಿಕೃತವಾಗಿ ಮೂಡಲಗಿ ತಾಲೂಕಿನಿಂದ ಡಿಸಿಸಿ ಬ್ಯಾಂಕ ನಿರ್ದೇಶಕರಾಗಿ ಆಯ್ಕೆಯಾದ ನೀಲಕಂಠ ಬಸವರಾಜ ಕಪ್ಪಲಗುದ್ದಿ ಅವರು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹಾಗೂ ವಾಯುವ್ಯ ಸಾರಿಗೆ ನಿಗಮದ ಅಧ್ಯಕ್ಷ, ಶಾಸಕ ರಾಜು ಕಾಗೆ ಸಮ್ಮುಖದಲ್ಲಿ ಹಾಗೂ ಅವರ ಅಭಿಮಾನಿಗಳ ಜೊತೆಯಲ್ಲಿ 3 ನೇ ಬಾರಿಗೆ ಡಿಸಿಸಿ ಬ್ಯಾಂಕ ನಿರ್ದೇಶಕರಾದ ನೀಲಕಂಠ ಕಪ್ಪಲಗುದ್ದಿ ಸಂಭ್ರಮಾಚರಣೆ ಮಾಡಿದರು.



BELAGINA SURYODHYA KANNADA DAILY MORNING Editor, Printer, PUblisher and Owned By GURURAJ IRAPPA KADAM Plot No.2743 NEAR KEB POWER HOUSE RAMTEERTH NAGAR, SHIVAJI NAGAR BELAGAVI-590016
DIST-BELAGAVI,STATE KARNATAKA PRINTED At M/S LAXMI PRINTERS, No. 627,Auto Nagar,Belagavi,Dist- Belagavi Karnataka, RNI No. KARKAN/2019/77640, Volume : 07, Issue : 212, Postal Reg No. PMG/KA/NK/BM/135/25-27 / POST AT Vantamury Colony Post Office